ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 15 ಬುಧವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 354 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಪಾಲಿಕೆಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ ನಿರುತ್ಸಾಹ ಖಂಡಿಸಿ ಪ್ರತಿಭಟನೆ

ಮೈಸೂರು, ಏ.14(ಜಿಎ)–ಮೈಸೂರು ಮಹಾನಗರಪಾಲಿಕೆ ಮುಖ್ಯ ಕಚೇರಿಯಲ್ಲಿ ಡಾ.ಅಂಬೇಡ್ಕರ್ ಜಯಂತಿ ಆಚರಿಸಿಲ್ಲ ಎಂದು ಖಂಡಿಸಿ ಗಾಂಧಿನಗರ ಡಾ.ಬಿ.ಆರ್. ಅಂಬೇಡ್ಕರ್ ದಲಿತ ಮಹಾಸಭಾ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಬೆಳಗ್ಗೆ 8.30ಕ್ಕೂ ಮುನ್ನ ಮೈಸೂರು ನಗರದಾದ್ಯಂತ ಎಲ್ಲಾ ಸರ್ಕಾರಿ ಕಚೇರಿ, ಶಾಲಾ–ಕಾಲೇಜುಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಿ, ನಂತರ ಎಲ್ಲರೂ ಟೌನ್ ಹಾಲ್ ಮುಂಭಾಗದಲ್ಲಿ ಅಂಬೇಡ್ಕರ್ ಪ್ರತಿಮೆಗೆ ನಮನ ಸಲ್ಲಿಸಿ, ಕಲಾಮಂದಿರದ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಆದರೆ, ಪಾಲಿಕೆ ಕಚೇರಿಯಲ್ಲಿ ಮಾತ್ರ ಅಧಿಕಾರಿಗಳು ತಮ್ಮಲ್ಲಿ ಜಯಂತಿ ಆಚರಿಸದೆ ನೇರವಾಗಿ ಜಿಲ್ಲಾಡಳಿತದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಗಾಂಧಿನಗರದ ಡಾ.ಅಂಬೇಡ್ಕರ್ ದಲಿತ ಮಹಾಸಭಾ ಪದಾಧಿಕಾರಿಗಳು ಪ್ರತಿಭಟನೆ ಬಳಿಕ ಪಾಲಿಕೆ ಕಚೇರಿ ಆವರಣದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ದಲಿತ ಮಹಾಸಭಾ ಪದಾಧಿಕಾರಿಗಳಿಗೆ ಪಾಲಿಕೆ ಕಚೇರಿಯಲ್ಲಿ ಜಯಂತಿ ಆಚರಣೆ ಮಾಡಿಲ್ಲ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಕಚೇರಿ ಮುಂಭಾಗ ಜಮಾವಣೆಗೊಂಡರು. ಕಚೇರಿಯಲ್ಲಿದ್ದ ಭದ್ರತಾ ಸಿಬ್ಬಂದಿಗೆ ಪಾಲಿಕೆಯಲ್ಲಿ ಅಂಬೇಡ್ಕರ್ ಜಯಂತಿ ಮಾಡಿಲ್ಲವೇ ಎಂದು ಪ್ರಶ್ನಿಸಿದಾಗ ಅವರು ಇಲ್ಲ, ಎಲ್ಲರೂ ಟೌನ್ ಹಾಲ್ ಮತ್ತು ಕಲಾಮಂದಿರಕ್ಕೆ ತೆರಳಿದ್ದಾರೆ ಎಂದು ತಿಳಿಸಿದ್ದಾರೆ. ಈ ವೇಳೆ ಕಚೇರಿಯಲ್ಲಿದ್ದ ಅಧಿಕಾರಿಯನ್ನು ಕೇಳಿದ್ದಾರೆ, ಅವರೂ ಇಲ್ಲಿ ಮಾಡಲ್ಲ. ಕಲಾಮಂದಿರದಲ್ಲಿ ಮಾಡುತ್ತಾರೆ ಅಷ್ಟು ಸಾಕು ಅಲ್ಲವೇ ಎಂದು ಉದ್ಧಟತನದಿಂದ ವರ್ತಿಸಿದ್ದಾರೆ.

ನಂತರ ಸ್ಥಳಕ್ಕೆ ಪಾಲಿಕೆ ಉಪ ಆಯುಕ್ತ ಸೋಮಶೇಖರ್ ಜಿಗಣಿ ಇತರರು ಆಗಮಿಸಿ, ಪ್ರತಿಭಟನಾಕಾರರನ್ನು ಸಂತೈಸಲು ಮುಂದಾದರು. ಅದು ಫಲ ನೀಡಲಿಲ್ಲ. ಈ ನಡುವೆ ಪಾಲಿಕೆಯ ನಾಲ್ವಡಿ ಸಭಾಂಗಣದಲ್ಲಿ ಒಂದು ಕುರ್ಚಿ ಮೇಲೆ ಅಂಬೇಡ್ಕರ್ ಅವರ ಭಾವಚಿತ್ರ ಇರಿಸಿ, ಹೂವಿನ ಹಾರ ಹಾಕಿ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈ ಮಾಹಿತಿ ಪ್ರತಿಭಟನಾಕಾರರಿಗೆ ತಿಳಿಯುತ್ತಿದ್ದಂತೆ ಸಭಾಂಗಣಕ್ಕೆ ತೆರಳಿ ಸಂವಿಧಾನ ಶಿಲ್ಪಿಗೆ ನೀವು ಅವಮಾನ ಮಾಡುತ್ತಿದ್ದೀರಾ ತಕ್ಷಣ ಸ್ಥಳಕ್ಕೆ ಪಾಲಿಕೆ ಆಯುಕ್ತರು ಬರಬೇಕು ಎಂದು ಪಟ್ಟುಹಿಡಿದರು.

ಈ ನಡುವೆ ಉಪ ಆಯುಕ್ತರನ್ನು ಈ ಬಗ್ಗೆ ಪ್ರಶ್ನಿಸುತ್ತಿದ್ದಂತೆ ಅವರು ಉತ್ತರಿಸಲಾಗದೇ ಕಾರು ಹತ್ತಲು ಮುಂದಾದರು. ಅವರನ್ನು ಪ್ರತಿಭಟನಾಕಾರರು ತಡೆಯಲು ಮುಂದಾದಾಗ ಅವರು ತರಾತುರಿಯಲ್ಲಿ ಸ್ಥಳದಿಂದ ನಿರ್ಗಮಿಸಿದರು. ನಂತರ ಸ್ಥಳಕ್ಕೆ ಪಾಲಿಕೆ ಆಯುಕ್ತರು ಬರಬೇಕು ಎಂದು ಪ್ರತಿಭಟನೆ ಮುಂದುವರೆಸಿದರು.

ಮಧ್ಯಾಹ್ನ 1 ಗಂಟೆಗೆ ಸ್ಥಳಕ್ಕೆ ಮಾಜಿ ಮೇಯರ್ ಪುರುಷೋತ್ತಮ್ ಆಗಮಿಸಿ, ಮಾಹಿತಿ ಪಡೆದುಕೊಂಡು, ಮೈಸೂರು ನಗರದಾದ್ಯಂತ ಅಂಬೇಡ್ಕರ್ ಜಯಂತಿ ಅದ್ದೂರಿಯಾಗಿ ನಡೆಯುತ್ತಿದೆ. ಅದಕ್ಕೆ ಯಾವುದೇ ಕಪ್ಪುಚುಕ್ಕೆ ಬರಬಾರದು. ಆದ್ದರಿಂದ 2.30ಕ್ಕೆ ಪಾಲಿಕೆ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಿ ಎಲ್ಲರೂ ಸೇರಿ ಆಚರಿಸೋಣ ಎಂದು ಪಾಲಿಕೆ ಉಪ ಆಯುಕ್ತ ಸೋಮಶೇಖರ್ ಜಿಗಣಿ ಅವರಿಗೆ ತಿಳಿಸಿ, ಇಂದಿನ ಘಟನೆಗೆ ಕಾರಣರಾದ ಅಧಿಕಾರಿಗಳ ಮಾಹಿತಿ ಪಡೆದುಕೊಂಡು ನಾಳೆ ದೂರು ಸಲ್ಲಿಸೋಣ. ಆತನಿಗೆ ಶಿಕ್ಷೆ ಆಗಬೇಕು ಎಂದರು. ಬಳಿಕ ಪಾಲಿಕೆ ಕಚೇರಿಯಲ್ಲಿಯೂ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮೈಸೂರಿನ ನಾನಾ ಕಡೆ ಡಾ.ಅಂಬೇಡ್ಕರ್ ಜಯಂತಿ...



ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ನರಸಿಂಹರಾಜ ಕ್ಷೇತ್ರದ ಗಾಂಧಿನಗರದ ಬಳಿಯ ಡಾ.ಅಂಬೇಡ್ಕರ್ ವೃತ್ತದಲ್ಲಿನ ಅವರ ಪ್ರತಿಮೆಗೆ ಸಂಸದ ಯದುವೀರ್, ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮಾಜಿ ಉಪಮೇಯರ್ ವಿ.ಶೈಲೇಂದ್ರ ಸೇರಿದಂತೆ ಮತ್ತಿತರರ ಮುಖಂಡರು ಪುಷ್ಪ ನಮನ ಸಲ್ಲಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಚಲನಚಿತ್ರ ನಾಯಕ ನಟರೂ ಆದ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಮೈಸೂರು ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಮಹೇಶನಾಯಕ, ಅಧ್ಯಕ್ಷ ಅನಿಲ್‌ಕುಮಾರ್ ನಗರ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ನಾಗರತ್ನ, ಹನುಮಂತೇಗೌಡ, ಕೃಷ್ಣಮೂರ್ತಿರಾವ್, ಸೋಮೇಶ್, ಸುರೇಂದ್ರ, ಗಿರೀಶ್, ಸ್ವಾಮಿ ನಾರಾಯಣ ಇದ್ದರು.



ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಪುರಭವನದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಯುವ ಮುಖಂಡ ಹುಯಿಲಾಳು ಮಂಜುನಾಥ್‌ಪ್ರಸಾದ್, ಸವಿತಾ ಸಮಾಜ ನಗರಾಧ್ಯಕ್ಷ ಹರೀಶ್‌ರೆಡ್ಡಿ, ಪಡುವಾರಹಳ್ಳಿ ಗಣೇಶ್, ತೋಷಿತ್ ರಾಮಸ್ವಾಮಿ ಇದ್ದರು.



ಮೈಸೂರಿನ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಮಾಜಿ ಮೇಯರ್ ಪುರುಷೋತ್ತಮ್, ಪಿಎಸ್‌ಐ ಪ್ರತಿಭಾ ಜಂಗವಾಡ, ಎಎಸ್‌ಐ ಗೀತಾ, ಸಿಬ್ಬಂದಿ ಹಾಗೂ ಅಶೋಕಪುರಂನ ಮುಖಂಡರು ಉಪಸ್ಥಿತರಿದ್ದರು.



ಮೈಸೂರಿನ ರಾಜೇಂದ್ರನಗರದ ಕಣಿರಾಮಮಂದಿರ ಪಾರ್ಕ್ ನಿವಾಸಿಗಳು, ಸಾಮರಸ್ಯ ವೇದಿಕೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ರಘುಶೆಟ್ಟಿ, ಮುಖಂಡರಾದ ರಾಜಣ್ಣ, ಮಹದೇವಪ್ಪ, ಲಕ್ಷ್ಮಣ, ಡಾ.ಐಸಕ್ ರಾಜರತ್ನಂ, ಶ್ರೀನಿವಾಸ್, ಜಯರಾಂ, ಸಾಮಾಜಿಕ ಕಾರ್ಯಕರ್ತರಾದ ನಾಗೇಂದ್ರ, ಎಸ್.ಎಲ್.ಆನಂದ್ ಮತ್ತಿತರರು ಉಪಸ್ಥಿತರಿದ್ದರು.



ಸರ್ವಜನಾಂಗ ಹಿತರಕ್ಷಣಾ ವೇದಿಕೆ ವತಿಯಿಂದ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ವೇದಿಕೆ ರಾಜ್ಯಾಧ್ಯಕ್ಷ ವೇಣುಗೋಪಾಲ್ ಟೌನ್‌ಹಾಲ್ ಮುಂಭಾಗದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ವೇದಿಕೆ ಪದಾಧಿಕಾರಿಗಳಾದ ಹೋಮದೇವ, ಅಕ್ಷಯ್, ರಾಜು, ಸ್ವಾಮಿ, ಜಯಪ್ರಕಾಶ್ ಹೆಗಡೆ, ಚಿಕ್ಕತಾಯಮ್ಮ, ಬಬಿತ, ಮಹದೇವ ಇದ್ದರು.



ಮೈಸೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆಯ ಕೌಶಲ ತರಬೇತಿ ಕೇಂದ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ಭಾರತ ಜ್ಞಾನ ವಿಜ್ಞಾನ ಸಮಿತಿ ಕಾರ್ಯದರ್ಶಿ ವಜ್ರಮುನಿ, ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು, ಸುಬ್ರಮಣಿ, ಮುಖ್ಯೋಪಾಧ್ಯಾಯಿನಿ ಭ್ರಮರಾಂಭ, ಮಾಂತೇಶ, ಪದ್ಮ, ಬೃಂದಾಬಾಯಿ, ಚೈತ್ರಕುಮಾರಿ, ಸ್ಪರ್ಶ, ಲತಾ, ಪವನ್, ವಿದ್ಯಾವತಿ, ಮನು ಇದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಪುರಭವನದ ಆವರಣದಲ್ಲಿರುವ ಅವರ ಪ್ರತಿಮೆಗೆ ಶಾಸಕ ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಡಾ.ಕೆ.ತಿಮ್ಮಯ್ಯ ಅವರು ಮಾಲಾರ್ಪಣೆ ಮಾಡಿದರು. ಈ ವೇಳೆ ಕಾಂಗ್ರೆಸ್ ಎಸ್ಸಿ ವಿಭಾಗದ ಮುಖಂಡ ರಮೇಶ್, ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಇನ್ನಿತರರಿದ್ದರು.

ಮೈಮುಲ್‌ನಲ್ಲಿ ಡಾ.ಅಂಬೇಡ್ಕರ್ ಜಯಂತಿ ಆಚರಣೆ



ಮೈಮುಲ್ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಮೈಸೂರು,ಏ.14(ಎಂಕೆ)–ಮೈಸೂರಿನ ಬನ್ನೂರು ಮುಖ್ಯರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ಸಭಾಂಗಣದಲ್ಲಿ ಮಂಗಳವಾರ ಡಾ.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

> “ಸಂವಿಧಾನದಿಂದಾಗಿ ಗ್ರಾಮೀಣ ಭಾಗದಲ್ಲಿದ್ದ ಜಾತಿ–ಮತವೆಂಬ ತಾರತಮ್ಯ ಕಡಿಮೆಯಾಗುತ್ತಿದೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟದಿಂದ ಇಷ್ಟೆಲ್ಲಾ ಬದಲಾವಣೆ ಸಾಧ್ಯವಾಗಿದೆ. ಮಕ್ಕಳನ್ನು ಜಾತ್ಯಾತೀತರನ್ನಾಗಿ ಬೆಳೆಸೋಣ. ಮಕ್ಕಳಿಗೆ ಸಂವಿಧಾನ ಹಾಗೂ ಶಿಕ್ಷಣದ ಬಗ್ಗೆ ತಿಳಿಸೋಣ.
> –ಸೌಮ್ಯ, ಪ್ರಭಾರ ವ್ಯವಸ್ಥಾಪಕರು ಆಡಳಿತ ವಿಭಾಗ, ಮೈಮುಲ್

ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಮೈಮುಲ್ ಅಧ್ಯಕ್ಷ ಕೆ.ಈರೇಗೌಡ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬರಿ ವ್ಯಕ್ತಿಯಲ್ಲ. ಅವರು ಈ ದೇಶದ ಶಕ್ತಿ. ಅಪಾರ ಜ್ಞಾನ ಸಂಪತ್ತನ್ನು ಹೊಂದಿದ್ದ ಅವರ ವಿಚಾರಧಾರೆಗಳನ್ನು ಸದಾ ಸ್ಮರಿಸಿ, ಅವರು ತೋರಿದ ದಾರಿಯಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದರು.

ಅಂಬೇಡ್ಕರ್ ಯಾವುದೇ ಜಾತಿಗೆ ಸೀಮಿತವಾಗಿಲ್ಲ. ಹಾಗೆಂಯೇ ಅವರನ್ನು ಒಂದು ವರ್ಗಕ್ಕೆ ಸೀಮಿತಗೊಳಿಸಬಾರದು. ಅಂಬೇಡ್ಕರ್ ನೀಡಿದ ಸಂವಿಧಾನದಿಂದಾಗಿ ಎಲ್ಲರೂ ಸಮಾನತೆಯಿಂದ ಶಿಕ್ಷಣ ಪಡೆದು ಅಧಿಕಾರ ಪಡೆಯುವಂತಾಗಿದೆ ಎಂದರು.

ಡಾ.ಅಂಬೇಡ್ಕರ್ ಸಮಾಜದಲ್ಲಿ ಸಮಾನತೆ ತಂದಿದ್ದರಿಂದಲೇ ವರ್ಗೀಸ್ ಕುರಿಯನ್ ಅವರು ಹೈನೋದ್ಯಮ ಪರಿಚಯಿಸಿ ಎಲ್ಲರನ್ನೂ ಉಳಿಸಲು ಸಾಧ್ಯವಾಯಿತು. ಅವರು ಶ್ರಮ ಫಲ ನೀಡಬೇಕಾದರೆ ಮಕ್ಕಳಿಗೆ ಶಿಕ್ಷಣ ನೀಡಬೇಕು. ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಹೇಳಿದರು.

ಮೈಮುಲ್ ನಿರ್ದೇಶಕ ಓಂ ಪ್ರಕಾಶ್ ಮಾತನಾಡಿ, ಡಾ.ಅಂಬೇಡ್ಕರ್ ದೇಶದ ಸಂವಿಧಾನ ರಚನೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಎಲ್ಲರಿಗೂ ಸಂವಿಧಾನ ಬದ್ಧ ಹಕ್ಕು ಸಿಗುವಂತೆ ಮಾಡಿದ್ದಾರೆ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಮುನ್ನಲೆಗೆ ಬರಬೇಕೆಂಬ ಆಶಯವನ್ನು ಸಂವಿಧಾನ ಮೂಲಕ ನೀಡಿದ್ದಾರೆ. ಎಂದರು. ಮೈಮುಲ್ ನಿರ್ದೇಶಕ ಬಿ.ಎನ್.ಸದಾನಂದ, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯಕ್ ಹಾಗೂ ಒಕ್ಕೂಟದ ಎಲ್ಲಾ ವಿಭಾಗಗಳ ವ್ಯವಸ್ಥಾಪಕರು, ಉಪ ವ್ಯವಸ್ಥಾಪಕರು, ಪದಾಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಆರ್‌ಕೆವಿಕೆ ಕಾಲೇಜಲ್ಲಿ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಜನ್ಮ ದಿನಾಚರಣೆ



ರಾಮಕೃಷ್ಣ ವಿದ್ಯಾಕೇಂದ್ರ, ಆರ್.ಕೆ.ವಿ.ಕೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಮಂಗಳವಾರ ಡಾ.ಅಂಬೇಡ್ಕರ್ ಜನ್ಮದಿನ ಆಚರಿಸಲಾಯಿತು.

ಮೈಸೂರು,ಏ.14–ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ಆರ್.ಕೆ.ವಿ.ಕೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆ ಆಚರಿಸಲಾಯಿತು.

ಈ ವೇಳೆ ಆರ್‌ಕೆವಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಶಿವಪ್ಪ ಮಾತನಾಡಿ, ಡಾ.ಅಂಬೇಡ್ಕರ್ ಅವರು ಮಾನವತಾವಾದಿಯಾಗಿ ಪ್ರತಿಯೊಬ್ಬ ವ್ಯಕ್ತಿಗೆ ಸಮಾನತೆಯ ಹಕ್ಕನ್ನು ನೀಡಿ ಸಮಾಜದಲ್ಲಿ ಸರ್ವರೂ ಸಮಾನತೆಯಿಂದ ಸ್ವತಂತ್ರವಾಗಿ ಬದುಕಬೇಕೆಂದು ಪ್ರತಿಪಾದಿಸಿ ಅಂತೆಯೇ ಸಂವಿಧಾನದಲ್ಲಿ ಮಾನವ ಹಕ್ಕುಗಳನ್ನು ರಚಿಸಿ ಮಾನವತೆಯ ಸಾಕಾರಮೂರ್ತಿಯಾಗಿ ಇಂದಿಗೂ ಪ್ರಸ್ತುತವಾಗಿ ಎಲ್ಲರ ಮನದಲ್ಲೂ ಸಂವಿಧಾನಶಿಲ್ಪಿಯಾಗಿ ರಾರಾಜಿಸುತ್ತಿದ್ದಾರೆ ಎಂದು ಹೇಳಿದರು.

ಶ್ರೀ ರಾಮಕೃಷ್ಣ ಸೇವಾ ಸಂಘದ ಗೌರವ ಅಧ್ಯಕ್ಷ ಎಂ.ಪಾಪೇಗೌಡ ಮಾತನಾಡಿ, ಡಾ.ಅಂಬೇಡ್ಕರ್ ಅವರು ಸಮಾಜದ ಜಾತಿ ವ್ಯವಸ್ಥೆ ಬಗ್ಗೆ ಹೋರಾಡಿ ಸಮಾಜದಲ್ಲಿ ಸಮಾನತೆ ನೀಡುವಲ್ಲಿ ಮುಂಚೂಣಿಯಲ್ಲಿದ್ದರು ಎಂದು ತಿಳಿಸಿದರು.

ಶ್ರೀ ರಾಮಕೃಷ್ಣ ಸೇವಾ ಸಂಘದ ಖಜಾಂಚಿ ಹೆಚ್.ಜಿ.ರಮೇಶ್ ಮಾತನಾಡಿ, ಅಂಬೇಡ್ಕರ್‌ರವರ ಆದರ್ಶವನ್ನು ಶಿಕ್ಷಕರು ಅಳವಡಿಸಿಕೊಂಡು ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕೆಂದರು.

ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಪ್ರೊ.ಜಿ.ಚಂದ್ರಶೇಖರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್, ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ ಹಾಗೂ ಶಾಲಾ ಕಾಲೇಜಿನ ಅಧ್ಯಾಪಕ–ಅಧ್ಯಾಪಕೇತರರು ಉಪಸ್ಥಿತರಿದ್ದರು.



ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಪುರ ಭವನದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಜಿ ಕಾರ್ಪೊರೇಟರ್ ಆರ್.ಸೋಮಸುಂದರ್, ಮುಖಂಡರಾದ ಕೆರೆಹಳ್ಳಿ ವೆಂಕಟೇಶ, ಕನಕಮೂರ್ತಿ, ರಾಮಯ್ಯ ಇನ್ನಿತರರು ಮಾಲಾರ್ಪಣೆ ಮಾಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.4.2026 ಬುಧವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪೂರ್ವಭಾದ್ರ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್, ಕೊಲೆಸ್ಟ್ರಾಲ್, ಮಹಿಳೆಯರಲ್ಲಿ ಯೋನಿ ಸೋಂಕು, ಸಯಾಟಿಕ, ಗೃದ್ರಸಿ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಬಾಸುದೇವ ಸೋಮಾನಿ ಕಾಲೇಜು** : ಡಾ. ಬಿ.ಆರ್. ಅಂಬೇಡ್ಕರ್‌ರವರ 135ನೇ ವರ್ಷದ ಜಯಂತಿ, ಉದ್ಘಾಟನೆ : ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಭಾಷಣಕಾರರು : ನಿವೃತ್ತ ಹಿರಿಯ ಪ್ರಾಧ್ಯಾಪಕ ಪ್ರೊ. ಡಿ. ಆನಂದ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಜೆಎಸ್‌ಎಸ್ ಮಹಾವಿದ್ಯಾಪೀಠ** : 2023, 2024 ಹಾಗೂ 2025ನೇ ಸಾಲಿನ ಪ್ರಶಸ್ತಿಗಳ ಪ್ರದಾನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ. ಬಿ.ಎಸ್. ಮಂಜುನಾಥಸ್ವಾಮಿ, ಕಲಾವಿದರ ಪರಿಚಯ : ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ಎಂ.ಎಸ್. ಮೂರ್ತಿ, ಕೃತಿಗಳ ಪರಿಚಯ : ಧ್ವನಿ ಫೌಂಡೇಷನ್ ಅಧ್ಯಕ್ಷೆ ಡಾ. ಶ್ವೇತಾ ಮಡಪ್ಪಾಡಿ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಚಂದ್ರಕಾಂತ ಸಿ. ಬೆಲ್ಲದ, ಉದ್ಯಮಿ ಸತೀಶ್ ಪ್ರಫುಲ್ಲಚಂದ್ರ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 5ಕ್ಕೆ.

■ **ಭಗಿನಿ ಸಂಗೀತೋತ್ಸವ–2026** : ವಿದ್ವಾನ್ ಎಂ.ಬಿ. ಹರಿಹರನ್ ಮತ್ತು ವಿದ್ವಾನ್ ಎಸ್. ಅಶೋಕ್ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್–ವಯೋಲಿನ್, ವಿದ್ವಾನ್ ತುಮಕೂರು ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಪದ್ಮಜಾ ಶ್ರೀನಿವಾಸ ಆಡಿಟೋರಿಯಂ, ಬಿಎಸ್‌ಎಸ್ ವಿದ್ಯೋದಯ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ಶ್ರೀಪ್ರಸನ್ನ ಸುಂದರ ರಾಮ ಮಂದಿರ ಸೇವಾ ಸಮಿತಿ ಟ್ರಸ್ಟ್** : ಶ್ರೀ ಪರಾಭವ ನಾಮಸಂವತ್ಸರ 90ನೇ ವರ್ಷದ ಶ್ರೀರಾಮೋತ್ಸವ, ವಿದುಷಿ ಎಂ.ಎಸ್. ಸುಬ್ಬಲಕ್ಷ್ಮಿ ಇವರ ಮರಿ ಮೊಮ್ಮಕ್ಕಳಾದ ವಿದುಷಿ ಐಶ್ವರ್ಯ, ವಿದುಷಿ ಸೌಂದರ್ಯ ಮತ್ತು ತಂಡದವರಿಂದ ಶಾಸ್ತ್ರೀಯ ಸಂಗೀತ ದ್ವಂದ್ವ ಗಾಯನ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ಕ್ಕೆ

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ ಟ್ರಸ್ಟ್** : ಅಮೃತ ಮಹೋತ್ಸವ 'ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ', ಮುಖ್ಯ ಅತಿಥಿಗಳು : ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಸ್. ರಾಮಪ್ರಸಾದ್, ನೃತ್ಯ ಪ್ರದರ್ಶನಗಳು : ವಿದುಷಿ ನೇತ್ರ ಎಸ್. ಮತ್ತು ಶಿಷ್ಯರಿಂದ ದಶಾವತಾರ, ವಿದುಷಿ ಶ್ರೀ ಲಕ್ಷ್ಮಿಕುಮಾರ್ ಅವರ ಶಿಷ್ಯೆ ಶ್ರೀಮತಿ ಶುಭ ಶಂಕರ್, ಶ್ರೀಮತಿ ಹೆಚ್.ಆರ್. ಜಯಮ್ಮ ಅವರಿಂದ ಗಾಯನ ನಮನ, ವಿದುಷಿ ಭಾರತಿ ನಂದೀಶ್ ಮತ್ತು ಶಿಷ್ಯರು, ವಿದುಷಿ ಎಂ.ಎಸ್. ಶೃತಿ ಅವರಿಂದ ನೃತ್ಯ ಪ್ರದರ್ಶನಗಳು, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ. ಸಂಜೆ 5.45ರಿಂದ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು:** 2025–26ನೇ ಸಾಲಿನ ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಯುವ ರೆಡ್ ಕ್ರಾಸ್, ಎನ್‌ಸಿಸಿ ರೇಂಜರ್ಸ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿ: ಖ್ಯಾತ ಗಾಯಕ ಹಾಗೂ ನಟ ನವೀನ್ ಸಜ್ಜು, ಸಮಾರೋಪ ನುಡಿ : ಕೆಎಎಸ್ ಅಧಿಕಾರಿ ವಿ.ಆರ್.ಶೈಲಜ, ಅಧ್ಯಕ್ಷತೆ: ಕಾಲೇಜಿನ ಪ್ರಾಂಶುಪಾಲೆ ಪ್ರೊ.ಎಂ.ಎಸ್.ಅನಿತಾ, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10.30ಕ್ಕೆ.

■ **ರಂಗಾಂತರಂಗ ಮೈಸೂರು:** ಮಕ್ಕಳ ಬೇಸಿಗೆ ಶಿಬಿರ–2026, ಉದ್ಘಾಟನೆ: ರಂಗಾಯಣದ ಹಿರಿಯ ಕಲಾವಿದ ದೇವಜನ ಗೀತಾ ಮೋಂಟಡ್ಕ, ಅಧ್ಯಕ್ಷತೆ: ಶ್ರೀ ಕಾವೇರಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಸುಬ್ರಹ್ಮಣ್ಯ.ಸಿ.ಇ, ಮುಖ್ಯ ಅತಿಥಿ: ಲೇಖಕ ನಾ.ದಿವಾಕರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಂಗೇಗೌಡ.ಟಿ, ಸ್ಥಳ: ರಂಗಾಂತರಂಗ, ಕುವೆಂಪುನಗರ, ಸಂಜೆ 4 ಗಂಟೆಗೆ.

■ **ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಮೈಸೂರು:** ಶ್ರೀ ಶಿವಕುಮಾರ ಸ್ವಾಮಿಗಳ 119ನೇ ಜಯಂತಿ ಮಹೋತ್ಸವ ಹಾಗೂ ಶ್ರೀ ಸಿದ್ಧಗಂಗಾ ಸಿರಿ ಪ್ರಶಸ್ತಿ ಪ್ರದಾನ ಸಮಾರಂಭ, ದಿವ್ಯ ಆಶೀರ್ವಾದ: ಕುದೇರು ಮಠದ ಕಿರಿಯ ಶ್ರೀ ಇಮ್ಮಡಿ ಗುರುಲಿಂಗಸ್ವಾಮಿಗಳು, ಅಧ್ಯಕ್ಷತೆ: ಹಿರಿಯ ವೀರಗಾಸೆ ಕಲಾವಿದ ಅಂಬಳೆ ಶಿವಣ್ಣ, ಪ್ರಧಾನ ನುಡಿ: ಕವಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರಾಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ, ಸ್ಥಳ: ನಮನ ಕಲ್ಯಾಣ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವ ವಿದ್ಯಾನಿಲಯ, ಮಹಾರಾಜ ಕಾಲೇಜು:** 2025–26ನೇ ಸಾಲಿನ ಅಂತಿಮ ವರ್ಷದ ಬಿ.ಎ, ಬಿ.ಕಾಂ, ಬಿ.ಬಿ.ಎ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಅಧ್ಯಕ್ಷತೆ: ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ವಿ.ಷಣ್ಮುಗಂ, ಮುಖ್ಯ ಅತಿಥಿ: ನವೋದಯ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಡಾ.ರವಿ.ಎಸ್.ಆರ್, ಉಪಸ್ಥಿತಿ: ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಕೆ.ಎಸ್.ಗೋವಿಂದರಾಜು, ಸ್ಥಳ: ಜೂನಿಯರ್ ಬಿ.ಎ ಹಾಲ್, ಬೆಳಗ್ಗೆ 11ಕ್ಕೆ.

ಉದ್ಬೂರು ಹಾಡಿ, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಸಮಾಜ ಕಾರ್ಯ ಶಿಬಿರ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಉದ್ಘಾಟನೆ : ಶಾಸಕ ಅನಿಲ್ ಚಿಕ್ಕಮಾದು, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಉಪನಿರ್ದೇಶಕರಾದ ಶ್ರೀಮತಿ ಎಚ್.ಎಸ್. ಗಿರಿಜಾಂಬ, ವಿಶೇಷ ಆಹ್ವಾನಿತರು : ಯೋಜನಾ ಸಮನ್ವಯ ಅಧಿಕಾರಿ ಎಂ.ಕೆ. ಮಲ್ಲೇಶ್, ಅರಣ್ಯ ವಲಯಾಧಿಕಾರಿ ಎಸ್. ಹನುಮಂತರಾಜು, ಬೆಳಗ್ಗೆ 11ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 15 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 354 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಡಾ.ಅಂಬೇಡ್ಕರ್ ಉತ್ಸವ

ಅದ್ದೂರಿ ಮೆರವಣಿಗೆಯಲ್ಲಿ ಸಂವಿಧಾನ ಶಿಲ್ಪಿಯ ಪ್ರತಿಮೆಗೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ

ಮೈಸೂರು: ಮಂಗಳವಾರ ಮೈಸೂರಿನ ಅಶೋಕ ವೃತ್ತ (ಬಲ್ಲಾಳ್ ವೃತ್ತ)ದಿಂದ ಅಶೋಕ ಯೂತ್ ಅಸೋಸಿಯೇಷನ್ ಸೇರಿದಂತೆ ಹಲವು ಸಂಘಟನೆಗಳು ಸಂಯುಕ್ತವಾಗಿ ಆಯೋಜಿ ಸಿದ್ದ ಅಂಬೇಡ್ಕರ್ ಪ್ರತಿಮೆಯ ವರ್ಣರಂಜಿತ ಮೆರವಣಿಗೆ ಅತ್ಯಾಕರ್ಷಕವಾಗಿತ್ತು. ಈ ವೇಳೆ ಅಶೋಕ ವೃತ್ತದಲ್ಲಿ ಪುಷ್ಪಾಲಂಕಾರಗೊಂಡ ವಾಹನದಲ್ಲಿದ್ದ ಅಂಬೇಡ್ಕರ್ ಅವರ ಪ್ರತಿಮೆಗೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿಗೈಯ್ಯಲಾಯಿತು.

ಇಂದು ಬೆಳಿಗ್ಗೆ 11.55ಕ್ಕೆ ಸರಿಯಾಗಿ ಬೆಂಗಳೂರಿನಿಂದ ಬಂದ ಹೆಲಿಕಾಪ್ಟರ್‌ನಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪವೃಷ್ಟಿ ಗೈಯ್ಯಲಾಯಿತು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿದ್ದ ಸಂವಿಧಾನ ಪೀಠಿಕೆಯ ಮುಂಭಾಗ ಪ್ರತಿಷ್ಠಾಪಿಸಿದ್ದ ಅಂಬೇಡ್ಕರ್ ಪ್ರತಿಮೆಗೆ ಸುಮಾರು ಹತ್ತು ನಿಮಿಷಗಳ ಕಾಲ ಹೆಲಿಕಾಪ್ಟರ್ ಮೂಲಕ ಪುಷ್ಪಾರ್ಚನೆ ಮಾಡಲಾಯಿತು. ಈ ದೃಶ್ಯವನ್ನು ಕಣ್ತುಂಬಿಕೊಂಡ ಸಾವಿರಾರು ಜನರು ಅಂಬೇಡ್ಕರ್ ಅವರಿಗೆ ಜಯಘೋಷಗಳನ್ನು ಮೊಳಗಿಸಿದರು.

ಅಶೋಕ ವೃತ್ತದಲ್ಲಿದಲ್ಲಿ ಪುಷ್ಪ ಮಂಟಪ ನಿರ್ಮಿಸಲಾಗಿತ್ತು. ಮಂಟಪದ ಮಧ್ಯೆ ಅಂಬೇಡ್ಕರ್ ಅವರ ಪ್ರತಿಮೆ ಪ್ರತಿಷ್ಠಾಪಿಸಿದ್ದರೆ, ಅಕ್ಕ ಪಕ್ಕದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಗೌತಮ ಬುದ್ಧನ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು.

ತರುವಾಯ ಅಂಬೇಡ್ಕರ್ ಅವರ ಪ್ರತಿಮೆಯ ವರ್ಣರಂಜಿತ ಭವ್ಯ ಮೆರವಣಿಗೆ ಅಶೋಕ ವೃತ್ತದಿಂದ ಹೊರಟಿತು. ರಾಜ–ರಾಣಿ ಗೊಂಬೆ, ಹುಲಿ ವೇಷ, ಕೀಲು ಕುದುರೆ, ತಮಟೆ, ನಗಾರಿ, ಡೊಳ್ಳು ಕುಣಿತ ಸೇರಿದಂತೆ ಇತರೆ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು. ಆರ್‌ಟಿಓ ವೃತ್ತ, ಜೆಎಲ್ ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ ಬಸವೇಶ್ವರ ವೃತ್ತ ಸಯ್ಯಾಜಿರಾವ್ ರಸ್ತೆ ಕೆಆರ್.ವೃತ್ತ ಆಲ್ಬರ್ಟ್ ವಿಕ್ಟರ್ ವೃತ್ತ, ಚಾಮರಾಜ ಒಡೆಯರ್ ವೃತ್ತದ ಮೂಲಕ ಮೆರವಣಿಗೆಯು ಸಂಜೆ ಪುರಭವನ ತಲುಪಿತು. ಅಂತಿಮವಾಗಿ ನೂರಾರು ಮಂದಿ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.





ಮೈಸೂರಿನ ಅಶೋಕ ವೃತ್ತ (ಬಲ್ಲಾಳ್ ವೃತ್ತ) ದಿಂದ ಆರಂಭವಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯ ವರ್ಣರಂಜಿತ ಮೆರವಣಿಗೆಯಲ್ಲಿ ಮಂಗಳವಾರ ಸೇರಿದ್ದ ಸಹಸ್ರಾರು ಮಂದಿ (ಎಡಚಿತ್ರ). ಪುಷ್ಪಾಲಂಕಾರಗೊಂಡ ವಾಹನದಲ್ಲಿದ್ದ ಅಂಬೇಡ್ಕರ್ ಅವರ ಪ್ರತಿಮೆಗೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿಗೈಯ್ದ ದೃಶ್ಯವನ್ನು (ಬಲಚಿತ್ರ) ಕಾಣಬಹುದು.

ಶಿಕ್ಷಕರ ವರ್ಗಾವರ್ಗಿ

ಇಂದಿನಿಂದ ಪ್ರಕ್ರಿಯೆ ಆರಂಭ

ಬೆಂಗಳೂರು, ಏ.14(ಕೆಎಂಶಿ)– ಶಾಲಾ ಶಿಕ್ಷಣ ಇಲಾಖೆಯಿಂದ 2025–26ನೇ ಸಾಲಿನ ಸಹಾಯಧನ ಪಡೆಯುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಸರ್ಕಾರ ಅಧಿಕೃತ ಮಾರ್ಗಸೂಚಿ ಪ್ರಕಟಿಸಿದೆ.



ಮಾರ್ಗಸೂಚಿಗಳು ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪಾರದರ್ಶಕಗೊಳಿಸುವುದರ ಜೊತೆಗೆ, ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಯಾಗದಂತೆ ಮಾಡುವುದು ಇದರ ಉದ್ದೇಶ ವಾಗಿದೆ. ವೇಳಾಪಟ್ಟಿ ಪ್ರಕಾರ, ಅರ್ಜಿ ಸಲ್ಲಿಕೆ ಏಪ್ರಿಲ್ 15 ರಿಂದ ಮೇ 2ರವರೆಗೆ ನಡೆಯಲಿದೆ. ಪರಿಶೀಲನೆ ಏಪ್ರಿಲ್ 16 ರಿಂದ ಮೇ 8 ರವರೆಗೆ ನಡೆಯಲಿದ್ದು, ಕರಡುಪಟ್ಟಿ ಏಪ್ರಿಲ್ 30 ರಿಂದ ಮೇ 15 ರೊಳಗೆ ಸಿದ್ಧಗೊಳ್ಳಲಿದೆ.

ಅಂತಿಮ ಅನುಮೋದನೆ ಮೇ 2 ರಿಂದ 16ರವರೆಗೆ ನಡೆಯಲಿದ್ದು, ಮೇ 5 ರಿಂದ 30ರವರೆಗೆ ವರ್ಗಾವಣೆ ಜಾರಿ ಕಾರ್ಯ ನಡೆಯಲಿದೆ. ಅರ್ಹತೆ ಪ್ರಕಾರ, ಕನಿಷ್ಠ 35 ವರ್ಷ ಸೇವೆ ಪೂರ್ಣಗೊಳಿಸಿದ ಶಿಕ್ಷಕರಿಗೆ ಮಾತ್ರ ವರ್ಗಾವಣೆ ಅವಕಾಶ ನೀಡಲಾಗುವುದು. ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಕೆ ಕಡ್ಡಾಯವಾಗಿದ್ದು, ಪ್ರಸ್ತುತ ಶಾಲೆ ಹಾಗೂ ವರ್ಗಾವಣೆಯಾಗುವ ಶಾಲೆಯ ನಿರ್ವಹಣಾ ಮಂಡಳಿಗಳ ಒಪ್ಪಿಗೆ ಪತ್ರವನ್ನೂ ಸಲ್ಲಿಸಬೇಕಿದೆ. ವರ್ಗಾವಣೆ ಪ್ರಕ್ರಿಯೆ ಕರ್ನಾಟಕ ಶಿಕ್ಷಣ ಕಾಯಿದೆ 1983 ಹಾಗೂ 1999ರ ನಿಯಮಾವಳಿ ಅನ್ವಯ ನಡೆಯಲಿದ್ದು, ವಿಷಯಾಧಾರಿತ ಶಿಕ್ಷಕರ ಸಮತೋಲನ ಕಾಪಾಡುವುದು ಕಡ್ಡಾಯವಾಗಿದೆ. ತಪ್ಪು ದಾಖಲೆ ಸಲ್ಲಿಸಿದರೆ ಅರ್ಜಿ ತಿರಸ್ಕರಿಸಲಾಗುವುದು ಎಂದು ಇಲಾಖೆ ಸ್ಪಷ್ಟಪಡಿಸಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಲಿದೆ. ಜಿಲ್ಲಾ ಹಾಗೂ ತಾಲೂಕು ಶಿಕ್ಷಣಾಧಿಕಾರಿಗಳು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ಆದಿಚುಂಚನಗಿರಿ ಕ್ಷೇತ್ರಕ್ಕೆ ಪ್ರಧಾನಿ ಮೋದಿ ಭೇಟಿ; ಗುರು ಭೈರವೈಕ್ಯ ಮಂದಿರ ಲೋಕಾರ್ಪಣೆ



ಮಂಡ್ಯ : ಆದಿಚುಂಚನಗಿರಿ ಮಠದ 71ನೇ ಪೀಠಾಧಿಪತಿ ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿಯವರ ಗದ್ದುಗೆ ಇರುವ ಗುರು ಭೈರವೈಕ್ಯ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿ ಏ.15ರಂದು ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

■ 6ನೇ ಪುಟಕ್ಕೆ

ಬಿಹಾರದಲ್ಲಿ ನಿತೀಶ್ ಆಡಳಿತ ಅಂತ್ಯ

ಮೊದಲ ಬಿಜೆಪಿ ಸಿಎಂ ಆಗಿ ಸಾಮ್ರಾಟ್ ಚೌಧರಿ ಆಯ್ಕೆ!

ಪಾಟ್ನಾ, ಏ.14– ಬಿಹಾರ ರಾಜ್ಯದ ಮೊದಲ ಬಿಜೆಪಿ ಮುಖ್ಯಮಂತ್ರಿ ಆಗಿ ಸಾಮ್ರಾಟ್ ಚೌಧರಿ ಮಂಗಳವಾರ ಆಯ್ಕೆಯಾಗಿದ್ದಾರೆ. ಪಾಟ್ನಾದ ಲೋಕ ಭವನದಲ್ಲಿ ನಿತೀಶ್ ಕುಮಾರ್ ಸಿಎಂ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನಂತರ ಈ ಬೆಳವಣಿಗೆಯಾಗಿದೆ.



ಪಾಟ್ನಾದ ಬಿಜೆಪಿ ಕಚೇರಿಯಲ್ಲಿ ನಡೆದ ಪಕ್ಷದ ಶಾಸಕಾಂಗ ಸಭೆಯಲ್ಲಿ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರನ್ನು ನೂತನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ. ಎನ್ ಡಿಎ ಮೈತ್ರಿಕೂಟದ ಶಾಸಕರು ನೂತನ ಸಿಎಂಗೆ ಅಭಿನಂದನೆ ಸಲ್ಲಿಸಿದ್ದಾರೆ. ಸಾಮ್ರಾಟ್ ಚೌಧರಿ ಅವರು ಬಿಹಾರದ ಮೊದಲ ಬಿಜೆಪಿ ಸಿಎಂ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದಕ್ಕೂ ಮುನ್ನ ನಡೆದ ಸಚಿವ ಸಂಪುಟ ಸಭೆಯಲ್ಲಿ ■ 6ನೇ ಪುಟಕ್ಕೆ

ದಾವಣಗೆರೆ ದಕ್ಷಿಣ ದಂಗಲ್

ಸಿಎಂ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ವಜಾ

ಬೆಂಗಳೂರು, ಏ.14(ಕೆಎಂಶಿ)– ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ವಿಧಾನ ಪರಿಷತ್ ಸದಸ್ಯ ನಜೀರ್ ಅಹಮದ್ ಅವರನ್ನು ವಜಾಗೊಳಿಸಲಾಗಿದೆ.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡಲಿಲ್ಲ ಎಂಬ ಕಾರಣಕ್ಕೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಪ್ರಚಾರದಿಂದ ದೂರ ಉಳಿದಿದ್ದರು ಎಂಬ ಕಾರಣಕ್ಕೆ ಎಐಸಿಸಿ ನಜೀರ್ ಅವರ ತಲೆದಂಡವಾಗಿದೆ. ಪಕ್ಷದ ಆದೇಶದ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಜೀರ್ ಅವರನ್ನು ವಜಾ ಮಾಡಲಾಗಿದೆ. ಕಳೆದ ಎರಡು ದಿನಗಳ ಹಿಂದೆಯೇ ಕಾರ್ಯದರ್ಶಿ ■ 6ನೇ ಪುಟಕ್ಕೆ

ಟಿಪ್ಪರ್ ಡಿಕ್ಕಿ: ಕಾರಿನಲ್ಲಿದ್ದ ಮೂವರು ದುರ್ಮರಣ

- ರಾಷ್ಟ್ರೀಯ ಹೆದ್ದಾರಿ 766ರ ಮಲ್ಲಯ್ಯನಪುರ ಗೇಟ್ ಬಳಿ ದುರಂತ
- ಬಾಲಕನಿಗೆ ತೀವ್ರ ಗಾಯ; ರಸ್ತೆ ತಡೆದು ರೈತ ಸಂಘಟನೆ ಪ್ರತಿಭಟನೆ



ನಜ್ಜುಗುಜ್ಜಾದ ಕಾರು.

ಗುಂಡ್ಲುಪೇಟೆ, ಏ.14(ಸೋಮ್.ಜಿ)– ಟಿಪ್ಪರ್ ಹಾಗೂ ಕಾರು ಮುಖಾಮುಖಿ ಡಿಕ್ಕಿಯಾಗಿ ಕೇರಳಂ ಮೂಲದ ಮೂವರು ಸಾವನ್ನಪ್ಪಿ, ಬಾಲಕನೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಮಲ್ಲಯ್ಯನಪುರ ಗೇಟ್ ಬಳಿ ರಾಷ್ಟ್ರಿಯ ಹೆದ್ದಾರಿ 766ರಲ್ಲಿ ಮಂಗಳವಾರ ಮಧ್ಯಾಹ್ನ ಸಂಭವಿಸಿದೆ.

ಕೇರಳಂನ ಖಾಸಗಿ ಸಂಸ್ಥೆ ಉದ್ಯೋಗಿ ಮಹಮ್ಮದ್ ಅಜೀರ್(37), ಇವರ ಸಹೋದರಿ ಆಯಿಷಾ ನೂರ್(41) ಹಾಗೂ ಆಯಿಷಾ ಪುತ್ರಿ ನುಹ ಮುಬಾರಕ್(18) ಅಪಘಾತದಲ್ಲಿ ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿರುವ ಆಯಿಷಾ ಪುತ್ರ ನಹಿಯ ಮುಬಾರಕ್(9)ನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೇರಳಂನಿಂದ ಮಹಮ್ಮದ್ ಅಜೀರ್ ತನ್ನ ಅಕ್ಕ ಹಾಗೂ ಆಕೆ ಮಕ್ಕಳೊಂದಿಗೆ ಮೈಸೂರಿಗೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಎದುರಿನಿಂದ ವೇಗವಾಗಿ ಬಂದ ಟಿಪ್ಪರ್ ಡಿಕ್ಕಿ ಹೊಡೆದು, ಈ ದುರಂತ ಸಂಭವಿಸಿದೆ. ಆಯಿಷಾ ಹಾಗೂ ನುಹ ಮುಬಾರಕ್ ಸ್ಥಳದಲ್ಲೇ ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿದ್ದ ಮಹಮ್ಮದ್ ಹಾಗೂ ನಹಿಯ ಮುಬಾರಕ್‌ನನ್ನು ಮೈಸೂರಿನ ಆಸ್ಪತ್ರೆಗೆ ಕರೆದೊಯ್ದು, ದಾಖಲಿಸಲಾಯಿತು. ಆದರೆ ಮಹಮ್ಮದ್ ಚಿಕಿತ್ಸೆ ■ 6ನೇ ಪುಟಕ್ಕೆ

ಶೋಷಣೆ ತೊಲಗಲು ಶಿಕ್ಷಣವೇ ಪ್ರಬಲ ಅಸ್ತ್ರ: ಡಾ.ಬಿ.ಆರ್.ಅಂಬೇಡ್ಕರ್ ಬಲವಾದ ನಂಬಿಕೆ

- ಸಿಎಂ ಸಿದ್ದರಾಮಯ್ಯ ಸ್ಮರಣೆ
- ಅಸಮಾನತೆ ತೊಲಗದೇ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ

ಬೆಂಗಳೂರು, ಏ.14(ಕೆಎಂಶಿ)– ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿದ ಸಂವಿಧಾನದಿಂದಲೇ ನಾನು ರಾಜ್ಯದ ಮುಖ್ಯಮಂತ್ರಿ ಆಗಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.



ವಿಧಾನಸೌಧದಲ್ಲಿ ಡಾ.ಅಂಬೇಡ್ಕರ್ ಪುತ್ಥಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು.

ಸಂವಿಧಾನಶಿಲ್ಪಿ, ಭಾರತ ರತ್ನ, ಮಹಾನ್ ಮಾನವತಾವಾದಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮ ದಿನಾಚರಣೆ ಹಾಗೂ ಡಾ. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಜಾತಿ ವ್ಯವಸ್ಥೆ ಇರುವವರೆಗೂ ಅಸ್ಪೃಶ್ಯತೆ ಇರುತ್ತದೆ. ಸಾಮಾಜಿಕ, ಆರ್ಥಿಕ ಅಸಮಾನತೆ ಇರುವವರೆಗೆ ಜಾತೀಯತೆ ಇರುತ್ತದೆ ಎಂಬುದಾಗಿ ಡಾ.ಅಂಬೇಡ್ಕರ್ ಹೇಳಿದ್ದರು.

ಎಲ್ಲಾ ದಮನಿತರ, ಪರಿಶಿಷ್ಟ ವರ್ಗಗಳ, ಶೋಷಿತರ, ಅವಕಾಶವಂಚಿತ ಜನರ ಪರ ಡಾ.ಅಂಬೇಡ್ಕರ್ ಜೀವನದುದ್ದಕ್ಕೂ ಹೋರಾಟ ಮಾಡಿದರು. ಕೇವಲ ದಲಿತರ ನಾಯಕರಾಗಿರದೆ ಅವಕಾಶವಂಚಿತರ, ದೌರ್ಜನ್ಯಕ್ಕೆ ಒಳಗಾದ ಎಲ್ಲರ ಪರವಾಗಿದ್ದರು ಎಂದರು. ಡಾ. ಅಂಬೇಡ್ಕರ್ ದೇಶಕ್ಕೆ ನೀಡಿದ ಸಂವಿಧಾನದ ಮೂಲಕ ಎಲ್ಲಾ ಭಾರತೀಯರಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಆದ್ದರಿಂದಲೇ ದೇಶದ ಸಂವಿಧಾನ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ಎಂಬುದಾಗಿ ಪರಿಗಣಿಸಲಾಗುತ್ತದೆ. ಸಂಪೂರ್ಣ ಸಮಾನತೆ ಸಾಧಿಸಲಾಗಿಲ್ಲ ಎನ್ನುವುದು ನೋವಿನ ಸಂಗತಿಯಾಗಿದೆ. ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಸಮಾಜದಿಂದ ಹೋಗಲಾಡಿಸದಿದ್ದರೆ ದೇಶದ ಸ್ವಾತಂತ್ರ್ಯ ಯಶಸ್ವಿಯಾಗಲಾರದು ಎಂಬುದು ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಒಬ್ಬ ವ್ಯಾಪಾರಿ ಸಾಯುವ ಸ್ಥಿತಿಯಲ್ಲಿ :
ಮಗಾ, ನನ್ನ ನೋಡೋಕೆ ಯಾರ್‍ಯಾರು ಬಂದಿದ್ದಾರೆ?
ಅವನ ಮಗ : ಅಮ್ಮಾ, ತಂಗಿ, ನಾನು ಎಲ್ಲರೂ ಬಂದಿದ್ದೀವಿ ಅಪ್ಪಾ.
ವ್ಯಾಪಾರಿ : ಎಲ್ಲರೂ ಇಲ್ಲೇ ಇದ್ರೆ, ಅಂಗಡಿಯಲ್ಲಿ ಯಾರಿದ್ದಾರೆ...!?

ಮೈಸೂರು ಮಿತ್ರ

ಬುಧವಾರ, ಏಪ್ರಿಲ್ 15, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಎಲ್ಲರೂ ನನ್ನನ್ನು ಇಷ್ಟಪಡುತ್ತಾರೆ ಎಂಬುದು ಆತ್ಮವಿಶ್ವಾಸವಲ್ಲ. ಯಾರೂ ನನ್ನನ್ನು ಇಷ್ಟಪಡದಿದ್ದರೂ ನಾನು ಸಂತಸದಿಂದ ಇರುತ್ತೇನೆ ಎಂಬುದು ಆತ್ಮವಿಶ್ವಾಸ. ಇಂಥ ಆತ್ಮವಿಶ್ವಾಸವೇ ನಮ್ಮನ್ನು ಗಟ್ಟಿಗೊಳಿಸುವುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯೋದೆಲ್ಲ ಚಿನ್ನ ಅಲ್ಲ.

ನಿಮ್ಮ ಪತ್ರಗಳು

ಧರ್ಮರಾಯ... ಭೀಮಸೇನ ಮತ್ತು ಮಂತ್ರಿಗಳು!

ಮಾನ್ಯರೆ,

ನನ್ನ ನೇತೃತ್ವದಲ್ಲಿಯೇ ಮುಂದಿನ ಚುನಾವಣೆ!

ಮುಂದಿನ ಮುಖ್ಯಮಂತ್ರಿ ನಾನೇ.... ಇಂತಹ ಹೇಳಿಕೆಗಳನ್ನು ಬಹುತೇಕ ರಾಜಕಾರಣಿಗಳು ಹೇಳುತ್ತಲೇ ಇದ್ದಾರೆ.ಇವರ ಮಾತುಗಳನ್ನು ಕೇಳುವಾಗ ಮಹಾಭಾರತದ ಪ್ರಸಂಗವೊಂದು ನೆನಪಾಗುತ್ತದೆ.

ಧರ್ಮರಾಯ ಜನತಾ ದರ್ಶನ ನಡೆಸುತ್ತಿದ್ದ. ತಮ್ಮ ಕಷ್ಟ ಹೇಳಿಕೊಳ್ಳುತ್ತಾ ಪರಿಹಾರ ಕೋರುತ್ತಾ ನೂರಾರು ಪ್ರಜೆಗಳು ಸಾಲಾಗಿ ನಿಂತು ಧರ್ಮರಾಜನಲ್ಲಿ ಮೊರೆಯಿಡುತ್ತಿದ್ದರು. ಧರ್ಮರಾಯ ಅವರ ಬೇಡಿಕೆಗೆ ತಕ್ಕಂತೆ ಪರಿಹಾರ ನೀಡುತ್ತಿದ್ದ. ಸೂರ್ಯಾಸ್ತವಾಗುತ್ತಾ ಬಂತು.ಅಷ್ಟು ಹೊತ್ತಿಗೆ ಪ್ರಜೆಯೊಬ್ಬ ಬಂದು ತನ್ನ ಸಂಕಷ್ಟ ತೋಡಿಕೊಂಡ.ಸಹಾಯ ಮಾಡುವಂತೆ ಧರ್ಮರಾಯನನ್ನು ಕೋರಿಕೊಂಡ. ಇದಕ್ಕೆ ಪ್ರತಿಕ್ರಿಯೆ ನೀಡಿದ ಧರ್ಮರಾಯ 'ಈಗ ಸೂರ್ಯಾಸ್ತದ ಸಮಯ ವಾಯಿತು. ನೀನು ನಾಳೆ ಬಾ.ನಾಳೆ ನಾನು ನಿನಗೆ ಸಹಾಯ ಮಾಡುತ್ತೇನೆ' ಎಂದ.

ಧರ್ಮರಾಯನ ಮಾತು ಕೇಳಿದ ತಕ್ಷಣ ಅಲ್ಲಿಯೇ ಇದ್ದ ಭೀಮಸೇನ ಕಿಸಕ್ಕೆಂದು ನಕ್ಕುಬಿಟ್ಟ, ಧರ್ಮರಾಯನಿಗೆ ಇರಿಸು ಮುರುಸಾಗಿ ಭೀಮಸೇನನನ್ನು ಕೇಳಿದ 'ನೀನು ನಕ್ಕಿದ್ದೇಕೆ?' ಭೀಮಸೇನ ಹೇಳಿದ 'ನೀನು ಆತನಿಗೆ ನಾಳೆ ಬಾ ನಿನಗೆ ಸಹಾಯ ಮಾಡುತ್ತೇನೆ ಎಂದು ಹೇಳಿದೆಯಲ್ಲಾ ಅದಕ್ಕಾಗಿ ನಗುಬಂತು ನಕ್ಕೆ' ಧರ್ಮರಾಯನಿಗೆ ಅರ್ಥವಾಗಲಿಲ್ಲ.

'ಅದರಲ್ಲಿ ನಗುವ ವಿಚಾರ ಏನಿದೆ?' ಎಂದು ಪ್ರಶ್ನಿಸಿದ ಧರ್ಮರಾಯ.

ಅದಕ್ಕೆ ಭೀಮಸೇನ ನೀಡಿದ ಉತ್ತರ ಮಾರ್ಮಿಕವಾಗಿತ್ತು.

'ಅಣ್ಣಾ,ನೀನು ಆತನಿಗೆ ನಾಳೆ ಸಹಾಯ ಮಾಡುತ್ತೇನೆಂದು ಭರವಸೆ ನೀಡಿದೆಯಲ್ಲಾ? ನೀನು ನಾಳೆಯವರೆಗೆ ಬದುಕಿರುತ್ತೀಯೆಂಬ ಭರವಸೆ ನಿನಗಿದೆಯೇ?ಈ ವಿಷಯ ಯೋಚಿಸಿ ನಗು ಬಂತು ಅಷ್ಟೇ ' ಎಂದ ಭೀಮಸೇನ. ಮಹಾಭಾರತದ ಈ ಪ್ರಸಂಗ ಇಂದಿಗೂ ಪ್ರಸ್ತುತವಲ್ಲವೇ?

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಮೈಸೂರಿನ ಅಭಿವೃದ್ಧಿ ನೆಪದಲ್ಲಿ ನಿರ್ಲಕ್ಷ್ಯ ಸರಿಯಲ್ಲ

ಮಾನ್ಯರೆ,

ಮೈಸೂರಿನ ಪ್ರವಾಸ ಅಂದರೆ ಈ ಹಿಂದೆಲ್ಲ ಎಷ್ಟೊಂದು ಖುಷಿ ಕೊಡುತ್ತಿತ್ತು. ಅದಕ್ಕೆ ಸಾಕಷ್ಟು ಕಾರಣಗಳೂ ಇದ್ದವು. ಅದರಲ್ಲೂ ಬೆಂಗಳೂರು ಮಹಾನಗರ ದಿಂದ ಮೈಸೂರಿಗೆ ಬಂದಾಕ್ಷಣ ಏನೋ ಒಂದು ರೀತಿಯ ಭಿನ್ನ ಮತ್ತು ಸುಖದ ಅನುಭವ ಆಗುತ್ತಿತ್ತು. ಸ್ವಚ್ಛ ಮತ್ತು ಅಗಲವಾದ ರಸ್ತೆಗಳು, ಪಕ್ಕದಲ್ಲಿ ಹಸಿರಾಗಿ ನಿಂತಿರುವ ಗಿಡಗಳು, ವಾಹನ ದಟ್ಟಣೆಯೂ ತೀರಾ ಕಡಿಮೆ ಹೀಗಾಗಿ ಟ್ರಾಫಿಕ್ ಜಾಮ್ ಅನುಭವವೇ ಆಗದಿರುವುದು, ಸ್ವಚ್ಛ, ಅಹ್ಲಾದಕರ ಹವೆ ಇತ್ಯಾದಿ.

ಆದರೆ ಅದೇಕೋ ಈ ಬಾರಿ ಮೈಸೂರು ಭೇಟಿಯಾದಾಗಿನ ಅನುಭವವೇ ತೀರಾ ಭಿನ್ನವಾಗಿತ್ತು. ರಸ್ತೆಗಳನ್ನೆಲ್ಲ ಕಂಡ ಕಂಡಲ್ಲಿ ಅಗೆದಿದ್ದು, ರಸ್ತೆಗಳ ಮಧ್ಯೆಯೇ ಪೈಪ್ ಜೋಡಣೆ, ಸುಂದರವಾದ ಡಾಂಬರ್ ರಸ್ತೆಯ ಮೇಲೇ ಮಣ್ಣಿನ ರಾಶಿಗಳು, ಹೊಸ ಹೊಸ ಕಟ್ಟಡಗಳ ನಿರ್ಮಾಣವಾಗುತ್ತಿರುವುದರಿಂದ, ವಿದ್ಯುತ್, ನೀರು ಪಡೆಯಲು ರಸ್ತೆಯನ್ನೇ ಅಗೆದು, ಅರ್ಧದಲ್ಲೇ ಬಿಟ್ಟಿರುವುದು, ವಾಹನ ಚಾಲಕರಿಗಷ್ಟೇ ಅಲ್ಲ ಪಾದಾಚಾರಿಗಳಿಗೂ ಕಿರಿ ಕಿರಿ ಅನುಭವ.

ಜಯಲಕ್ಷ್ಮಿಪುರಂ ಒಂದರ ಉದಾಹರಣೆ ತೆಗೆದುಕೊಂಡರೂ ಇಂದಿನ ಸ್ಥಿತಿಯ ಪರಿಚಯ ಆಗುವಂತಿದೆ. ಚಂದ್ರಕಲಾ ಆಸ್ಪತ್ರೆ ಸಮೀಪ, ಪ್ರಿಮೀಯರ್ ಮೆಟ್ರೊ ಪೋಲ್ ಅಪಾರ್ಟ್‌ಮೆಂಟ್ ಪಕ್ಕದ ರಸ್ತೆ, ಗ್ರೀನ್ ಹೋಟೆಲ್ ಸಮೀಪದ ಪಾರ್ಕ್‌ಗೆ ಹೊಂದಿಕೊಂಡ ರಸ್ತೆಯ ಪಕ್ಕದಲ್ಲೇ ನೀರಿನ ಬುಗ್ಗೆ !

ಹೀಗೇಕೆ ಅಂತ ಕೇಳಬಹುದೆ? ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಅವಾಂತರ ಅಂದರೆ ಸರಿ ಹೋದೀತೆ? ರಸ್ತೆ ಮಧ್ಯ ಅಗೆದ ಮೇಲೆ ಅದನ್ನು ಮುಚ್ಚಬೇಕು ಎಂಬ ಸಾಮಾನ್ಯ ತಿಳುವಳಿಕೆಯೂ ಸಂಬಂಧಪಟ್ಟವರಿಗೆ ಇಲ್ಲದೇ ಹೋಯಿತೆ? ಇದೇ ರೀತಿ ಮುಂದುವರಿದರೆ, ಬೆಂಗಳೂರಿಗೂ, ಮೈಸೂರಿಗೂ ಯಾವುದೇ ವ್ಯತ್ಯಾಸ ಇರದು. ಮೈಸೂರಿನ ಬಗ್ಗೆ ಇದ್ದ ಅಭಿಪ್ರಾಯವೇ ಬದಲಾಗುವುದರಲ್ಲಿ ಅನುಮಾನವೇ ಇಲ್ಲ. ಇವೆಲ್ಲ ಸಣ್ಣ ವಿಷಯ ಅಂತ ಆಡಳಿತಗಾರರಿಗೆ ಅನಿಸಿದ್ದರೂ ಸಾಕು. ಆದರೆ ಇದು ಅವರು ತಿಳಿದಷ್ಟು ಸಣ್ಣ ವಿಷಯವೂ ಅಲ್ಲ. ನಿರ್ಲಕ್ಷಿಸುವ ವಿಷಯವೂ ಅಲ್ಲ. ಮೈಸೂರಿನ ಅಂದ – ಚಂದ ಉಳಿಯಬೇಕೆಂದರೆ ಈ ಎಲ್ಲಾ ಸಂಗತಿಗಳ ಬಗ್ಗೆ ಕಾಳಜಿ ಇರಲೇಬೇಕು. ಇಲ್ಲವೆಂದರೆ ಈ ಸುಂದರ ನಗರದ ಇಮೇಜೇ ಬದಲಾದೀತು !

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

ಜನಗಣತಿ ರಾಷ್ಟ್ರೀಯ ಅಭಿಯಾನ ಯಶಸ್ಸಿಗೆ ಸಹಕರಿಸಿ


ಮಾನ್ಯರೇ,

ಜನಗಣತಿಯು ದೇಶದ ಏಳಿಗೆಯ ದಿಕ್ಸೂಚಿ. ಈ ಮಹತ್ವದ ಕಾರ್ಯದಲ್ಲಿ ಗಣತಿದಾರರು ತಮ್ಮ ವ್ಯಾಪ್ತಿಯ ಪ್ರತಿಯೊಂದು ಮನೆಗೂ ಭೇಟಿ ನೀಡಬೇಕು. ಗುರುತಿನ ಚೀಟಿ ಧರಿಸಿ, ಸೌಜನ್ಯದಿಂದ ಮಾಹಿತಿ ಸಂಗ್ರಹಿಸಿ. ಮನೆ ಬಾಗಿಲು ಮುಚ್ಚಿದ್ದರೆ ಮರು ಭೇಟಿ ನೀಡಿ ಮಾಹಿತಿ ಪಡೆಯುವುದು ನಿಮ್ಮ ಬದ್ಧತೆಯಾಗಿರಲಿ. ಊಹೆಗಳಿಗೆ ಅವಕಾಶ ನೀಡದೆ ವಾಸ್ತವವನ್ನೇ ಆ್ಯಪ್‌ನಲ್ಲಿ ದಾಖಲಿಸಿ ಹಾಗೂ ಜನರ ಖಾಸಗಿ ಮಾಹಿತಿಯ ಗೌಪ್ಯತೆ ಕಾಪಾಡಿ. ಆನ್‌ಲೈನ್‌ನಲ್ಲಿ ಮಾಹಿತಿ ನೀಡಿದವರಿಂದ ರೆಫರೆನ್ಸ್ ಸಂಖ್ಯೆ ಪಡೆದು ಕೆಲಸ ಸುಲಭವಾಗಿಸಿಕೊಳ್ಳಿ. ನಾಗರಿಕರು ನಿಖರ ಮಾಹಿತಿ ನೀಡಿ ಈ ರಾಷ್ಟ್ರೀಯ ಅಭಿಯಾನವನ್ನು ಯಶಸ್ವಿಗೊಳಿಸುವುದು ಇಂದಿನ ಅಗತ್ಯವಾಗಿದೆ.

ಸಾರ್ವಜನಿಕರು ಏಪ್ರಿಲ್ 15ರವರೆಗೆ ಸ್ವಯಂ ಗಣತಿ ಮಾಡಿಕೊಳ್ಳಲು ಅವಕಾಶವಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಬೇಕು. ತದನಂತರ ಏಪ್ರಿಲ್ 16ರಿಂದ ಒಂದು ತಿಂಗಳ ಕಾಲ ಮೊದಲ ಹಂತವಾಗಿ ಮನೆಪಟ್ಟಿ ಹಾಗೂ ಮನೆ ಗಣತಿ ಕಾರ್ಯ ನಡೆಯಲಿದ್ದು, ಪ್ರತಿಯೊಬ್ಬರೂ ಗಣತಿದಾರರಿಗೆ ಸಹಕರಿಸಬೇಕು. ಈ ಬಗ್ಗೆ ಕಾಲರ್ ಟ್ಯೂನ್ ಹಾಗೂ ಸ್ವಚ್ಛತಾ ವಾಹನಗಳ ಮೂಲಕ ಜಾಗೃತಿ ಮೂಡಿಸುವುದು ಅಭಿಯಾನಕ್ಕೆ ಸಹಕಾರಿ. ಮುಖ್ಯವಾಗಿ, ಗಣತಿಯಿಂದ ಸರ್ಕಾರಿ ಸೌಲಭ್ಯಗಳು ಅಥವಾ ರೇಷನ್ ಕಾರ್ಡ್ ರದ್ದಾಗುತ್ತದೆ ಎಂಬ ತಪ್ಪು ತಿಳುವಳಿಕೆ ಬೇಡ. ನಿಮ್ಮ ಮಾಹಿತಿಯು ದೇಶದ ಭವಿಷ್ಯದ ಯೋಜನೆಗಳಿಗೆ ಮಾತ್ರ ಬಳಕೆಯಾಗಲಿದ್ದು, ಎಲ್ಲರೂ ಈ ಮಹತ್ಕಾರ್ಯದಲ್ಲಿ ಪಾಲ್ಗೊಳ್ಳೋಣ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಅಮೂಲ್ಯ ನೆನಪುಗಳ ಪ್ರೇಂ....



–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ

ಮಹಾರಾಣಿ ವಾಣಿ ವಿಲಾಸ ಸನ್ನಿಧಾನ ಕೆಂಪನಂಜಮ್ಮಣ್ಣಿ ದೇವಿ (ಜುಲೈ 4, 1866–ಜುಲೈ 7, 1934) ಅವರು ಕಳಲೆ ಗ್ರಾಮದಿಂದ ಒಡೆಯರ್ ರಾಜವಂಶಕ್ಕೆ ಸೊಸೆಯಾದವರಲ್ಲಿ ಬಹುಶಃ ಕೊನೆಯವರಿರಬೇಕು.

ಇದಕ್ಕೂ ಹಿಂದಿನ ಹಲವು ಒಡೆಯರ್ ಆಡಳಿತಗಾರರು ತಮ್ಮ ವಧುಗಳನ್ನು ಈ ನಿರ್ದಿಷ್ಟ ಹಳ್ಳಿಯಿಂದ ಆಯ್ಕೆ ಮಾಡಿದ್ದರು. ಜೊತೆಗೆ ಈ ಹಳ್ಳಿಯ ಹೆಚ್ಚಿನ ಸಂಖ್ಯೆಯಲ್ಲಿದ್ದ ಯುವಕರು ಅರಮನೆಯಲ್ಲಿ ಆಡಳಿತಗಾರರ ವೈಯಕ್ತಿಕ ಅಂಗರಕ್ಷಕರಾಗಿ ಉದ್ಯೋಗ ಪಡೆಯುತ್ತಿದ್ದರು.

ವಾಣಿ ವಿಲಾಸ ಸನ್ನಿಧಾನ ಅವರು ಕಳಲೆಯ ನರಸೆ ಅರಸ್ ಅವರ ಪುತ್ರಿ, ನರಸೆ ಅರಸರು ಕಳಲೆಯನ್ನು ವಂಶ ಪಾರಂಪರ್ಯವಾಗಿ ಬಂದಂತಹ ಆಡಳಿತ ಮಾಡುತ್ತಿದ್ದ ಪಾಳೇಗಾರರು. ಈ ಗ್ರಾಮದಲ್ಲಿರುವ ಭವ್ಯ ಲಕ್ಷ್ಮೀಕಾಂತಸ್ವಾಮಿ ದೇವಾಲಯವು ಒಂದು ಕಾಲದಲ್ಲಿ ಈ ಪ್ರದೇಶ ಮೈಸೂರು ಸಂಸ್ಥಾನದೊಂದಿಗೆ ಸಂಪರ್ಕ ಹೊಂದಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.

ಈ ಅಪರೂಪದ ಛಾಯಾಚಿತ್ರದಲ್ಲಿ ವಾಣಿ ವಿಲಾಸ ಸನ್ನಿಧಾನ ಅವರು ಮೈಸೂರು ಶೈಲಿಯ ಸೀರೆ ಧರಿಸಿ ಸೊಗಸಾಗಿ ಕುರ್ಚಿ ಮೇಲೆ ಕುಳಿತಿದ್ದರೆ, ಅವರ ಹಿರಿಯ ಪುತ್ರ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದ್ವಿತೀಯ ಪುತ್ರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಕ್ರಮವಾಗಿ ನೆಲದ ಮೇಲೆ ತಾಯಿಯ ಪಾದದ ಬಳಿ ಕುಳಿತಿದ್ದಾರೆ.

ಇದು ಸ್ಟುಡಿಯೋ ಶೈಲಿಯ ಛಾಯಾಚಿತ್ರವಾಗಿದ್ದು, ಹಿಂಬದಿಯಲ್ಲಿ ಕೃತಕ ಹಿನ್ನೆಲೆ ಇರುವುದನ್ನು ಕಾಣಬಹುದು. ಗಮನಾರ್ಹವೆಂದರೆ ಇದರಲ್ಲಿ ರಾಜಮನೆತನದ ಔಪಚಾರಿಕತೆಯನ್ನು ಕೈಬಿಡಲಾಗಿದೆ. ಇಲ್ಲಿ ರಾಜಮಾತೆ, ಮಹಾರಾಜ, ಯುವರಾಜ ಎಂಬುದಕ್ಕಿಂತಲೂ ಹೆಚ್ಚಾಗಿ ಮಮತೆ ಭಾವನೆ ಹೊಂದಿರುವ ಒಬ್ಬ ತಾಯಿಯನ್ನು ನೋಡುತ್ತೇವೆ. ಜೊತೆಗೆ ಅವರ ಇಬ್ಬರು ಪುತ್ರರು ಅವರ ಪಾದದ ಬಳಿ ಕುಳಿತ್ತಿದ್ದು, ಅತ್ಯಂತ ಮುಗ್ಧಭಾವ ಬಿಂಬಿಸುತ್ತಿರುವ ಹಿನ್ನೆಲೆಯಲ್ಲಿ ಇದೊಂದು ಅಸಾಧಾರಣ ಛಾಯಾಚಿತ್ರ ಎನ್ನಬಹುದು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ನಾಡೋಜ ಎಸ್.ಆರ್.ರಾಮಸ್ವಾಮಿ

ಮನೀಷಿಣಸ್ಸಂತಿ ನ ತೇ ಹಿತೈಷಿಣೋ
ಹಿತೈಷಿಣಸ್ಸಂತಿ ನ ತೇ ಮನೀಷಿಣಃ।
ಯಥೌಷಧಂ ಸ್ವಾದು ಹಿತಂ ಚ ದುರ್ಲಭಮ್ ॥

ಎಷ್ಟೋ ಜನ ವಿದ್ವಾಂಸರಿದ್ದಾರೆ. ಆದರೆ ಅವರು ಲೋಕಕ್ಕೆ ಹಿತವನ್ನು ಮಾಡಲು ಬಯಸುವವರಲ್ಲ. ಲೋಕಕ್ಕೆ ಹಿತವನ್ನು ಮಾಡಲು ಬಯಸುವ ಜನರಿದ್ದಾರೆ. ಆದರೆ ಅದನ್ನು ಮಾಡಲು ಬೇಕಾದ ಜ್ಞಾನ ಅವರಲ್ಲಿಲ್ಲ. ರುಚಿಯಾಗಿದ್ದು ದೇಹದ ಆರೋಗ್ಯವನ್ನು ಕಾಪಾಡಬಲ್ಲ ಔಷಧ ಹೇಗೆ ದುರ್ಲಭವೋ ಹಾಗೆ ಹಿತೈಷಿಯೂ, ತಿಳಿದವನೂ ಆದ ವ್ಯಕ್ತಿ ಪ್ರಪಂಚದಲ್ಲಿ ದುರ್ಲಭ, ವಿರಳ–ಎಂಬುದು ಈ ಸುಭಾಷಿತದ ತಾತ್ಪರ್ಯ. ಸಕಲ ಹಿತೈಷಿಯೂ ಶ್ರೇಷ್ಠಮನೀಷಿಯೂ ಆಗಿದ್ದವರು ನಾಡೋಜ ಎಸ್.ಆರ್.ರಾಮಸ್ವಾಮಿಯವರು. ಅವರನ್ನು ನೋಡಿದಾಗ ಹಿಮಾಲಯದ ಔನ್ನತ್ಯಕ್ಕೆ, ಸಮುದ್ರದ ಗಾಂಭೀರ್ಯಕ್ಕೆ, ಆಕಾಶದ ವಿಶಾಲತೆಗೆ ತಲೆಬಾಗುವಂತೆ ನಾನು ನಮಸ್ಕರಿಸುತ್ತಿದ್ದೆ. ಮನಸಾ ವಿಶಾಲತೆಗೆ ತಲೆಬಾಗುವಂತೆ ನಾನು ನಮಸ್ಕರಿಸುತ್ತಿದ್ದೆ. ಮನಸಾ ಶಿರಸಾ ವಚಸಾ ವಂದಿಸಲು ಇಷ್ಟಪಡುತ್ತಿದ್ದೆ. ಅವರು ಇತ್ತೀಚೆಗೆ (10.4.2026) ನಮ್ಮನ್ನು ಅಗಲಿ ಹೋದರು. ಎಂಬತ್ತೆಂಟು ವರ್ಷಗಳ ಸಾರ್ಥಕ ಜೀವನ ನಡೆಸಿದ, ರಾಷ್ಟ್ರ ಸೇವೆಗಾಗಿ ತಮ್ಮ ಸರ್ವಸ್ವವನ್ನೂ ಮುಡುಪಾಗಿರಿಸಿದ್ದ ಹಿರಿಯ ಚೇತನ ಕಣ್ಮರೆಯಾಯಿತು.

ಸೊಂಡೆಕೊಪ್ಪ ರಾಮಚಂದ್ರ ಶಾಸ್ತ್ರಿ ರಾಮಸ್ವಾಮಿ ಅವರು ವಿದ್ವದ್ವಂಶದಲ್ಲಿ ಹುಟ್ಟಿ ಅದಕ್ಕೆ ತಕ್ಕಂತೆ ಬಾಳಿದವರು, ಬೆಳೆದವರು. ಬಹುಭಾಷಾವಿದರಾಗಿದ್ದ ಅವರು ಬರೆದುದು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ. ರಾಷ್ಟ್ರೋತ್ಥಾನ ಸಾಹಿತ್ಯಕ್ಕೂ ರಾಮಸ್ವಾಮಿ ಅವರಿಗೂ ಅವಿನಾಭಾವ ಸಂಬಂಧ. 'ಉತ್ಥಾನ' ಪತ್ರಿಕೆಯ ಜೀವನಾಡಿಯೇ ಅವರು ಆಗಿದ್ದರೆಂದರೆ ಅತಿಶಯೋಕ್ತಿಯಲ್ಲ.

ಇಪ್ಪತ್ತನೆಯ ಶತಮಾನದ ಭಗವದ್ಗೀತೆಯೆಂದು ಕೊಂಡಾಡಲ್ಪಟ್ಟ 'ಮಂಕುತಿಮ್ಮನ ಕಗ್ಗ'ವನ್ನು ರಚಿಸಿದ ಡಿವಿಜಿ ಅವರ ನಿಕಟವರ್ತಿಯಾಗಿದ್ದ ಎಸ್.ಆರ್. ರಾಮಸ್ವಾಮಿಗಳು ಜಗತ್ತಿನ ಮತ್ತು ಜೀವನದ ನಾನಾ ಮುಖಗಳನ್ನು ಕಂಡವರು. ಅವರ ನಡೆಯಲ್ಲೂ, ನುಡಿಯಲ್ಲೂ ಪರಿಪಕ್ವತೆ ಕಾಣಿಸುತ್ತಿತ್ತು. ಬದುಕಿದರೆ ಹೀಗೆ ಬದುಕಬೇಕು, ನುಡಿದರೆ ಹೀಗೆ ನುಡಿಯಬೇಕು, ಬರೆದರೆ ಹೀಗೆ ಬರೆಯಬೇಕು ಎಂಬ ಭಾವನೆಗಳು ಜನರಲ್ಲಿ ಹುಟ್ಟುವಂತೆ ಅವರು ಬದುಕಿದರು, ನುಡಿದರು, ಬರೆದರು. ಹತ್ತಾರು, ನೂರಾರು, ಸಾವಿರಾರು ಜನರಿಗೆ ಮಾದರಿಯಾದರು. ಅವರು ಕಂಡಿದ್ದ ಮಹಾನುಭಾವರ ವೈಶಿಷ್ಟ್ಯಗಳನ್ನು ಚೆನ್ನಾಗಿ ಗುರುತಿಸಿ ಅಕ್ಷರ ರೂಪದಲ್ಲಿ ಶಾಶ್ವತಗೊಳಿಸಿದರು. ಇದು ಆ ಮಹಾವ್ಯಕ್ತಿಗಳಿಗೆ ಅವರು ಸಲ್ಲಿಸಿದ ಅಭಿವಂದನೆ, ತಾಯ್ನುಡಿಗೆ **ಕೊಟ್ಟ ಕೊಡುಗೆ ಹಾಗೂ ಲೇಖಕರಿಗೆ** ನೀಡಿದ ಮಾರ್ಗದರ್ಶನ.

ರಾಮಸ್ವಾಮಿಯವರ ಸಾಹಿತ್ಯ ರಚನೆ ಅದ್ಭುತ, ಅತಿವಿಸ್ತೃತ. ಅದರಲ್ಲಿ ಕೆಲವನ್ನು ಇಲ್ಲಿ ಸ್ಮರಿಸಿಕೊಳ್ಳುವ ಸಾಹಸ ಮಾಡುತ್ತೇನೆ.

ಹಲವರು ರಾಷ್ಟ್ರಾರಾಧಕರು

ಈ ಪುಸ್ತಕದಲ್ಲಿ ಹದಿಮೂರು ಮಂದಿ ರಾಷ್ಟ್ರ ನಾಯಕರ ವ್ಯಕ್ತಿ ಚಿತ್ರಣ ಮೂಡಿಬಂದಿದೆ. ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಬಾಲಗಂಗಾಧರನಾಥ ತಿಲಕ್, ಗೋಪಾಲಕೃಷ್ಣ ಗೋಖಲೆ, ಭಗಿನಿ ನಿವೇದಿತಾ, ಚಿತ್ತರಂಜನದಾಸ್, ಕೇಶವ ಬಲರಾಂ ಹೆಡಗೆವಾರ್, ಶ್ರೀ ಗುರೂಜಿ ಗೊಳ್ವಾಲ್‌ಕರ್, ಚಕ್ರವರ್ತಿ ರಾಜಗೋಪಾಲಾಚಾರಿ, ಡಾ.ಶ್ಯಾಮಾ ಪ್ರಸಾದ್ ಮುಖರ್ಜಿ, ಜಯಪ್ರಕಾಶ್ ನಾರಾಯಣ್, ಅಟಲ್ ಬಿಹಾರಿ ವಾಜಪೇಯಿ, ನಾನೀ ಪಾಲ್ಖಿವಾಲಾ, ಜಗನ್ನಾಥರಾವ್ ಜೋಷಿ– ಎಂಬ ಮಹನೀಯರ ಪರಿಚಯ ಇಲ್ಲಿ ದೊರಕುತ್ತದೆ. ಇವರೆಲ್ಲರ ಬಗೆಗೆ ನಾವೆಲ್ಲ ಕೇಳಿದ್ದೇವೆ. ಒಬ್ಬಿಬ್ಬರನ್ನೂ ಸಾಕ್ಷಾತ್ತಾಗಿ ಕಂಡಿದ್ದೇವೆ, ಅವರ ಮಾತನ್ನು ಕಿವಿಯಾರೆ ಕೇಳಿದ್ದೇವೆ. ಆದರೂ ಅವರ ನಿಜವಾದ ಪೂರ್ಣಪರಿಚಯವಾಗುವುದು ಇಂತಹ ಪುಸ್ತಕಗಳನ್ನು ಓದಿದಾಗಲೇ. ವಿಶ್ವೇಶ್ವರಯ್ಯನವರು ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿಸಲು ಪ್ರಯತ್ನಿಸಲು ಹೊರಟಾಗ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರೇ ವಿರೋಧಿಸಿದ್ದರು. ಈ ಹೊಸ ವಿಶ್ವವಿದ್ಯಾ ನಿಲಯದ ಕೆಳಗೆ ಕೆಲಸ ಮಾಡಲು ಇಷ್ಟವಿಲ್ಲ



ಎಂದು ಪ್ರತಿಭಟಿಸಿದ್ದರು ಎಂಬುದು ನಮಗೆ ತಿಳಿದಿತ್ತೆ? ಶ್ಯಾಮಾ ಪ್ರಸಾದ್ ಮುಖರ್ಜಿಯವರ ತಂದೆ ಆಶುತೋಷ್ ಮುಖರ್ಜಿಯವರು ಏಳನೆಯ ಎಡ್ವರ್ಡ್ ಚಕ್ರವರ್ತಿಯ ಪಟ್ಟಾಭಿಷೇಕಕ್ಕೆ ಬ್ರಿಟಿಷ್ ಸರ್ಕಾರವೇ ಆಹ್ವಾನಿಸಿದ್ದರೂ ತಾಯಿ ಅಪ್ಪಣೆ ಕೊಡಲಿಲ್ಲವೆಂದು ಆಹ್ವಾನವನ್ನು ನಿರಾಕರಿಸಿದ್ದರು–ಎಂಬುದು ರಾಮಸ್ವಾಮಿಯವರಿಂದಲೇ ನಮಗೆ ತಿಳಿದು ಬರುವುದು. ಇದು ಭಾರತದ ವೈಸ್‌ರಾಯ್ ಮಾಡುವ ಆಜ್ಞೆ ಎಂಬ ಪತ್ರಕ್ಕೆ ಆಶುತೋಷ್ ಮುಖರ್ಜಿ ಕೊಟ್ಟ ಉತ್ತರ–

'Then I will tell the Viceroy of India on her behalf that the mother of Ashutosh refuses to let her son be commanded by anybody excepting herself, be he the Viceroy of India or be he anybody greater.'

ಇಂತಹ ಅಪೂರ್ವ ವಿಷಯಗಳನ್ನು ತಿಳಿದುಕೊಳ್ಳಲು ಪುಸ್ತಕವನ್ನೇ ಓದಬೇಕು.

ದೀಪ್ತಿ ಶೃಂಗಗಳು

ಈ ಪುಸ್ತಕದಲ್ಲಿ ಎಸ್.ಆರ್. ರಾಮಸ್ವಾಮಿಗಳು ಏಳು ಜನ ಮಹನೀಯರ ವ್ಯಕ್ತಿ ಚಿತ್ರಣವನ್ನು ನೀಡಿದ್ದಾರೆ. ಇಲ್ಲಿ ಚಿತ್ರಿತರಾದವರು, ರಾಷ್ಟ್ರ ನಾಯಕರಂತೆ ಹೆಚ್ಚು ವಿಖ್ಯಾತರಾದವರಲ್ಲ. ಆದರೆ ವಿದ್ವಾಂಸರಾಗಿ, ಸಜ್ಜನರಾಗಿ, ಅನುಕರಣೀಯಶೀಲವಂತರಾಗಿ ಪ್ರಾತಃಸ್ಮರಣೀಯರು. ವಿದ್ವಾನ್ ಎನ್.ರಂಗನಾಥ ಶರ್ಮಾ, ಪ್ರೊ. ಎಸ್.ಕೆ.ರಾಮಚಂದ್ರರಾವ್, ವೇದಾಂತಂ ಸುಬ್ಬಯ್ಯ, ಬೆಳಗೆರೆ ಕೃಷ್ಣಶಾಸ್ತ್ರೀ, ಎಸ್.ವಿ. ನಾರಾಯಣ ಸ್ವಾಮಿರಾವ್, ಟಿ.ಆರ್.ಶಾಮಣ್ಣ, ಎಸ್.ಆರ್. ರಂಗನಾಥನ್ ಎಂಬುವರಲ್ಲಿ ಸದ್ಗುಣಗಳನ್ನು ನಾವು ಕಾಣಬಹುದು. ಇವರಲ್ಲಿ ವಿದ್ವಾನ್ ಎನ್.ರಂಗನಾಥಶರ್ಮರು ಸಂಸ್ಕೃತ ವಿದ್ವಾಂಸರು (ನನಗೂ ಗುರುಗಳಾಗಿದ್ದವರು). ವ್ಯಾಕರಣ ಶಾಸ್ತ್ರದಲ್ಲಿ ಪರಿಣತರು.

ನಾವು ರಂಗನಾಥ ಶರ್ಮರಿಂದ ಪಾಠಗಳನ್ನು ಕಲಿತಿದ್ದರೂ ಅವರು ವಿದ್ಯಾರ್ಥಿದೆಶೆಯಲ್ಲಿ ಅನುಭವಿಸಿದ್ದ ಕಷ್ಟಗಳ ಬಗೆಗೆ ಅರಿತಿರಲಿಲ್ಲ. ಅವನ್ನೆಲ್ಲ ರಾಮಸ್ವಾಮಿಯವರು ವಿವರಿಸಿದ್ದಾರೆ. ಹಾಗಿದ್ದ ರಂಗನಾಥ ಶರ್ಮರು ಶ್ರೇಷ್ಠ ವ್ಯಾಕರಣ ಶಾಸ್ತ್ರ ಪ್ರಾಧ್ಯಾಪಕರಾಗಿ, ಅನೇಕ ಸಂಸ್ಕೃತ ಗ್ರಂಥಗಳ ಕರ್ತೃಗಳಾಗಿ, ಅನುವಾದಕರಾಗಿ ಜಗದ್ವಿದಿತರಾದರೆಂಬುದು ಎಸ್.ಆರ್.ರಾಮಸ್ವಾಮಿಗಳ ಲೇಖನದಲ್ಲಿ ಪ್ರಸ್ತುತವಾಗಿದೆ.

ಪ್ರೊ.ಎಸ್.ಕೆ.ರಾಮಚಂದ್ರರಾಯರು ಜ್ಞಾನದ ಗಣಿಯೇ ಆಗಿದ್ದರು. ಪ್ರಾಚೀನ ಶಾಸ್ತ್ರಗಳಂತೆ ಆಧುನಿಕ ಮನೋವಿಜ್ಞಾನದಲ್ಲೂ ಪಾರಂಗತರು. ಅವರ ಮಾತನ್ನು ಕೇಳುತ್ತಿದ್ದರೆ ಅಮೃತ ಪಾನ ಮಾಡಿದ ಅನುಭವ. ಕನ್ನಡ–ಇಂಗ್ಲಿಷ್–ಸಂಸ್ಕೃತಗಳು ಅವರಿಗೆ ಕರತಲಾಮಲಕ ಸಾಹಿತ್ಯದಲ್ಲಿ ಹೇಗೋ ಹಾಗೆ ಸಂಗೀತದಲ್ಲೂ ನಿಖರವಾದ ಜ್ಞಾನ. ಎಸ್.ಆರ್.ಆರ್. ಬರೆಯುತ್ತಾರೆ. 'ಅಷ್ಟೆಲ್ಲ ರಾಶಿ ರಾಶಿ ವಿಷಯಗಳಿಗೆ ಅವರು ಹೇಗೆ ಅವಕಾಶ ಕಲ್ಪಿಸಿಕೊಂಡಿದ್ದರೆಂದು ನೆನೆದರೆ, ಆಶ್ಚರ್ಯವಾಗುತ್ತದೆ. ಎಸ್.ಕೆ.ರಾಮಚಂದ್ರರಾಯರ ಗ್ರಂಥ ಪ್ರಪಂಚದ ಬಗೆಗೂ ಎಸ್.ಆರ್.ಆರ್. ವಿಸ್ತಾರದಿಂದ ಬರೆದಿದ್ದಾರೆ.

ವೇದಾಂತ ಸುಬ್ಬಯ್ಯನವರು ಅದ್ವೈತ ವೇದಾಂತದಲ್ಲಿ ಅಪೂರ್ವ ಸಿದ್ಧಿಯನ್ನು ಪಡೆದಿದ್ದವರು. ಅವರ ಪ್ರವಚನಗಳು ಅನೇಕರಿಗೆ ಸ್ಫೂರ್ತಿಯನ್ನು ನೀಡಿದವು. ಬೆಂಗಳೂರಿನ ಅವರ ಮನೆಯಲ್ಲಿ ನಡೆಯುತ್ತಿದ್ದ ಶಂಕರ ಜಯಂತಿ ಪ್ರಸಿದ್ಧ. ಶಾಂಕರ ಭವಿಷ್ಯಕ್ಕೆ ವಿರುದ್ಧವಾದ ವ್ಯಾಖ್ಯಾನಕಾರರ ವಾದಗಳನ್ನು ಸುಬ್ಬಯ್ಯ ಅವರು ಒಪ್ಪುತ್ತಿರಲಿಲ್ಲ.

ಬೆಳಗೆರೆ ಕೃಷ್ಣ ಶಾಸ್ತ್ರಿಗಳು ಬಿಳಿ ಬಟ್ಟೆಯ ಸನ್ಯಾಸಿ. ಮೊದಲ ಪತ್ನಿಯ ನಿಧನಾನಂತರ ಎರಡನೆಯ ಮದುವೆ ಮಾಡಿಕೊಳ್ಳಿ ಎಂಬ ಒತ್ತಾಯ ನೆಂಟರಿಂದ ಬಂದಾಗ ಶಾಸ್ತ್ರಿಗಳು ದಂತ ವೈದ್ಯರ ಬಳಿಗೆ ಹೋಗಿ ಎಲ್ಲ ಹಲ್ಲುಗಳನ್ನೂ ಕೀಳಿಸಿಕೊಂಡು ಮುದುಕರಾಗಿ ಮರು ಮದುವೆ ತಪ್ಪಿಸಿಕೊಂಡು ವಿರಕ್ತ ಜೀವನ ನಡೆಸಿದರು. ತೊಂಬತ್ತೇಳು ವರ್ಷದ ತುಂಬು ಜೀವನ ನಡೆಸಿದ ಕೃಷ್ಣಶಾಸ್ತ್ರಿಗಳ ಬದುಕಿನ ಒಂದೊಂದು ದಿನವೂ ಸಮಾಜದ ಸೇವೆಗೆ ಮೀಸಲಾಗಿತ್ತೆಂಬುದನ್ನು ರಾಮಸ್ವಾಮಿಯವರು ನಿರೂಪಿಸಿದ್ದಾರೆ.

ಶ್ರೀ ರಾಮ ಸೇವಾ ಮಂಡಳಿಯಿಂದ ಸಂಗೀತ ಸೇವೆ ಮಾಡಿಸಿದ **ಎಸ್.ವಿ. ನಾರಾಯಣಸ್ವಾಮಿರಾವ್** ಸ್ಫಟಿಕ ಶುದ್ಧ ಚಾರಿತ್ರ್ಯದ ರಾಜ ಕಾರಣಿ **ಟಿ.ಆರ್. ಶಾಮಣ್ಣ**, ಗ್ರಂಥಾಲಯ ವ್ಯವಸ್ಥೆಗೆ ಇನ್ನೊಂದು ಹೆಸರಾದ **ಎಸ್.ಆರ್. ರಂಗನಾಥನ್** ಇವರೆಲ್ಲರ ಸುಂದರ ಪರಿಚಯವನ್ನು ರಾಮಸ್ವಾಮಿಗಳು ದೀಪ್ತ ಶೃಂಗಗಳು ಎಂಬ ಪುಸ್ತಕದಲ್ಲಿ ಮಾಡಿಸಿದ್ದಾರೆ.

ಎಸ್.ಆರ್.ರಾಮಸ್ವಾಮಿ ಸಾಹಿತ್ಯ ಕ್ಷೇತ್ರದಲ್ಲಿ ಅನ್ವೇಷಕರಾಗಿ ತುಂಬ ದುಡಿದವರು. ಅನೇಕ ಗ್ರಂಥಗಳ ಸಮೀಕ್ಷೆಗಳನ್ನು ಮಾಡಿದವರು. ಗ್ರಂಥ ಸಮೀಕ್ಷಾ ಪ್ರಬಂಧಗಳನ್ನೇ ಒಟ್ಟುಗೂಡಿಸಿ ಸಾಹಿತ್ಯ ಸಾನ್ನಿಹಿತ್ಯ ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಹದಿನಾರು ಪ್ರಬಂಧಗಳಿವೆ. ರಾಮಾಯಣ, ಮಹಾಭಾರತ, ಪುರಾಣ, ಈಚೆಗೆ ಶತಾವಧಾನಿ ಗಣೇಶರು ರಚಿಸಿರುವ ಮಣ್ಣಿನ ಕನಸು ಎಂಬ ಕಾದಂಬರಿ –ಇತ್ಯಾದಿಗಳ ವಿಮರ್ಶೆ ಸಾಹಿತ್ಯ ಸಾನ್ನಿಹಿತ್ಯದಲ್ಲಿ ಲಭ್ಯವಾಗುತ್ತದೆ.

ಇದರಲ್ಲಿ ಜನ್ಮಾಂತರವೆಂಬ ಲೇಖನವೂ ಇದೆ. ಡಾ. ಪಿ.ವಿ. ವರ್ತಕ ಎಂಬುವರು ಮರಾಠಿಯಲ್ಲಿ ಬರೆದ ಪುನರ್ಜನ್ಮ ಎಂಬ ಕೃತಿಯನ್ನು ಹೇಮಂತರಾಜರು ಕನ್ನಡಿಸಿದ್ದಾರೆ. ಅದರ ವಿಮರ್ಶೆ ಮತ್ತು ಜನ್ಮಾಂತರದ ಬಗೆಗೆ ಎಸ್.ಆರ್.ರಾಮಸ್ವಾಮಿಗಳ ಅಭಿಪ್ರಾಯಗಳೂ ಈ ಲೇಖನದಲ್ಲಿದ್ದು ವಾಚನಾರ್ಹವಾಗಿವೆ. ಹಾಗೆಯೇ ಜೆನ್ ಅನುಭವ ಎಂಬ ಲೇಖನ ಓದುಗರನ್ನು ಚಿಂತನೆಗೆ ಹಚ್ಚುತ್ತದೆ.

ಎಸ್.ಆರ್.ಆರ್. ಅವರ ಅನೇಕ ಪುಸ್ತಕಗಳಲ್ಲಿ ಸೂಕ್ತಿ ಸಂಚಯ ಎಂಬ ಸುಭಾಷಿತ ಸಂಗ್ರಹವೂ ಒಂದು ಸಂಸ್ಕೃತದ ಆಣಿಮುತ್ತು ಗಳಂತಹ ಶ್ಲೋಕಗಳನ್ನು ಸಂಗ್ರಹಿಸಿ ಅವುಗಳಿಗೆ ಕನ್ನಡದ ಅರ್ಥವನ್ನೂ ಹಾಗೆಯೇ ಸ್ವಾನುಭವದ ವಿವರಣೆಯನ್ನೂ ಅವರು ಇದರಲ್ಲಿ ನೀಡಿದ್ದಾರೆ. ಮನುಸ್ಮೃತಿ, ಪಂಚತಂತ್ರ, ಭಾಮಿನೀವಿಲಾಸ, ವಿವೇಕ ಚೂಡಾಮಣಿ ಇತ್ಯಾದಿ ಹಲವು ಗ್ರಂಥಗಳಿಂದ ಆಯ್ದ ಸುಂದರ ಸುಭಾಷಿತಗಳನ್ನೂ, ಅಲ್ಲಿ ಹೇಳಿದ ನೀತಿಯ ಅಥವಾ ತತ್ವದ ನಿರೂಪಣೆಗಾಗಿ ವಾಸ್ತವ ಜಗತ್ತಿನ ಘಟನೆಗಳನ್ನೂ ಸೂಕ್ತಿ ಸಂಚಯದಲ್ಲಿ ಕಾಣಬಹುದು.


ಎಸ್.ಆರ್.ರಾಮಸ್ವಾಮಿ ಅವರಿಗೆ ಶಿಷ್ಯರೂ ಅಭಿಮಾನಿಗಳೂ ಅರ್ಪಿಸಿರುವ ಬೃಹತ್ ಗ್ರಂಥ ದೀಪಸಾಕ್ಷಿ. ಐನೂರಕ್ಕೂ ಹೆಚ್ಚಿನ ಸಂಖ್ಯೆಯ ಪುಟಗಳನ್ನು ಹೊಂದಿರುವ ಈ ಗ್ರಂಥ ಯಾರ ಮನೆಯಲ್ಲಿದ್ದರೂ ಅದು ಭೂಷಣ. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಈ ಗ್ರಂಥವನ್ನು ಪ್ರಕಟಿಸಿ ತನ್ನ ಕಿರೀಟಕ್ಕೆ ರತ್ನಾಲಂಕಾರ ಮಾಡಿಕೊಂಡಿದೆ.

ಈ ಲೇಖನದಲ್ಲಿ ನಾನು ಹೆಸರಿಸಿರುವ ಗ್ರಂಥಗಳು ಎಸ್.ಆರ್.ಆರ್. ಅವರ ಸಾಹಿತ್ಯ ಸಮುದ್ರದ ಕೆಲವು ಹನಿಗಳು ಮಾತ್ರ. ಅವರ ಸಮಗ್ರ ಸಾಹಿತ್ಯದ ಪರಿಚಯ ಮಾಡಲು ಹೊರಟರೆ ಅದು ನಾಲ್ಕಾರು ಪಿಎಚ್.ಡಿ. ಮಹಾಪ್ರಬಂಧಗಳ ವಸ್ತು. ಅಷ್ಟು ದೊಡ್ಡವರಿಗೆ ನಾವೇನು ಹೇಳಬಹುದು?

'ಭೂಹಿಷ್ಠಾಂ ತೇ ನಮ ಉಕ್ತಿಂ ವಿಧೇಮ'.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೊದಲನೇ ವರ್ಷದ ಸವಿನೆನಪು



ಶ್ರೀ ರಾಮಚಂದ್ರು .ಬಿ
(ನಿವೃತ್ತ ಸಹಕಾರ ಅಭಿವೃದ್ಧಿ ಅಧಿಕಾರಿ)

ನೀವು ಇಂದಿಗೆ ನಮ್ಮನ್ನಗಲಿ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖಿತಪ್ತರು: ಪತ್ನಿ : ಜಯಂತಿ ರಾಮಚಂದ್ರು ಮತ್ತು ಮಕ್ಕಳು, ಬೆಲ್ಲದ ಬೋರಪ್ಪನವರ ಕುಟುಂಬದವರು ಹಾಗೂ ನಗುವನಹಳ್ಳಿ ಗ್ರಾಮಸ್ಥರು, ಯಜಮಾನ್ ವಿಷಕಂಠೇಗೌಡರ ಕುಟುಂಬದವರು, ಕುಂಬಾರಕೊಪ್ಪಲು

6ನೇ ವರ್ಷದ ಸವಿನೆನಪು



ಶ್ರೀಮಾನ್ ಹಾಲಿನ ಪುಟ್ಟೇಗೌಡರು

ನಿಧನ: 15-04-2020 (ದಾಸನಕೊಪ್ಪಲು, ಮೈಸೂರು ತಾ||)


ದುಃಖತಪ್ತರು:
ಪತ್ನಿ: ಶ್ರೀಮತಿ ಚಿಕ್ಕನರಸಮ್ಮ, ಶ್ರೀಮತಿ ಸರಸ್ವತಿ ಮತ್ತು ಶ್ರೀ ರಾಮಚಂದ್ರ & ಯೋಗೇಶ.ಆರ್ (ಗುಂಡ), ಶ್ರೀಮತಿ ಟಿ.ಕಲ್ಪನ & ಶ್ರೀ ಸುರೇಶ್.ಪಿ, ಹೆಣ್ಣುಮಕ್ಕಳು, ಅಳಿಯಂದಿರು & ಮೊಮ್ಮಕ್ಕಳು ಕುಟುಂಬವರ್ಗ ಹಾಗೂ ದಾಸನಕೊಪ್ಪಲು ಗ್ರಾಮಸ್ಥರು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



MYSORE RACE CLUB LIMITED
P B No. 11, Race Course Road, Mysore – 570 010
Tel. No. 2521675 | E-mail : secretary@mysoreraceclub.com

TENDER NOTICE - OPERATION OF ENTRANCES ON RACE DAYS

Sealed Tenders are invited for the operation of entrances for racing patrons on Mysore Race Days and Inter Venue Betting Days. Tenders must be submitted by 5.00 p.m. on **Wednesday, 22nd April 2026**, to the Secretary & CEO at the above address.

Tender forms and terms & conditions can be obtained from the Administrative Office on payment of a non-refundable fee of Rs.1,000/- + GST.

The Club reserves to itself the right to reject any or all tenders without assigning any reason.

Sd/-
Secretary & CEO,
Mysore Race Club Ltd.

Date : 13th April, 2026

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಬೇಕಾಗಿದ್ದಾರೆ : ಗೌರವಾನ್ವಿತ/ ಅರೆ ಗೌರವಾನ್ವಿತ

(ಪುರುಷ ಅಭ್ಯರ್ಥಿಗಳಿಗೆ ಆದ್ಯತೆ)

ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ – ವಿವೇಕ ಸ್ಮಾರಕ

ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು.

Post	Qualification	Age	Experience in relevant field	Scope
1. Admission Counseller	Any graduation	50-65yrs	Min. 5 yrs	Guidance about courses & admission
2. Accounts Assistant	B.com	40-60yrs	Min. 3-5 yrs	Accounts & office work
3. Office Assistant	Any graduation	30-40yrs	Min. 3-5 yrs	General office work
4. Receptionist	Any graduation	30-40yrs	Min. 1-2 yrs	General guidance about courses & other activities
5. Enquiry Assistant	Any graduation	30-40yrs	Min. 1-2 yrs	General guidance about courses & admission
6. Library Assistant	Any graduation	30-40yrs	Min. 3-5 yrs	Managing library
7. Teaching Faculty (Part time / Full Time)	Post Graduation in Kannada/ Sanskrit/ English/ Philosophy/ Psychology/ Social Work	30-40yrs	Min. 3-5 yrs	Conduct classes on values & culture oriented subjects & soft skills

Note: * Candidates with basic knowledge of Indian culture and spiritual values will be preferred
* Fluency in Kannada & English, along with computer knowledge is mandatory

10 ದಿನದೊಳಗೆ ಇಮೇಲ್ ಅಥವಾ ಖುದ್ದಾಗಿ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸತಕ್ಕದ್ದು.

ಸಂಪರ್ಕಿಸಬೇಕಾದ ವಿಳಾಸ: ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು 570 020
Phone No.: : 0821-2417444, 2412424 Email: mysuru@rkmm.org
Visit our website *vivekasmaraka.org* for further details

ಮೈಸೂರು ಮಿತ್ರ ಬುಧವಾರ 15 ಏಪ್ರಿಲ್ 2026

ಮೈಸೂರಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅದ್ದೂರಿ, ಅರ್ಥಪೂರ್ಣ ಆಚರಣೆ

●ದಲಿತರು, ಹಿಂದುಳಿದವರು ಮುಖ್ಯವಾಹಿನಿಗೆ ಬರಲು ಶಿಕ್ಷಣ ಅನಿವಾರ್ಯ ●ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ತನ್ವೀರ್ ಸೇಠ್ ಸಲಹೆ ●ಪುಷ್ಪಾಲಂಕಾರಗೊಂಡ ಸಾರೋಟಿನಲ್ಲಿ ಅಂಬೇಡ್ಕರ್ ಪ್ರತಿಮೆ ಮೆರವಣಿಗೆ
●ಜಾನಪದ ಕಲಾತಂಡಗಳಿಂದ ಮೆರವಣಿಗೆಗೆ ಮೆರಗು ●ಟೌನ್ ಹಾಲ್‌ನಲ್ಲಿ ಅಂಬೇಡ್ಕರ್ ಪ್ರತಿಮೆಗೆ ಶಾಸಕ ಜಿಟಿಡಿ ಸೇರಿ ಹಲವು ಗಣ್ಯರಿಂದ ಮಾಲಾರ್ಪಣೆ ಅಂಬೇಡ್ಕರ್ ಅವರ ವಿದ್ವತ್ತಿಗೆ ಗಣ್ಯರಿಂದ ಗುಣಗಾನ





ಮೈಸೂರಿನ ಪುರಭವನದಲ್ಲಿ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ ಅಂಗವಾಗಿ ಶಾಸಕ ಜಿ.ಟಿ.ದೇವೇಗೌಡ ಹಾಗೂ ಇತರೆ ಗಣ್ಯರು ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು(ಎಡಚಿತ್ರ) . ಸಾರೋಟಿನಲ್ಲಿ ಪ್ರತಿಷ್ಠಾಪನೆಗೊಂಡಿದ್ದ ಅಂಬೇಡ್ಕರ್ ಅವರ ಭಾವಚಿತ್ರವಿರುವ ವರ್ಣರಂಜಿತ ಮೆರವಣಿಗೆ ಪುರಭವನದಿಂದ ಹೊರಟು ನಗರದ ವಿವಿಧ ರಸ್ತೆಗಳ ಮೂಲಕ ಕಲಾಮಂದಿರ ತಲುಪಿತು (ಬಲಚಿತ್ರ).

ಮೈಸೂರು, ಏ.14(ಬಿಎಲ್‌ಯು)– ಸಮಾಜದ ಮುಖ್ಯ ವಾಹಿನಿಗೆ ಬರಲು ದಲಿತರು ಹಾಗೂ ಹಿಂದುಳಿದ ವರ್ಗದವರು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು ಎಂದು ನರಸಿಂಹರಾಜ ಕ್ಷೇತ್ರದ ಹಿರಿಯ ಶಾಸಕ ತನ್ವೀರ್ ಸೇಠ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ಜಿಲ್ಲಾಡಳಿತ ಸೇರಿದಂತೆ ವಿವಿಧ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅವಕಾಶಗಳನ್ನು ಯಾರೂ ನಿಮ್ಮ ಮನೆ ಬಾಗಿಲಿಗೆ ತಂದು ಕೊಡುವುದಿಲ್ಲ. ನಿಮ್ಮ ಶಿಕ್ಷಣ, ಶ್ರಮ ಹಾಗೂ ಹೋರಾಟದಿಂದ ಅವಕಾಶಗಳನ್ನು ಪಡೆದು ಗುರಿ ತಲುಪಬೇಕು ಎಂದು ಕಿವಿಮಾತು ಹೇಳಿದರು.

ಅಂಬೇಡ್ಕರ್ ಅವರು ಪಡೆದಿದ್ದ ವಿದ್ಯಾರ್ಹತೆ, ಅಗಾಧ ಪಾಂಡಿತ್ಯ ಹಾಗೂ ವಿದ್ವತ್ತಿನಿಂದ ಸಂವಿಧಾನ ರಚನೆಯ ಜವಾಬ್ದಾರಿ ದೊರೆಯಿತು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು. ಶಿಕ್ಷಣ ಹಾಗೂ ಜ್ಞಾನ ಪಡೆದರೆ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ತನ್ವೀರ್ ಸೇಠ್ ಅವರು ತಿಳಿಸಿದರು.

ಶೋಷಣೆಯಿಂದ ಮುಕ್ತರಾಗಲು ಶಿಕ್ಷಣ, ಸಂಘಟನೆ ಹಾಗೂ ಹೋರಾಟದ ಮನೋಭಾವ ರೂಢಿಸಿಕೊಳ್ಳಬೇಕು ಎಂದು ಸ್ವತಃ ಅಂಬೇಡ್ಕರ್ ಅವರು ನೀಡಿರುವ ಸಲಹೆಯನ್ನು ಪ್ರತಿಯೊಬ್ಬರು ಗಂಭೀರವಾಗಿ ಪರಿಗಣಿಸಿ ಅದನ್ನು ಅನುಸರಿಸಬೇಕು ಎಂದರು.

ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಅವರು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದಿನ ಯುವ ಪೀಳಿಗೆ ಮಹಾನ್ ವ್ಯಕ್ತಿಗಳ ಇತಿಹಾಸ, ಹೋರಾಟ, ತ್ಯಾಗ ಹಾಗೂ ಚಿಂತನೆಗಳ ಅರಿವು ಹೊಂದಬೇಕು ಎಂದು ತಿಳಿಸಿದರು.

ಅಂಬೇಡ್ಕರ್ ಜಯಂತಿ ಆಚರಣೆ ಈ ದಿನಕ್ಕೆ ಮಾತ್ರ ಸೀಮಿತವಾಗಬಾರದು. ಪ್ರತಿಯೊಬ್ಬರು ಅವರ ಆದರ್ಶವನ್ನು ಅನುಸರಿಸಬೇಕು. ಅಂಬೇಡ್ಕರ್ ಅವರ ಹೋರಾಟದ ಬದುಕು, ಪ್ರತಿಪಾದಿಸಿದ ಸಮಾನತೆಯ ತತ್ವಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದು ಇಂದಿನ ಕಾಲಘಟ್ಟಕ್ಕೆ ಅತ್ಯವಶ್ಯವಾಗಿದೆ ಎಂದು ತನ್ವೀರ್ ಸೇಠ್ ಅಭಿಪ್ರಾಯಪಟ್ಟರು.

ಮೀಸಲಾತಿಯ ಮಹತ್ವ ತಿಳಿಯಿರಿ: ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅವರು ಮಾತನಾಡಿ, ಅಂಬೇಡ್ಕರ್ ಅವರ ಆದರ್ಶ, ಆಶಯ ಹಾಗೂ ವಿಚಾರಧಾರೆಗಳನ್ನು ಪರಿಪೂರ್ಣವಾಗಿ ಜನಸಾಮಾನ್ಯರಿಗೆ ತಲುಪಿಸುವಲ್ಲಿ ಇಂದಿಗೂ ಯಶಸ್ವಿಯಾಗಿಲ್ಲ. ಇದನ್ನು ಪ್ರತಿ ಮನೆ ಮನೆಗೆ ತಲುಪಿಸಲು ಮಾಧ್ಯಮಗಳು ಹೆಚ್ಚಿನ ಹೊಣೆಗಾರಿಕೆ ಹೊಂದಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಅವರ ವಿಚಾರಧಾರೆ ತಿಳಿಯಲು ದಿನಗಳು, ತಿಂಗಳು, ವರ್ಷವಾದರೂ ಸಾಲದು. ಅಷ್ಟರ ಮಟ್ಟಿಗೆ ಅವರ ವಿದ್ವತ್ತು ವಿಶಾಲ ವ್ಯಾಪ್ತಿ ಹೊಂದಿದೆ. ಕಟ್ಟ ಕಡೆಯ ವ್ಯಕ್ತಿಗೂ ಶಿಕ್ಷಣ, ಸಮಾನತೆ ತಲುಪಿಸಬೇಕು ಎಂಬ ಅವರ ಆಶಯವನ್ನು ಸರ್ಕಾರಗಳು ಕಾರ್ಯರೂಪಕ್ಕೆ ತರಬೇಕು ಎಂದು ಆಗ್ರಹಿಸಿದರು.

ದೇಶದ ಪ್ರತಿಯೊಬ್ಬರು ಸಮಾನತೆಯ ಜೀವನ ಸಾಗಿಸುವುದು ಮೀಸಲಾತಿಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಸಮ ಸಮಾಜ ನಿರ್ಮಾಣಕ್ಕಾಗಿ ಅಂಬೇಡ್ಕರ್ ಅವರು ಮೀಸಲಾತಿ ಸೌಲಭ್ಯ ನೀಡಿದ್ದಾರೆ. ಈ ವಿಚಾರವನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು ಎಂದು ಹರೀಶ್ ಗೌಡ ಸಲಹೆಯಿತ್ತರು.

ಘನತೆಯ ಬದುಕು ಕಟ್ಟಿಕೊಂಡಿದ್ದಾರೆ: ವಿಧಾನ ಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಮಾತನಾಡಿ, ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ಇಂದು ಶೋಷಿತ ವರ್ಗದವರು ಸಮಾಜದಲ್ಲಿ ಘನತೆಯ ಬದುಕು ಕಟ್ಟಿಕೊಂಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಸಂವಿಧಾನ ರಚನೆಯ ಫಲವಾಗಿ ಇಂದು ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರೆತಿದೆ. ರಾಷ್ಟ್ರಪತಿಗಳಿಂದ ಹಿಡಿದು ಸಾಮಾನ್ಯ ನಾಗರಿಕನ ತನಕ ಮತದಾನದ ಹಕ್ಕಿನ ಪ್ರಜಾಪ್ರಭುತ್ವ ವ್ಯವಸ್ಥೆ ರೂಪಿತಗೊಂಡಿದೆ. ಇದನ್ನು ನೀಡಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಡಾ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಮಹಿಳಾ ಮೀಸಲಾತಿಗೆ ಸ್ವಾಗತ: ಕೇಂದ್ರ ಸರ್ಕಾರ ನಾರಿಶಕ್ತಿ ವಂದನ್ ಅಧಿನಿಯಮದ ಮೂಲಕ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಸೌಲಭ್ಯ ಕಲ್ಪಿಸುತ್ತಿದೆ. ಇದು ಸ್ವಾಗತಾರ್ಹವಾಗಿದ್ದು, ಇದರಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಒಳ ಮೀಸಲಾತಿ ಕಲ್ಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಒತ್ತಾಯಿಸಿದರು.

ಮಹಿಳಾ ಮೀಸಲಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಮೂಲಕ ಅಂಬೇಡ್ಕರ್ ಅವರು ಕಂಡ ಕನಸಿನ ಭಾರತ ನಿರ್ಮಾಣ ಮಾಡಬೇಕು. ಅಂಬೇಡ್ಕರ್ ಅವರು 33 ಪುಸ್ತಕ, 17 ಸಂಪುಟ ಹಾಗೂ 57 ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರನ್ನು ವಿಶ್ವಜ್ಞಾನಿ ಎಂದು ಕರೆಯಲಾಗುತ್ತದೆ ಎಂದು ಶಿವಕುಮಾರ್ ಹೇಳಿದರು.


ವಿವಿಧ ಹೋರಾಟದ ಸಂದರ್ಭಗಳಲ್ಲಿ ಅಂಬೇಡ್ಕರ್ ಅವರು ಮಾಡಿದ ಭಾಷಣದ ತುಣುಕುಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿ, ಅಂದಿನ ಕಾಲಘಟ್ಟದಲ್ಲಿ ದಲಿತರು ಹಾಗೂ ಶೋಷಿತರು ಅನುಭವಿಸಿದ ಯಾತನೆಯನ್ನು ಅವರ ಮಾತುಗಳಲ್ಲಿ ತಿಳಿಸಿದರು.

ಈ ವೇಳೆ ಭೀಮ ಗೀತೆ ಹಾಗೂ ಅಂಬೇಡ್ಕರ್ ಅವರ ಭಾಷಣಗಳ ಪುನರುಚ್ಚಾರಣೆ ಸ್ಪರ್ಧೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಕಾರ್ಯಕ್ರಮಕ್ಕೂ ಮೊದಲು ಮೈಸೂರಿನ ಪುರಭವನದಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗೆ ಶಾಸಕ ಜಿ.ಟಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿ ಸುಂದರ್ ರಾಜ್, ಮಾಜಿ ಮೇಯರ್ ಪುರುಷೋತ್ತಮ್ ಹಾಗೂ ಇತರರು ಮಾಲಾರ್ಪಣೆ ಮಾಡಿದರು.

ನಂತರ ಸಾರೋಟಿನಲ್ಲಿ ಡಾ.ಅಂಬೇಡ್ಕರ್ ಅವರ ಭಾವಚಿತ್ರವಿರುವ ವರ್ಣರಂಜಿತ ಮೆರವಣಿಗೆ ಟೌನ್ ಹಾಲ್‌ನಿಂದ ಹೊರಟಿತು. ಮಹಿಳೆಯರು ಸೇರಿದಂತೆ ಸಾವಿರಾರು ಮಂದಿ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು. ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿತು. ಮೆರವಣಿಗೆಯು ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ಜೆಎಲ್ ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಾರ್ಯಕ್ರಮದ ಸ್ಥಳ ಕಲಾಮಂದಿರ ತಲುಪಿತು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಡಾ.ಪುಷ್ಪಾ ಅಮರನಾಥ್, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾಗೇಶ್ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮವನ್ನು ಶಾಸಕ ತನ್ವೀರ್ ಸೇಠ್ ಅವರು ಉದ್ಘಾಟಿಸಿ, ಮಾತನಾಡಿದರು.

ಮೂರನೇ ಪುಟದಿಂದ

ಗುರು ಭೈರವೈಕ್ಯ ಮಂದಿರ ಲೋಕಾರ್ಪಣೆ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರು ಭೈರವೈಕ್ಯ ಮಂದಿರದ ಲೋಕಾರ್ಪಣೆಗೆ ಸಂಬಂಧಿಸಿದಂತೆ ಧಾರ್ಮಿಕ ವಿಧಿವಿಧಾನಗಳು ಪ್ರಾಣ ಪ್ರತಿಷ್ಠಾಪನಾ ಕಾರ್ಯ ಪೂಜಾ ಕೈಂಕರ್ಯಗಳು ಸಂಪನ್ನಗೊಂಡಿವೆ ಎಂದರು.

ಬೆಳಗ್ಗೆ ದೆಹಲಿಯಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಪ್ರಧಾನಿ ಮೋದಿ ಆಗಮಿಸಲಿದ್ದಾರೆ. 10:50ಕ್ಕೆ ಎಚ್‌ಎಎಲ್‌ನಿಂದ ಹೆಲಿಕಾಪ್ಟರ್ ಮೂಲಕ ಆದಿಚುಂಚನಗಿರಿ ಹೆಲಿಪ್ಯಾಡ್ ತಲುಪಲಿದ್ದಾರೆ. ಅಲ್ಲಿಂದ ಗುರು ಗೋರಖ್ ನಾಥರು ತಪಸ್ಸು ಮಾಡಿದ್ದ ಜ್ವಾಲಾಪೀಠ (ಉರಿಗದ್ದುಗೆ) ದರ್ಶನ ಮಾಡಲಿದ್ದಾರೆ. ಕ್ಷೇತ್ರಪಾಲಕ ಕಾಲಭೈರವನಿಗೆ ಮಂಗಳಾರತಿ ಸಲ್ಲಿಸಿ ನಂತರ ಮಂದಿರ ಉದ್ಘಾಟಿಸಿ ವೇದಿಕೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಶ್ರೀಕ್ಷೇತ್ರಕ್ಕೆ ಏ.15ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಸಾರ್ವಜನಿಕರಿಗೆ ನಿರ್ಬಂಧ ಇರುತ್ತದೆ. ಹೀಗಾಗಿ ಬಿಜಿಎಸ್ ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಬರುವ ಭಕ್ತರು ಬೆಳಿಗ್ಗೆ 9 ಗಂಟೆಯೊಳಗೆ ಬರಬೇಕು ಎಂದು ತಿಳಿಸಿದರು. ಮೋದಿಯವರ ನಿರ್ಗಮನದ ನಂತರ ದೇವಾಲಯ ಹಾಗೂ ಗುರು ಭೈರವೈಕ್ಯ ಮಂದಿರಕ್ಕೆ ಸಾರ್ವಜನಿಕರಿಗೆ ಪ್ರವೇಶ ಕಲ್ಪಿಸಲಾಗುತ್ತದೆ ಎಂದರು.

ಮೈಸೂರು ಪೇಟ ಉಡುಗೊರೆ: ಪ್ರಧಾನಿ ನರೇಂದ್ರ ಮೋದಿ ಅವರು ಆದಿಚುಂಚನ ಗಿರಿ ಶ್ರೀ ಮಠಕ್ಕೆ ಭೇಟಿ ನೀಡುವ ವೇಳೆ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಧರಿಸುತ್ತಿದ್ದ ಮಾದರಿಯ ಪೇಟವನ್ನ ಉಡುಗೊರೆಯಾಗಿ ನೀಡಲು ಸಿದ್ಧತೆ ನಡೆದಿದೆ. ಬನಾರಸ್ ಸೀರೆ, ಮೋಲ್ಡ್ ಬಳಸಿ ಪೇಟ ತಯಾರಿಸಲಾಗಿದೆ.

ಕಲಾವಿದ ನಂದನ್ ಸಿಂಗ್ ಅವರು ಈ ಪೇಟವನ್ನು ಸಿದ್ಧಗೊಳಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಧರಿಸುತ್ತಿದ್ದ ಮಾದರಿಯ ಪೇಟ ಇದಾಗಿದ್ದು, ಕೆಂಪು ವರ್ಣದ ಮೈಸೂರು ರೇಷ್ಮೆ, ಬನಾರಸ್ ಸಾಫ್ಟ್ ಸಿಲ್ಕ್ ಅನ್ನು ಬಳಸಲಾಗಿದೆ. ಮಧ್ಯದಲ್ಲಿ ಮೈಸೂರಿನ ರಾಜ ಲಾಂಛನ ಗಂಡುಬೇರುಂಡವನ್ನು ಸೇರಿಸಲಾಗಿದೆ. ಎರಡೂಕಡೆ ಸಣ್ಣ ಸಣ್ಣ ಮುತ್ತುಗಳನ್ನು ಪೋಣಿಸಲಾಗಿದೆ. ಇದಕ್ಕಾಗಿ ಕಲಾವಿದ ನಂದನ್ ಸಿಂಗ್ 5 ದಿನಗಳ ಕಾಲ ಶ್ರಮಿಸಿದ್ದಾರೆ.

ಪ್ರಧಾನಿ ಆಗಮನದ ಹಿನ್ನೆಲೆಯಲ್ಲಿ ಇಡೀ ಆದಿಚುಂಚನಗಿರಿ ಕ್ಷೇತ್ರ ಮಧುವಣಗಿತ್ತಿಯಂತೆ ಕಂಗೊಳಿಸುತ್ತಿದೆ. ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ಭೈರವೈಕ್ಯ ಮಂದಿರವು ಹಲವು ವಿಶೇಷತೆಗಳಿಂದ ಕೂಡಿದೆ. ಕಾರ್ಯಕ್ರಮಕ್ಕಾಗಿ ಬಿಜಿಎಸ್ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆ ನಿರ್ಮಾಣವಾಗಿದ್ದು, ಲಕ್ಷಕ್ಕೂ ಅಧಿಕ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ. ಮುನ್ನೆಚ್ಚರಿಕಾ ಕ್ರಮವಾಗಿ 2000ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಕಾರ್ಯಕ್ರಮದ ನಂತರ ಮತ್ತೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಮರಳಿ, ಅಲ್ಲಿಂದ ಕೇರಳ ಪ್ರವಾಸಕ್ಕೆ ತೆರಳಲಿದ್ದಾರೆ.

ಒಂದೇ ವೇದಿಕೆಯಲ್ಲಿ ಡಿಕೆ– ಹೆಚ್ಡಿಕೆ: ಇದೊಂದು ಪಕ್ಷಾತೀತ ಕಾರ್ಯಕ್ರಮ ಆಗಿರುವುದರಿಂದ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಇತರೆ ಗಣ್ಯರು ಭಾಗವಹಿಸಲಿದ್ದಾರೆ.

ಕಾರ್ಯದರ್ಶಿ ನಜೀರ್ ಅಹಮದ್ ವಜಾ

ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದರೂ ರಾಜೀನಾಮೆ ನೀಡಿರಲಿಲ್ಲ. ಅವರನ್ನು ವಜಾಗೊಳಿಸುವಂತೆ ಎಐಸಿಸಿ ತಿಳಿಸಿದ ಬೆನ್ನಲ್ಲೇ ಈ ಆದೇಶ ಹೊರಬಿದ್ದಿದೆ. ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಮೇಲೂ ತೂಗುಗತ್ತಿ ತೂಗುತ್ತಿದ್ದು ಅವರನ್ನೂ ಯಾವುದೇ ಕ್ಷಣದಲ್ಲಿ ಶಿಸ್ತು ಕ್ರಮಕ್ಕೆ ಒಳಪಡಿಸುವುದನ್ನು ತಳ್ಳಿಹಾಕುವಂತಿಲ್ಲ.

ಈಗಾಗಲೇ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿರುವುದಲ್ಲದೆ, ಆ ಸಮಿತಿಯನ್ನೇ ವಿಸರ್ಜಿಸಲಾಗಿದೆ. ಉಪಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಎಐಸಿಸಿ, ಪಕ್ಷ ವಿರೋಧಿ ಕೆಲಸ ಮಾಡಿದವರ ವಿರುದ್ಧ ಶಿಸ್ತುಕ್ರಮ ಕೈಗೊಂಡಿದೆ.

ನಜೀರ್ ಅವರ ವಜಾ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಜಮೀರ್ ಅಹಮದ್ ಅವರನ್ನು ತಮ್ಮ ಕಾವೇರಿ ನಿವಾಸಕ್ಕೆ ಕರೆಸಿಕೊಂಡು ಸುಮಾರು 30 ನಿಮಿಷ ಮುಖಾಮುಖಿ ಚರ್ಚೆ ಮಾಡಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ ನಡೆಸಿದರೆ ವರಿಷ್ಠರು ಕೈಕಟ್ಟಿ ಕೂರುವುದಿಲ್ಲ. ನಿಮ್ಮ ಮೇಲೂ ಯಾವುದೇ ಸಂದರ್ಭದಲ್ಲೂ ಶಿಸ್ತುಕ್ರಮ ಕೈಗೊಳ್ಳಬಹುದು. ಅಂತಹ ಸನ್ನಿವೇಶದಲ್ಲಿ ನಾನೇನೂ ಮಾಡಲಾಗದು.

ನನ್ನನ್ನೂ ಸೇರಿದಂತೆ ಯಾವುದೇ ಮುಖಂಡರಾಗಲೀ, ಕಾರ್ಯಕರ್ತರಾಗಲೀ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡರೆ, ರಾಹುಲ್‌ಗಾಂಧಿ ಅವರೇ ಕ್ರಮ ಕೈಗೊಳ್ಳುವಂತೆ ರಾಜ್ಯ ಘಟಕಕ್ಕೆ ಸೂಚಿಸುತ್ತಾರೆ. ಪಕ್ಷದ ಚೌಕಟ್ಟಿನಲ್ಲೇ ಕೆಲಸ ಮಾಡಿ, ದೆಹಲಿಯಿಂದ ಯಾವ ಸಂದೇಶ ಬರುತ್ತದೋ, ಆ ರೀತಿ ನಾನು ನಡೆದುಕೊಳ್ಳಬೇಕಾಗುತ್ತದೆ ಎಂಬುದಾಗಿ ಹೇಳಿ ಕಳುಹಿಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಬಲವಾದ ನಂಬಿಕೆ

ಡಾ.ಅಂಬೇಡ್ಕರ್ ವಾದ. ದಮನಿತರ ಪರ ಹೋರಾಡಿದರಲ್ಲದೆ, ಹಿಂದೂ ಧರ್ಮದ ಸುಧಾರಣೆಗೂ ಬಹಳ ಪ್ರಯತ್ನ ಮಾಡಿದರು. ಆದರೆ, ಅದು ಕೈಗೂಡದಿದ್ದಾಗ ಹಿಂದೂ ಧರ್ಮ ತ್ಯಜಿಸಿದರು. ಅಸಮಾನತೆಗೆ ಕಾರಣವಾದ ಮನುವಾದ ತಿರಸ್ಕರಿಸಿದರು ಎಂದರು.

ಸಾಮಾಜಿಕ, ಆರ್ಥಿಕ ಶಕ್ತಿ ಎಲ್ಲರಿಗೂ ದೊರಕಿದಾಗ ಮಾತ್ರ ಸ್ವಾವಲಂಬನೆ ಸಾಧ್ಯ. ಎಲ್ಲ ಸಂಕೋಲೆಗಳಿಂದ ಮುಕ್ತರಾಗಲು ಶಿಕ್ಷಣ ಒಂದೇ ಪ್ರಬಲ ಅಸ್ತ್ರ ಎಂಬುದನ್ನು ಡಾ.ಅಂಬೇಡ್ಕರ್ ಸಾರಿದ್ದರು.

ಅವರ ಹೋರಾಟದ ಮನೋಭಾವ ಇಂಥ ಸಂವಿಧಾನ ರಚಿಸಲು ಸಾಧ್ಯವಾಯಿತು. ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಿದೆ. ಡಾ.ಅಂಬೇಡ್ಕರ್, ರಾಮ್ ಮನೋಹರ್ ಲೋಹಿಯಾ, ಜವಾಹರ ಲಾಲ್ ನೆಹರೂ ಪಡೆದಂತಹ ಶಿಕ್ಷಣ ಎಲ್ಲರಿಗೂ ಸಿಗಬೇಕು, ವೈಚಾರಿಕತೆ, ವೈಜ್ಞಾನಿಕತೆ, ಮಾನವೀಯತೆಯ ಶಿಕ್ಷಣ ನೀಡಬೇಕು.

ವೈಜ್ಞಾನಿಕ ಶಿಕ್ಷಣ ದೊರೆಯದಿದ್ದರೆ ಸಮಸಮಾಜ ನಿರ್ಮಾಣ ಅಸಾಧ್ಯ. ಸರ್ಕಾರದ ಗ್ಯಾರಂಟಿ ಯೋಜನೆಗಳು ಸಾಮಾಜಿಕ, ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡುತ್ತಿರುವುದಲ್ಲದೆ, ಸಮಸಮಾಜ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನವಾಗಿದೆ.

ಮನುವಾದಿಗಳು ಸಂವಿಧಾನ ವಿರೋಧಿಗಳು, ಸುಳ್ಳು ಹೇಳಿ ಸಮಾಜದ ದಾರಿ ತಪ್ಪಿಸುತ್ತಾರೆ. ಡಾ.ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಸೋಲಿಸಿದರು. ದೆಹಲಿಯಲ್ಲಿ ಅವರ ಶವ ಸಂಸ್ಕಾರಕ್ಕೆ ಅವಕಾಶ ನೀಡಲಿಲ್ಲ ಎಂಬುದಾಗಿ ಅಪಪ್ರಚಾರ ಮಾಡುತ್ತಾರೆ. ಇಂತಹ ಸುಳ್ಳುಗಳನ್ನು ಜನ ನಂಬಬಾರದು.

ಡಾ.ಅಂಬೇಡ್ಕರ್ ಬದುಕು ಮತ್ತು ಉದ್ದೇಶವನ್ನು ಮನನ ಮಾಡಿಕೊಳ್ಳಬೇಕು. ಅವರು ಎಲ್ಲಾ ಕಾಲಕ್ಕೂ ಸಲ್ಲುತಾರೆ ಎಂದರು. ಸರ್ಕಾರಿ ವಸತಿ ಶಾಲೆಗಳ ಶೇ.97.22 ವಿದ್ಯಾರ್ಥಿಗಳು ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಅತೀ ಹೆಚ್ಚು ಅಂಕ ಗಳಿಸಿರುವುದು ಹೆಗ್ಗಳಿಕೆಯಾಗಿದೆ ಎಂದರು.

ಕಾರಿನಲ್ಲಿದ್ದ ಮೂವರು ದುರ್ಮರಣ



ಫಲಕಾರಿಯಾಗದೆ ಸಾವನ್ನಪ್ಪಿದ್ದು, ನಹಿಯ ಮುಬಾರಕ್‌ಗೆ ಚಿಕಿತ್ಸೆ ಮುಂದುವರೆಸಲಾಗಿದೆ. ಸರ್ಕಲ್ ಇನ್ಸ್‌ಪೆಕ್ಟರ್ ಎನ್.ಜಯ ಕುಮಾರ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ, ಟಿಪ್ಪರ್ ಚಾಲಕ ಬೈಜು ಎಂಬಾತನನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸ್ಥಳೀಯರ ಆಕ್ರೋಶ: ಒಂದೆಡೆ ತಾಲೂಕಿನ ಖನಿಜ ಸಂಪತ್ತು ಲೂಟಿಯಾಗುತ್ತಿದ್ದು, ಮತ್ತೊಂದೆಡೆ ಟಿಪ್ಪರ್‌ಗಳ ಹಾವಳಿಯಿಂದ ಸಾರ್ವಜನಿಕರ ಪ್ರಾಣಹಾನಿಯಾಗುತ್ತಿದೆ. ಪೊಲೀಸರು, ಗಣಿ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕೇರಳಂ ಲಾಬಿಗೆ ಮಣಿದು, ಮೌನವಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ತಡೆದು ಪ್ರತಿಭಟನೆ: ಅಪಘಾತದ ಹಿನ್ನೆಲೆಯಲ್ಲಿ ಸಾಮೂಹಿಕ ನಾಯಕತ್ವ ರೈತ ಸಂಘಟನೆ ಮುಖಂಡರು ಮತ್ತು ಕಾರ್ಯಕರ್ತರು ರಸ್ತೆ ತಡೆದು, ಪ್ರತಿಭಟಿಸಿದರು. ಟಿಪ್ಪರ್ ಹಾವಳಿ ತಡೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ವಾರದಿಂದ ಅಹೋರಾತ್ರಿ ಧರಣಿ ನಡೆಸುತ್ತಿರುವ ರೈತರು, ಟಿಪ್ಪರ್ ಡಿಕ್ಕಿಯಾಗಿ ಮೂವರು ಮೃತಪಟ್ಟ ವಿಷಯ ತಿಳಿದು ದಿಢೀರ್ ರಸ್ತೆಗಿಳಿದರು. ಸಾರಿಗೆ ಬಸ್ ನಿಲ್ದಾಣದ ಮುಂಭಾಗ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಕೆಲ ಕಾಲ ವಾಹನ ಸಂಚಾರ ತಡೆದು, ಆಕ್ರೋಶ ವ್ಯಕ್ತಪಡಿಸಿದರು. ಯಮರೂಪಿಯಾದ ಟಿಪ್ಪರ್‌ಗಳು ತಾಲೂಕಿನಲ್ಲಿ ಸಂಚರಿಸುವುದನ್ನು ತಡೆಯುವಂತೆ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದೇವೆ. ನೆಪಕ್ಕೆ ಟಿಪ್ಪರ್ ಸಂಚಾರಕ್ಕೆ ಸಮಯ ನಿಗದಿ ಮಾಡಿ, ಸಂಪೂರ್ಣ ನಿಯಂತ್ರಿಸುವಲ್ಲಿ ಆಡಳಿತ ವ್ಯವಸ್ಥೆ ವಿಫಲವಾಗಿದೆ. ಪರಿಣಾಮ ಟಿಪ್ಪರ್‌ನಿಂದ ಇಂದು ಕೂಡ ಮೂವರು ಬಲಿಯಾಗಿದ್ದಾರೆ ಆಕ್ರೋಶ ವ್ಯಕ್ತಪಡಿಸಿ, ನಂತರ ತಾಲೂಕು ಕಚೇರಿ ಮುಂಭಾಗ ಸಮಾವೇಶಗೊಂಡು ಅಹೋರಾತ್ರಿ ಧರಣಿ ಮುಂದುವರೆಸಿದರು. ಏ.21ರಂದು ಮುಖ್ಯಮಂತ್ರಿಗಳು ಆಗಮಿಸಿದ ವೇಳೆ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ತೀರ್ಮಾನ ಪ್ರಕಟಿಸಿದರು.

ಸಹಾಯ ಹಸ್ತ



ಬೆಂಗಳೂರಿನ ಬಸವೇಶ್ವರನಗರದಲ್ಲಿರುವ ಕರ್ನಾಟಕ ಇಂಜಿನಿಯರ್ ಅಕಾಡೆಮಿಯಲ್ಲಿ ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ವತಿಯಿಂದ ಆಯೋಜಿಸಿದ್ದ ಕ್ಲಬ್ಸ್ ಇನ್ಸ್ಟಾಲೇಷನ್ ಮತ್ತು ಕ್ಯಾಬಿನೆಟ್ ಪ್ರೆಸೆಂಟೇಷನ್–2026–27 ಕಾರ್ಯಕ್ರಮದಲ್ಲಿ ಬೌರಿಂಗ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗೆ 25 ವೀಲ್ ಚೇರ್, 100 ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಶಾಲಾ ಬ್ಯಾಗ್, ಲ್ಯಾಪ್‌ಟಾಪ್ ಒಳಗೊಂಡಂತೆ ಸುಮಾರು ರೂ. 5 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಶಾಸಕರಾದ ಜಿ.ಟಿ.ದೇವೇಗೌಡರು ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಕ್ಲಬ್‌ನ ಅಂತರರಾಷ್ಟ್ರೀಯ ಅಧ್ಯಕ್ಷ ಬಾಲಗಂಗಾಧರ ಶಾಸ್ತ್ರಿ, ಅಂತರರಾಷ್ಟ್ರೀಯ ನಿರ್ದೇಶಕರಾದ ಅಜಂತ ರಂಗಸ್ವಾಮಿ, ಜಿ.ಪಿ. ದಿವಾಕರ್, ಕರುಣ ವೀರ ಕೆಂಪಯ್ಯ ಹಾಗೂ ಕ್ಲಬ್‌ನ ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.

ಕೆಕೆಆರ್ ವಿರುದ್ಧ ಚೆನ್ನೈಗೆ 'ಸೂಪರ್' ಗೆಲುವು

ಚೆನ್ನೈ, ಏ.14(ವಿವಿಹೆಚ್)– ನೂರ್ ಅಹ್ಮದ್ ಮಾರಕ ಬೌಲಿಂಗ್ ದಾಳಿ, ಸಂಜು ಸ್ಯಾಮ್ಸನ್ ಹಾಗೂ ಡೆವಾಲ್ಡ್ ಬ್ರೆವಿಸ್ ಅವರ ಜವಾಬ್ದರಿಯುತ ಬ್ಯಾಟಿಂಗ್ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು 32 ರನ್ ಗಳಿಂದ ಮಣಿಸಿದ ಸಿಎಸ್‌ಕೆ ಟೂರ್ನಿಯಲ್ಲಿ ಎರಡನೇ ಗೆಲುವು ದಾಖಲಿಸಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್–2026ರ 22ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಚೆನ್ನೈಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 192 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತಲಾಗದೇ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 160ರನ್ ಗಳಿಸಲಷ್ಟೆ ಶಕ್ತವಾಯಿತು.

ಸಿಎಸ್‌ಕೆ ಪರ ಆರಂಭಿಕರಾಗಿ ಕಣಕ್ಕಿಳಿದ ನಾಯಕ ಋತುರಾಜ್ ಗಾಯಕ್ವಾಡ್ ಕೇವಲ 7 ರನ್‌ಗೆ ಔಟ್ ಆಗುವ ಮೂಲಕ ಮತ್ತೊಮ್ಮೆ ವಿಫಲರಾದರು. ಮತ್ತೋರ್ವ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ್ 32 ಎಸೆತಗಳಲ್ಲಿ 48 ರನ್ ಗಳಿಸಿದರು. ಬಳಿಕ ಬಂದ ಆಯುಷ್ ಮಾತ್ರೆ 17 ಎಸೆತಗಳಲ್ಲಿ 38 ರನ್ ಚಚ್ಚಿದರು. ಇನ್ನುಳಿದಂತೆ ಡೆವಾಲ್ಡ್ ಬ್ರೆವಿಸ್ 29 ಎಸೆತಗಳಲ್ಲಿ 41 ರನ್ ಬಾರಿಸಿದರೆ, ಸರ್ಫರಾಜ್ ಖಾನ್ 23, ಶಿವಂ ದುಬೆ ಅಜೇಯ 13 ಹಾಗೂ ಜೇಮಿ ಓವರ್ಟನ್ ಅಜೇಯ 7 ರನ್ ಗಳಿಸಿದರು.

ಕೊಲ್ಕತ್ತಾ ನೈಟ್ ರೈಡರ್ಸ್ ಪರ ಕಾರ್ತಿಕ್ ತ್ಯಾಗಿ 2 ವಿಕೆಟ್, ಸುನಿಲ್ ನರೈನ್, ಅನುಕುಲ್ ರಾಯ್ ಹಾಗೂ ವೈಭವ್ ಅರೋರಾ ತಲಾ ಒಂದೊಂದು ವಿಕೆಟ್ ಪಡೆದರು.

ಸಿಎಸ್‌ಕೆ ನೀಡಿದ ಸಾಧಾರಣ ಮೊತ್ತ ಬೆನ್ನತ್ತಿದ ಕೆಕೆಆರ್‌ಗೆ ಮಂದ ಗತಿಯ ಬ್ಯಾಟಿಂಗ್ ಕಂಟಕವಾಯಿತು. ಫಿನ್ ಆಲೆನ್ 1(3), ಸುನಿಲ್ ನರೈನ್ 24(17), ನಾಯಕ ಅಜಿಂಕ್ಯಾ ರಹಾನೆ 28(22), ಅಂಗ್‌ಕ್ರಿಶ್ ರಘುವಂಶಿ 27(19), ರಿಂಕು ಸಿಂಗ್ 6(12), ಕ್ಯಾಮರೋನ್ ಗ್ರೀನ್ ಗೋಲ್ಡನ್ ಡಕ್‌ಔಟ್. ರಮಣ್‌ದೀಪ್ 35(23) ಹಾಗೂ ಪೋವೆಲ್ ಅಜೇಯ 31(22) ರನ್ ಗಳಿಸಿದರು. ಅಂಕುಲ್ ರಾಯ್ 1ರನ್ ಗಳಿಸಿ ಸ್ಕ್ರೀಜ್‌ನಲ್ಲಿದ್ದರು.


ಸಿಎಸ್‌ಕೆ ಪರ ನೂರ್ ಅಹ್ಮದ್ 3 ವಿಕೆಟ್ ಪಡೆದರು. ಅನ್ಷುಲ್ ಕಾಂಬೋಜ್ 2, ಅಕಿಲ ಹೊಸೇನ್ ಹಾಗೂ ಖಲೀಲ್ ಅಹ್ಮದ್ ತಲಾ ಒಂದೊಂದು ವಿಕೆಟ್ ಪಡೆದರು.

ಸಿಎಂ ಆಗಿ ಸಾಮ್ರಾಟ್ ಚೌಧರಿ ಆಯ್ಕೆ!

ಸಂಪುಟ ವಿಸರ್ಜನೆಗೆ ನಿತೀಶ್ ಕುಮಾರ್ ಶಿಫಾರಸು ಮಾಡಿದರು. ಕಳೆದ ತಿಂಗಳು 75ನೇ ವರ್ಷಕ್ಕೆ ಕಾಲಿಟ್ಟ ಮತ್ತು ವಾರದ ಹಿಂದೆ ರಾಜ್ಯಸಭಾ ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸಿದ ಕುಮಾರ್ ಇಂದು ಕೊನೆಯ ಕ್ಯಾಬಿನೆಟ್ ಸಭೆಯ ನಂತರ ರಾಜಭವನಕ್ಕೆ ತೆರಳಿದ್ದು, ಅಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ನಂತರ ಇಷ್ಟೆಲ್ಲಾ ಬೆಳವಣಿಗೆಯಾಗಿದೆ. ಹಿಂದಿ ಹಾರ್ಟ್ ಲ್ಯಾಂಡ್ ನಲ್ಲಿ ಇಲ್ಲಿಯವರೆಗೂ ಬಿಜೆಪಿ ಮುಖ್ಯಮಂತ್ರಿ ಹುದ್ದೆಯಿಲ್ಲದ ಏಕೈಕ ರಾಜ್ಯವಾಗಿದ್ದ ಬಿಹಾರದಲ್ಲಿ ಇದೀಗ ಗದ್ದುಗೆ ಹಿಡಿಯುವ ಅವಕಾಶ ದೊರೆತಿದ್ದು, ಪಕ್ಷದ ನಾಯಕರು ಜಾಗರೂಕರಾಗಿದ್ದಾರೆ. 243–ಬಲದ ಬಿಹಾರ ಅಸೆಂಬ್ಲಿಯಲ್ಲಿ, ಓಆಂ ಒಟ್ಟು 202 ಸ್ಥಾನಗಳೊಂದಿಗೆ ಬಹುಮತವನ್ನು ಹೊಂದಿದೆ, ಅದರಲ್ಲಿ ಬಿಜೆಪಿ 89 ರಲ್ಲಿ ಸಿಂಹ ಪಾಲನ್ನು ಹೊಂದಿದೆ. ನಂತರ JD(U)ನ 85 ಸ್ಥಾನ ಹೊಂದಿದ್ದು, ಉಳಿದಂತೆ LJP(RV), HAM ಮತ್ತು RLM ಕೆಲವು ಸ್ಥಾನಗಳನ್ನು ಹೊಂದಿವೆ.

ನಮಗೆ ಅಸಮಾಧಾನ ಇದ್ದದ್ದು ನಿಜ...

ಬೆಂಗೂರು: ದಾವಣಗೆರೆಯಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡದಿದ್ದಕ್ಕೆ ನಮಗೆ ಅಸಮಾಧಾನ ಇದ್ದದ್ದು ನಿಜ ಎಂದು ಸಚಿವ ಜಮೀರ್ ಅಹಮದ್ ತಿಳಿಸಿದ್ದಾರೆ.



ಪಕ್ಷ ಸಮರ್ಥ್ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದ ನಂತರ ನಾವು ಕೆಲಸ ಮಾಡಿದ್ದೇವೆ. ಆದರೆ, ಸ್ಥಳೀಯವಾಗಿ ಕೆಲವು ಮುಖಂಡರು ಮತ್ತು ಕಾರ್ಯಕರ್ತರು ದೂರ ಉಳಿದಿರಬಹುದು ಎಂದು ಹೇಳಿದ್ದಾರೆ. ಜಬ್ಬಾರ್ ಸೇರಿದಂತೆ ಸಮುದಾಯದ 7 ಮುಖಂಡರ ಹೆಸರನ್ನು ಶಿಫಾರಸು ಮಾಡಿ ಇವರಲ್ಲಿ ಯಾರಿಗೇ ಟಿಕೆಟ್ ನೀಡಿದರೆ, ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ನನ್ನದು ಎಂಬುದಾಗಿ ಪಕ್ಷಕ್ಕೆ ತಿಳಿಸಿದ್ದೆ. ಆದರೆ, ನಮ್ಮವರಿಗೆ ಟಿಕೆಟ್ ನೀಡಲಿಲ್ಲ. ಅದಕ್ಕೆ ಅಸಮಾಧಾನ ಇದ್ದದ್ದು ನಿಜ. ಆಮೇಲೆ ಎಲ್ಲವೂ ಸರಿ ಹೋಯಿತು. ಪಕ್ಷ ಕೆಲವರ ಮೇಲೆ ಶಿಸ್ತುಕ್ರಮ ಕೈಗೊಂಡಿದೆ ಅದು ಯಾವ ಕಾರಣಕ್ಕೆ ಎಂಬ ಮಾಹಿತಿ ಇಲ್ಲ ಎಂದ ಜಮೀರ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ತಮ್ಮನ್ನೇ ಗುರಿ ಮಾಡಿ ಏನೂ ಹೇಳಿಲ್ಲ. ನಾನೇನು ಅಲ್ಪಸಂಖ್ಯಾತರ ನಾಯಕ ಎಂಬುದಾಗಿ ಸ್ವಯಂ ಘೋಷಿಸಿಕೊಂಡಿಲ್ಲ.

ನಾನೊಬ್ಬ ಸಾಮಾನ್ಯರಲ್ಲಿ ಸಾಮಾನ್ಯ ಕಾರ್ಯಕರ್ತ, ಜನರ ಮಧ್ಯೆ ಇರುವವನು. ನಾನು ಯಾವತ್ತೂ ನಾಯಕನಾಗಲು ಹೊರಟಿಲ್ಲ ನಾನು ನಾಯಕ ಎಂದೂ ಹೇಳಿಕೊಂಡಿಲ್ಲ, ನಾನು ಜನಸೇವಕ ಅಷ್ಟೇ ಎಂದರು.

ಮೈಸೂರಿನ ನಾನಾ ಕಡೆ ಡಾ.ಅಂಬೇಡ್ಕರ್ ಜಯಂತಿ...



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಟೌನ್ ಹಾಲ್ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಾಲಿಕೆಯ ಮಾಜಿ ಸದಸ್ಯೆ ಪ್ರೇಮಾ ಶಂಕರೇಗೌಡ, ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷರು ಹಾಗೂ ನಿವೃತ್ತ ಶಿಕ್ಷಕರಾದ ನಾಗಣ್ಣ, ಉದ್ಯಮಿ ದೇವರಾಜ್, ನಂಜನಗೂಡು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ದೀಪು, ಜೆಡಿಎಸ್ ಯುವ ಮುಖಂಡರಾದ ಗಗನದೀಪು, ರಾಜಪ್ಪ ಇತರರು ಉಪಸ್ಥಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಹಿನ್ನೆಲೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಶೋಕಪುರಂ ಅಂಬೇಡ್ಕರ್ ಉದ್ಯಾನವನದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಮಾಜಿ ಉಪಮೇಯರ್ ಸಿದ್ದರಾಜು, ವಿ.ರಾಮಸ್ವಾಮಿ, ಮುಖಂಡರಾದ ಜೋಗಿ ಮಹೇಶ್, ಮಂಜುನಾಥ್, ಮಾಜಿ ಬ್ಲಾಕ್ ಅಧ್ಯಕ್ಷ ರಾಜು, ಜೈರಾಜ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಕೆ.ಆರ್ ವಿಧಾನಸಭಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ್‌ಕುಮಾರ್, ಜೈಮಧುರಾಜ್, ಅಜಯ್, ಪುಟ್ಟರಾಜು ಮತ್ತಿತರರಿದ್ದರು.



ಡಾ.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಅಂಗವಾಗಿ ಮೈಸೂರಿನ ಟೌನ್ ಹಾಲ್ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಮಾಲಾರ್ಪಣೆ ಮಾಡಿದರು. ಈ ವೇಳೆ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಮೈಸೂರು ಜಿಲ್ಲಾ ಎಸ್‌ಟಿ ವಿಭಾಗದ ಜಿಲ್ಲಾಧ್ಯಕ್ಷ ಮಹೇಶ್, ಕೆಪಿಸಿಸಿ ಪ.ಜಾತಿ ವಿಭಾಗದ ಸದಸ್ಯ ಚಿಕ್ಕನಹಳ್ಳಿ ಸಂತೋಷ್, ಮೈಸೂರು ನಗರ ಕಾಂಗ್ರೆಸ್ ವಕ್ತಾರ ರಾಜೇಶ್, ಮುಖಂಡರಾದ ನಾಗರಾಜ್, ಚೆಲುವರಾಜು, ಶಿವರಾಜ್, ಪ್ರಕಾಶ್, ಪ್ರಶಾಂತ್, ಪುಟ್ಟರಾಜು ಇನ್ನಿತರರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಟೌನ್ ಹಾಲ್ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ಮೈಸೂರು ಜಿಲ್ಲಾ ರೈತ ಸಂಘದ ಪದಾಧಿಕಾರಿಗಳಾದ ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಪ್ರೇಮ್ ರಾಜ್, ಮೈಸೂರು ತಾಲೂಕು ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ, ನಂಜನಗೂಡು ತಾಲೂಕು ಉಪಾಧ್ಯಕ್ಷ ಶ್ರೀಕಂಠ, ಮೈಸೂರು ತಾಲೂಕು ಉಪಾಧ್ಯಕ್ಷ ಗುಡುಮಾದನಹಳ್ಳಿ ರಘು ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಬರೀ ಚಿತ್ರ ಇಲ್ಲವೇ ಘೋಷಣೆಗೆ ಸೀಮಿತರಲ್ಲ

ದೇಶದ ಜನರ ಬದುಕಿನ ಒಂದು ಭಾಗವೇ ಆಗಿದ್ದಾರೆ

- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಮತ
- ಸಂವಿಧಾನ ರಚನೆಯಾಗುವವರೆಗೆ ಭಾರತೀಯರಿಗೆ ಸಮಾನತೆ ಗೊತ್ತೇ ಇರಲಿಲ್ಲ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ 'ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ' ಆಚರಣೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡುತ್ತಿರುವುದು.

ಮೈಸೂರು,ಏ.14(ಎಂಕೆ)– ಅಂಬೇಡ್ಕರ್ ಎಂದರೆ ಗೋಡೆಯ ಮೇಲಿರುವ ಬರಿ ಚಿತ್ರವಲ್ಲ, ಆಗಾಗ ಘೋಷಣೆ ಕೂಗಲು ಬಳಸುವ ವಸ್ತುವೂ ಅಲ್ಲ. ನಾವು–ನೀವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಸೂತ್ರ ಮತ್ತು ದೇಶದ ಜನರ ಬದುಕಿನ ಒಂದು ಭಾಗವೇ ಆಗಿದ್ದಾರೆ. ಅಂಬೇಡ್ಕರ್ ಬಗ್ಗೆ ಮಾತನಾಡಿದರೆ ನಮ್ಮ ಬಗ್ಗೆಯೇ ಮಾತನಾಡಿದಂತೆ. ಸಂವಿಧಾನಕ್ಕೆ ಅನ್ಯಾಯವಾದರೆ, ನಮಗೆ ಅನ್ಯಾಯವಾದಂತೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ 'ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುರಾಣಗಳು, ಕಾವ್ಯಗಳು ಮತ್ತು ಶಾಸ್ತ್ರಗಳನೆಲ್ಲಾ ಬಲಪಂಥೀಯ ರಾಜಕಾರಣಿಗಳು ಸರ್ವನಾಶ ಮಾಡಿದ್ದಾರೆ. ಅವರೇಳುವಷ್ಟು ಕೆಟ್ಟದಾಗಿ ರಾಮಯಾಣ ಮತ್ತು ಮಹಾಭಾರತ ಇಲ್ಲ. ರಾಮಾಯಣದ ಕೊನೆಯಲ್ಲಿ ಮಹರ್ಷಿ ವಾಲ್ಮೀಕಿ ಆಶ್ರಮದಲ್ಲಿ ಆಶ್ರಯ ಪಡೆದಿರುವ ಲವ–ಕುಶರು, ರಾಮಾಯಣ ಕಾವ್ಯವನ್ನು ಓದುತ್ತಾ ಹಾಡುವಾಗ ಮಹರ್ಷಿ ವಾಲ್ಮೀಕಿ ರಾಮಾಯಣದ ಕರ್ತೃ ಮಾತ್ರವಲ್ಲದೆ ಪ್ರೇಕ್ಷಕರೂ ಆಗಿರುತ್ತಾರೆ. ಅದರಂತೆ ಅಂಬೇಡ್ಕರ್ ನಮ್ಮೆಲ್ಲರ ನಾಯಕನಾಗಿರುವಂತೆ ನಮ್ಮೆಲ್ಲರೊಳಗೆ ಅಂಬೇಡ್ಕರ್ ಇದ್ದಾರೆ ಎಂದು ಹೇಳಿದರು.

ಡಾ.ಅಂಬೇಡ್ಕರ್ ಶಕ್ತಿ: ಸ್ವಾತಂತ್ರ್ಯ ಕಾಲಘಟ್ಟದಲ್ಲಿ ದೇಶಕಟ್ಟಿದವರಿಗೆ ಇಲ್ಲವಾಗಿದ್ದ ಅಂಬೇಡ್ಕರ್ ಎಂಬ ಶಕ್ತಿ ನಮಗೆ ದೊರೆತಿದೆ. ಈ ಶಕ್ತಿಯನ್ನು ನಮ್ಮ ಶಕ್ತಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳಬೇಕಿದೆ. ಅಂಬೇಡ್ಕರ್ ಸಂವಿಧಾನ ಬರೆಯುವವರೆಗೂ ಭಾರತೀಯ ಸಮಾಜಕ್ಕೆ ಸಮಾನತೆ ಎಂಬುದು ಗೊತ್ತೇ ಇರಲಿಲ್ಲ. ಸಮಾಜದಲ್ಲಿ ಪ್ರಾದೇಶಿಕ ಅಸಮಾನತೆ, ಲಿಂಗ ಮತ್ತು ಜಾತಿ ಅಸಮಾನತೆಯನ್ನು ನೆಲೆಗೊಳಿಸಿ ಅದನ್ನು ಸಮರ್ಥಿಸಿಕೊಳ್ಳಲು ಶಾಸ್ತ್ರ–ಪುರಾಣಗಳನ್ನು ಬರೆದು ಅದೇ ಸತ್ಯ ಎಂದು ನಂಬಿಸಲಾಗಿದೆ. ಅದರಂತೆ ನಾವುಗಳು ಕೂಡ ಇಂದಿಗೂ ನಮಗೆ ಅನ್ಯಾಯ ಮಾಡಿರುವ ಕೃತಿಗಳನ್ನೇ ಓದುತ್ತಿದ್ದೇವೆ. ಇದೆಲ್ಲವನ್ನು ಬಿಡಿಸಬೇಕಾದರೆ ನಮಗೆ ಅಂಬೇಡ್ಕರ್ ಅರಿವಾಗಬೇಕು ಎಂದು ತಿಳಿಸಿದರು.

ಭಾರತೀಯ ಜ್ಞಾನ ಪರಂಪರೆಯಲ್ಲಿ ಪರಾವಿದ್ಯೆ ಮತ್ತು ಅಪರವಿದ್ಯೆ ಎಂಬ ಎರಡು ಭಾಗವಿದೆ. ಪರಾವಿದ್ಯೆ ಎಂದರೆ ಸತ್ತಮೇಲೆ ಏನಾಗುತ್ತಾರೆ ಎಂಬುದಾಗಿದ್ದು, ಭಾರತದ ಶೇ.75 ರಷ್ಟು ಶಾಸ್ತ್ರಗಳು ಸತ್ತ ಮೇಲೆ ಏನಾಗುತ್ತೇವೆ ಎಂದು ಹೇಳುತ್ತವೆಯೇ ಹೊರತು ಬದುಕಿದ್ದಾಗ ಸಮಾನತೆಯ ನೆಲೆಗಟ್ಟಿನಲ್ಲಿ ಹೇಗೆ ಬದುಕು ಕಟ್ಟಬೇಕು ಎಂಬುದನ್ನು ಹೇಳುವುದಿಲ್ಲ. ಇಷ್ಟು ದೊಡ್ಡ ಜಗತ್ತಿನಲ್ಲಿ ಯಾರಾದರೂ ಒಬ್ಬ ಸ್ವರ್ಗ ಮತ್ತು ನರಕ ಹೇಗಿರಲಿದೆ ಎಂದು ನೋಡಿ ಬಂದಿದ್ದಾರಾ. ಯಾರೋ ಭಾಷೆಯಲ್ಲಿ ಕಟ್ಟಿದ್ದನ್ನು ನಂಬಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

2 ಸಾವಿರ ವರ್ಷದಿಂದ ಕೊಲ್ಲುತ್ತಿದೆ: ಅಂಬೇಡ್ಕರ್ ಮೊದಲು ನಿರಾಕರಿಸಿದ್ದು ಕರ್ಮ ಸಿದ್ಧಾಂತವನ್ನು. ನಮ್ಮ ದೇಶದಲ್ಲಿ ಕರ್ಮ ಸಿದ್ಧಾಂತವೆಂಬ ಬಾಂಬ್, ಎರಡು ಸಾವಿರ ವರ್ಷಗಳಿಂದ ನಮ್ಮನ್ನು ಕೊಲ್ಲುತ್ತಲೇ ಇದೆ. ಹಿಂದಿನ ಜನ್ಮ ಮತ್ತು ಮುಂದಿನ ಜನ್ಮವನ್ನು ನೋಡಿದವರು ಯಾರಿದ್ದಾರೆ. ಸತ್ತವರು ಮತ್ತೆ ಹುಟ್ಟುತ್ತಿದ್ದರೆ ಜನಸಂಖ್ಯೆ ಎಷ್ಟಾಗುತ್ತಿತ್ತು ಎಂಬುದನ್ನು ಊಹಿಸುವುದು ಕಷ್ಟ ಹಾಗಾಗಿ ಅಂಬೇಡ್ಕರ್ ಬೌದ್ಧ ಧಮ್ಮವನ್ನು ಸ್ವೀಕರಿಸಿದ್ದು. ಭಗವಾನ್ ಬುದ್ಧ ಮೋಕ್ಷ ಮಾರ್ಗವನ್ನು ತಿಳಿಸಿದರೆ ಹೊರತು ಮೋಕ್ಷ ನೀಡಲಿಲ್ಲ ಎಂದರು.

ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯನ್ನು ಇಡೀ ಪ್ರಪಂಚದಾದ್ಯಂತ ಆಚರಿಸಲಾಗುತ್ತಿದೆ. ಬಹುಶಃ ಇಂತಹ ದೊಡ್ಡ ಹಬ್ಬ ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಅವರ ವಿಚಾರಗಳನ್ನು ಮಂಥನ ಮಾಡಿಕೊಳ್ಳುವುದು ಈ ದಿನ ನಾವು ಅವರಿಗೆ ಕೊಡುವ ಅತ್ಯಂತ ದೊಡ್ಡ ಗೌರವ ಎಂದು ಹೇಳಿದರು. ನಂತರ ಮಾಜಿ ಮೇಯರ್ ನಾರಾಯಣ್ ಮತ್ತು ಹಿರಿಯ ಮುಖಂಡ ಅನಂತ್ ಅವರನ್ನು ಸನ್ಮಾನಿಸಲಾಯಿತು.


ಮಾಜಿ ಮೇಯರ್‌ಗಳಾದ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಎಸ್.ಸಿ ಘಟಕದ ಅಧ್ಯಕ್ಷ ಸಿದ್ದರಾಜು, ನಗರ ಎಸ್ಸಿ ಘಟಕದ ಅಧ್ಯಕ್ಷ ರಮೇಶ್, ಮುಖಂಡರಾದ ಪುಷ್ಪಾ ಅಮರನಾಥ್, ಪುಷ್ಪವಲ್ಲಿ, ಎಂ.ಶಿವಣ್ಣ ಮಂಜುನಾಥ್, ರವಿ ಮಂಚೇಗೌಡನಕೊಪ್ಪಲು, ಶಿವಪ್ರಸಾದ್, ಬಿ.ಎಂ. ರಾಮು, ಈಶ್ವರ್ ಚಕ್ಕಡಿ, ಸಾ.ಮಾ. ಯೋಗೇಶ್, ಅಶೋಕ ಪುರಂ ಭಾಸ್ಕರ್, ಅಶೋಕ್, ಲತಾ ಸಿದ್ದಶೆಟ್ಟಿ, ಮೋದಾಮಣಿ, ಸಿದ್ದಯ್ಯ, ಡಾ.ನಾಗರಾಜ್, ಮಂಜುನಾಥ್, ತಾರಾ, ನಾಗೇಶ್ ಮತ್ತಿತರರಿದ್ದರು.

ತಿರಸ್ಕರಿಸುವ ಅನಿವಾರ್ಯತೆ...!

"ಅಸಮಾನತೆಯನ್ನು ಸೃಷ್ಟಿಸಿ ನಮ್ಮನ್ನೇ ತಿರಸ್ಕರಿಸಿದ ಶಾಸ್ತ್ರ–ಗ್ರಂಥಗಳನ್ನು ನಾವೇ ತಿರಸ್ಕರಿಸ ಬೇಕಾದ ಅನಿವಾರ್ಯತೆ ಇದೆ. ಭಾರತೀಯ ಸಮಾಜ ಎಂದಿಗೂ ಸಮಾನತೆಯ ನೆಲೆಗಟ್ಟಿನಲ್ಲಿ ನಿಲ್ಲದೆ ಇರುವುದರಿಂದ ಇದು ಅನಿವಾರ್ಯ. ಸನಾತನ ಧರ್ಮ ಹೇಳುವ ನೀತಿ ಸಂಹಿತೆ ಮತ್ತು ಜ್ಞಾನವು, ಇಡೀ ಭಾರತದ ಜ್ಞಾನ ಸಂಹಿತೆಯ ಸಣ್ಣ ಭಾಗ. ದೇಶವನ್ನು ಮತಗಳ ಆಧಾರದ ಮೇಲೆ ಕಟ್ಟಬಾರದು. ಜನರ ಆಧಾರದ ಮೇಲೆ ಕಟ್ಟಬೇಕು. **–ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ**



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಅಶ್ವಿನ್‌ಕುಮಾರ್, ಮಾಜಿ ಮೇಯರ್ ಆರ್.ಲಿಂಗಪ್ಪ, ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಮಾಜಿ ಮೇಯರ್ ಭಾಗ್ಯವತಿ, ಮಾಜಿ ಉಪಮೇಯರ್ ಕೃಷ್ಣ, ಮುಖಂಡರಾದ ಬನ್ನೂರ್ ಕುಮಾರ್, ಶಿವಣ್ಣ, ಇನ್ನಿತರರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಟೌನ್‌ಹಾಲ್ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ರಾಜಶೇಖರ್, ರಾಜ್ಯ ಖಜಾಂಚಿ ನಂಜುಂಡ, ಡಿಪಿಕೆ ಪರಮೇಶ್, ಸೋಮು ಶಿವಕುಮಾರ್, ತಾರಾ, ವತ್ಸಲ, ಹರೀಶ, ಕಿರಣ, ಹೊನ್ನೇಗೌಡ, ಸೋಮಶೇಖರ್, ಗೀತಾ ಮತ್ತಿತರರು ಉಪಸ್ಥಿತರಿದ್ದರು.

ಚಾಮರಾಜ ಕ್ಷೇತ್ರದ ವಿವಿಧೆಡೆ ಡಾ.ಅಂಬೇಡ್ಕರ್ ಜಯಂತಿ; ಸಂಸದ ಯದುವೀರ್, ಮಾಜಿ ಶಾಸಕ ಎಲ್.ನಾಗೇಂದ್ರ ಭಾಗಿ



ಡಾ.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಂಸದ ಯದುವೀರ್, ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಮುಖಂಡರು ಪಾಲ್ಗೊಂಡು, ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.


ಮೈಸೂರು, ಏ.14– ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಹಿನ್ನೆಲೆಯಲ್ಲಿ ಚಾಮರಾಜ ಕ್ಷೇತ್ರದ ಪುರಭವನ, ಪಡುವಾರಹಳ್ಳಿ, ಕುಕ್ಕರಹಳ್ಳಿ, ಕುಂಬಾರಕೊಪ್ಪಲು ಸೇರಿದಂತೆ ವಿವಿಧೆಡೆ ನಡೆದ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಅವರೊಂದಿಗೆ ಮಾಜಿ ಶಾಸಕ ಎಲ್.ನಾಗೇಂದ್ರ ಪಾಲ್ಗೊಂಡು, ಅಂಬೇಡ್ಕರರಿಗೆ ಪುಷ್ಪನಮನ ಸಲ್ಲಿಸಿದರು.

ಈ ಸಂಧರ್ಭದಲ್ಲಿ ಮಾತನಾಡಿದ ಎಲ್.ನಾಗೇಂದ್ರ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ವಿಶ್ವದ ಶ್ರೇಷ್ಠ ವ್ಯಕ್ತಿ. ಅವರ ಮಹತ್ತರ ಕೊಡುಗೆ ಭವ್ಯ ಭಾರತದ ಇತಿಹಾಸದ ಪುಟಗಳಲ್ಲಿ ಅಚ್ಚೊತ್ತಿದೆ. ಅಂಬೇಡ್ಕರರಿಗೆ ಅವರೇ ಸಾಟಿ. ಬಡವರು, ದೀನದಲಿತರು, ಕಾರ್ಮಿಕರು, ಮಹಿಳೆಯರು ಸೇರಿದಂತೆ ಸಮಾಜದ ಸರ್ವರ ಏಳಿಗೆಗಾಗಿ ಶ್ರಮಿಸಿದರು ಎಂದು ಬಣ್ಣಿಸಿದರು.

ಭಾರತಕ್ಕೆ ಶ್ರೇಷ್ಠ ಸಂವಿಧಾನ ದೊರಕುವಲ್ಲಿ ಡಾ.ಅಂಬೇಡ್ಕರ್ ಅವರ ಪಾತ್ರ ಮಹತ್ವದ್ದು. ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳ ಮೂಲಕ ದೇಶದ ಉಜ್ವಲ ಭವಿಷ್ಯಕ್ಕೆ ಒತ್ತಾಸೆಯಾದರು. ದುರ್ಬಲ ವರ್ಗದವರಿಗೆ ಮೀಸಲಾತಿ ಕಲ್ಪಿಸುವ ಮೂಲಕ ಸಮಾನತೆ ಮಹತ್ವ ಸಾರಿದರು. ಜಾತಿ ತಾರತಮ್ಯದ ವಿರುದ್ಧ ಹೋರಾಡಿ, ಅಸ್ಪೃಶ್ಯತೆ ನಿಷೇಧಕ್ಕೆ ಕಾರಣರಾದರು. ಅರ್ಥಶಾಸ್ತ್ರಜ್ಞರಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಮೂಲ ಪ್ರೇರಕರಾದರು ಎಂದು ತಿಳಿಸಿದರು.

ಅಂಬೇಡ್ಕರ್ ಅವರ ಆರ್ಥಿಕ ವಿಚಾರಗಳು ದೇಶದ ಅಭಿವೃದ್ಧಿ ನೀತಿಗಳಿಗೆ ಬುನಾದಿಯಾದವು. ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಆಸ್ತಿ ಹಕ್ಕು, ವಿವಾಹ ವಿಚ್ಛೇದನ ಹಕ್ಕು ಕಲ್ಪಿಸಿದರು. ಕಾರ್ಮಿಕರ ಪರ ನಿಂತು ಕೆಲಸದ ಅವಧಿಯನ್ನು 12 ಗಂಟೆಗಳಿಂದ 8 ಗಂಟೆಗಳಿಗೆ ಇಳಿಕೆ, ಕನಿಷ್ಠ ವೇತನ, ಮತ್ತು ವಿಮೆ ಸೌಲಭ್ಯದಂತಹ ಅನೇಕ ಸುಧಾರಣೆ ತಂದರು. ಶೋಷಿತರು ಶಿಕ್ಷಿತರಾಗಿ, ಸಂಘಟಿತರಾಗಿ, ಹೋರಾಡಬೇಕೆಂಬ ಉದ್ಘೋಷದೊಂದಿಗೆ ಜಾಗೃತಿ ಮೂಡಿಸಿದ ಮಹಾನ್ ಚೇತನ ಅಂಬೇಡ್ಕರ್ ಅವರನ್ನು ಇಡೀ ಜಗತ್ತು ಗೌರವಿಸುತ್ತಿದೆ ಎಂದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ವೇದಾವತಿ, ಎಂ.ಯು. ಸುಬ್ಬಯ್ಯ, ಗುರುವಿನಾಯಕ, ರವೀಂದ್ರ, ಚಿಕ್ಕವೆಂಕಟು, ಮುಖಂಡರಾದ ಬಿ.ಎಂ. ರಘು, ಎಂ.ಎಸ್.ಪುನೀತ್, ಸೋಮಶೇಖರ ರಾಜು, ಪರಮಾನಂದ, ಪಡುವಾರಹಳ್ಳಿ ಎಂ.ರಾಮಕೃಷ್ಣ, ವಿ.ಶೈಲೇಂದ್ರ, ಗಂಗೋತ್ರಿ ರಮೇಶ್, ರಾಮೇಗೌಡರು, ಸರ್ವೇಶ್, ಕೆ.ಗಿರೀಶ್, ಅನಿಲ್, ಕಾರ್ತಿಕ್ ಮರಿಯಪ್ಪ, ಯೋಗಾನಂದ್, ಗೋಕುಲಂ ವಿ.ಮಧು, ಪ್ರವೀಣ್, ಕುಂಬಾರಕೊಪ್ಪಲು ಕೇಬಲ್ ವೆಂಕಟೇಶ್, ಅಶ್ವಥ್ ಗೌಡ, ಪ್ರಮೋದ್, ಅರವಿಂದ, ಲೋಕನಾಯಕ ನಗರ ಶ್ರೀನಿವಾಸಗೌಡ, ಮಾಧು ಇದ್ದರು.



ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನವಾಗಿ ಟೌನ್‌ಹಾಲ್ ಮುಂಭಾಗ ಇರುವ ಅಂಬೇಡ್ಕರ್ ಅವರ ಪ್ರತಿಮೆಗೆ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ವತಿಯಿಂದ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ, ಜಿಲ್ಲಾ ಪಂಚಾಯಿತಿಯ ಮಾಜಿ ಅಧ್ಯಕ್ಷ ಬಿ.ಎಂ.ರಾಮು. ಪ್ರಗತಿ ಗೋಪಾಲಕೃಷ್ಣ, ನಾಡನಹಳ್ಳಿ ರವಿ, ಒಕ್ಕೂಟದ ಗೌರವಾಧ್ಯಕ್ಷ ಎನ್.ಆರ್.ನಾಗೇಶ್, ಅಧ್ಯಕ್ಷ ದ್ಯಾವಪ್ಪ ನಾಯಕ, ಖಜಾಂಚಿ ಕೇಶವ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ವಸಿಷ್ಠ, ಸುರೇಶ್‌ಕುಮಾರ ಬೀಡು, ಮುತ್ತುರಾಜ್ ಎಚ್.ಡಿ.ಕೋಟೆ, ಶ್ರೀಕಾಂತ್ ಯಾದವ್, ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ, ದೇವರಾಜ ಮಾರುಕಟ್ಟೆ ವ್ಯಾಪಾರಿಗಳ ಬಳಗದಿಂದ ಡಾ.ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರಿನ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ, ದೇವರಾಜ ಮಾರುಕಟ್ಟೆ ವ್ಯಾಪಾರಿಗಳ ಬಳಗದ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಿದ ಸಂದರ್ಭದಲ್ಲಿ ಹಿರಿಯ ಪತ್ರಿಕಾ ವಿತರಕ ಟಿ.ಕೆ.ಸತೀಶ್ ಬಾಬು ಹಾಗೂ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ ಅವರನ್ನು ಅಭಿನಂದಿಸಲಾಯಿತು.

ಮೈಸೂರು,ಏ.14–ಮೈಸೂರಿನ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘ ಮತ್ತು ದೇವರಾಜ ಮಾರುಕಟ್ಟೆ ವ್ಯಾಪಾರಿಗಳ ಬಳಗದ ಸಹಯೋಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತೋತ್ಸವವನ್ನು ನಗರದ ಚಿಕ್ಕ ಗಡಿಯಾರದ ಬಳಿ ಆಚರಿಸಿ, ಸಾರ್ವಜನಿಕರಿಗೆ ಸಿಹಿ ಹಂಚಲಾಯಿತು.

ಈ ವೇಳೆ ಹಿರಿಯ ಪತ್ರಿಕಾ ವಿತರಕರಾದ ಟಿ.ಕೆ.ಸತೀಶ್‌ಬಾಬು, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್. ಹೋಮದೇವ ಅವರನ್ನು ಅಭಿನಂದಿಸಲಾಯಿತು. ಕೆಪಿಸಿಸಿ ಸದಸ್ಯರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹಿರಿಯ ಪತ್ರಕರ್ತ ಎಸ್.ಟಿ.ರವಿಕುಮಾರ್, ಸಾಮಾಜಿಕ ಕಾರ್ಯಕರ್ತ ಜಯರಾಜ್ ಹೆಗಡೆ, 'ಮೈಸೂರು ಮಿತ್ರ' ಪತ್ರಿಕೆ ಪ್ರಸರಣ ವಿಭಾಗದ ಮುಖ್ಯಸ್ಥ ಗೋಪಿನಾಥ್, ದೇವರಾಜ ಮಾರುಕಟ್ಟೆ ಮುಖಂಡರಾದ ಸಾಗರ್, ಸಂದೀಪ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ದೇವರಾಜ ಮಾರುಕಟ್ಟೆ ವ್ಯಾಪಾರಿಗಳ ಬಳಗದ ಜಯರಾವ್, ನಾಗ ಮತ್ತಿತರರು ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ಅದ್ಧೂರಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ

ಪ್ರತಿಯೊಬ್ಬರೂ ಶಿಕ್ಷಣ ಪಡೆದು ಮುಖ್ಯವಾಹಿನಿಗೆ ಬರಬೇಕು: ಶಾಸಕ ಡಾ.ಮಂತರ್‌ಗೌಡ ಆಶಯ


ಮಡಿಕೇರಿಯಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಶಾಸಕ ಮಂತರ್‌ಗೌಡ ಉದ್ಘಾಟಿಸಿದರು.

ಮಡಿಕೇರಿ, ಏ.14– ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿರುವಂತೆ ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ. ಆದ್ದರಿಂದ ಪ್ರತಿಯೊಬ್ಬರೂ ಶಿಕ್ಷಣ ಪಡೆದು, ಮುಖ್ಯವಾಹಿನಿಗೆ ಬರಬೇಕು ಎಂದು ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯುವ ಜನರು ಉನ್ನತ ಶಿಕ್ಷಣ ಪಡೆದು ವಿವಿಧ ಕ್ಷೇತ್ರಗಳಲ್ಲಿ ಬೆಳೆಯಬೇಕು. ಆ ನಿಟ್ಟಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರಂತೆ ನಿರಂತರ ಹಾಗೂ ಕಠಿಣ ಪರಿಶ್ರಮ ಅಗತ್ಯ ಎಂದು ಪ್ರತಿಪಾದಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಧನೆ, ಗುರಿ, ಉದ್ದೇಶ, ಆಶಯಗಳನ್ನು ಪ್ರತಿಯೊಬ್ಬರೂ ಅರ್ಥೈಸಿಕೊಂಡು ಮುನ್ನಡೆಯಬೇಕು. ಅಂಬೇಡ್ಕರ್ ಅವರು ಬರೆದ ಸಂವಿಧಾನದ ಪ್ರತಿಫಲವಾಗಿ ನಾವು ಶಿಕ್ಷಣ, ಉದ್ಯೋಗ ಪಡೆದು ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದೇವೆ. ಎಲ್ಲಾ ವರ್ಗಗಳಿಗೂ ಸಮಾನ ಅವಕಾಶ ದಕ್ಕಿದೆ. ಹಾಗಾಗಿ ಅಂಬೇಡ್ಕರ್ ಅವರನ್ನು ನಿತ್ಯ ಸ್ಮರಿಸಿಕೊಳ್ಳಬೇಕು. ಮುಂದಿನ ಮೇ ಅಂತ್ಯದ ವೇಳೆಗೆ ಅಂಬೇಡ್ಕರ್ ಅವರ ಪ್ರತಿಮೆ ಅನಾವರಣಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಮಾತನಾಡಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರು ಜಾತಿ, ಧರ್ಮ ಮೀರಿ ಬೆಳೆದ ಅಪ್ರತಿಮ ಪ್ರತಿಭೆ. ಅಂಬೇಡ್ಕರ್ ಎಂದರೆ ಐಕಾನ್ ಹಾಗೂ ಐಡಿಯಾಲಜಿ ಎಂದರೆ ಅತಿಶಯೋಕ್ತಿಯಲ್ಲ. ಆ ನಿಟ್ಟಿನಲ್ಲಿ ಅವರ ಸಿದ್ಧಾಂತ, ದೂರದೃಷ್ಟಿ ಎಂದಿಗೂ ಪ್ರಸ್ತುತವಾಗಿರುತ್ತದೆ. ಅಸ್ಪೃಶ್ಯತೆ ಹಾಗೂ ಅಸಮಾನತೆಯ ನೋವು ನುಂಗಿಕೊಂಡು ದೇಶಕ್ಕಾಗಿ ಶ್ರೇಷ್ಠ ಸಂವಿಧಾನ ನೀಡಿದ್ದಾರೆ. ಅಂಬೇಡ್ಕರ್ ಅವರ ತತ್ವ, ಸಿದ್ಧಾಂತ ಅಳವಡಿಸಿಕೊಂಡರೆ ಸಮಾಜದಲ್ಲಿ ಸಮಾನತೆ, ಸಹೋದರತೆ, ಸಹಭಾಗಿತ್ವ ಸಾಕಾರಗೊಳ್ಳುತ್ತದೆ ಎಂದು ಆಶಿಸಿದರು.

ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನ ಹೆಚ್.ಕೆ.ವೀರಣ್ಣಗೌಡ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಸಂದೀಪ್ ಎಸ್.ರಾವಣಿಕರ್ ಮಾತನಾಡಿ, ವಿಶ್ವಜ್ಞಾನಿ ಅಂಬೇಡ್ಕರ್ ಅವರ ವಿಚಾರಧಾರೆಗಳು ಸಾರ್ವಕಾಲಿಕ. ವಿವಿಧ ರಾಷ್ಟ್ರಗಳು ಕ್ರಾಂತಿಬೆನ್ನಲ್ಲೇ ಅಭಿವೃದ್ಧಿಯಾಗಿವೆ. ಆದರೆ ಭಾರತ ಇಂದಿಗೂ ಮುಂದುವರೆಯುತ್ತಿರುವ ರಾಷ್ಟ್ರವಾಗಿದೆ. ಈ ಬಗ್ಗೆ ಪ್ರತಿಯೊಬ್ಬರೂ ಯೋಚಿಸಬೇಕಿದೆ ಎಂದರು.

ಮಹಾಬೋಧಿ ಸಂಘದ ಅಧ್ಯಕ್ಷ ಮೋಹನ್ ಮೌರ್ಯ ಮಾತನಾಡಿ, ಶಾಸಕರು ಡಾ. ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಜಾಗ ಕಲ್ಪಿಸಿಕೊಟ್ಟಿದ್ದು, ಈ ನಿಟ್ಟಿನ ಕಾರ್ಯ ಪ್ರಗತಿಯಲ್ಲಿದೆ. ಈ ಮೂಲಕ ಹಲವು ದಶಕಗಳ ಕನಸು ನನಸಾಗಿಸಿದೆ ಎಂದು ಶಾಸಕರಿಗೆ ಧನ್ಯವಾದ ತಿಳಿಸಿದರು.

ಈ ವೇಳೆ ಈ.ರಾಜು ಮತ್ತು ತಂಡದ ಕಲಾವಿದರು ಡಾ.ಅಂಬೇಡ್ಕರ್ ಕುರಿತು ಹಾಡುಗಳನ್ನು ಪ್ರಸ್ತುತಪಡಿಸಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ ಸಿಬ್ಬಂದಿಯನ್ನು ಗೌರವಿಸಲಾಯಿತು. ಅಂತರ್ಜಾತಿ ವಿವಾಹಿತರಿಗೆ ಇದೇ ವೇಳೆ ಪ್ರೋತ್ಸಾಹ ಧನದ ಚೆಕ್ ಅನ್ನು ಹಸ್ತಾಂತರಿಸಲಾಯಿತು.

ಸಭಾ ಕಾರ್ಯಕ್ರಮಕ್ಕೂ ಮುನ್ನ ನಗರದ ಕಾವೇರಿ ಕಲಾಕ್ಷೇತ್ರ ಬಳಿಯಿಂದ ಗಾಂಧಿ ಭವನದವರೆಗೆ ನಡೆದ ಮೆರವಣಿಗೆಗೆ ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರುಗಳು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡೊಳ್ಳು ಕುಣಿತ ಹಾಗೂ ಕಂಸಾಳೆ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಗಮನ ಸೆಳೆದವು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಮಂದ್ರೀರ ಮೋಹನ್‌ದಾಸ್, ಟಿ.ಪಿ.ರಮೇಶ್, ಜನಾರ್ಧನ, ಹೆಚ್.ಎಲ್.ದಿವಾಕರ್, ಪ್ರೇಮಕುಮಾರ್, ನಗರಸಭೆ ಸದಸ್ಯ ಸತೀಶ್, ಚಂದ್ರಶೇಖರ್, ಮುತ್ತುರಾಜು, ಜುಲೇಕಾಬಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ತಹಶೀಲ್ದಾರ್ ಶ್ರೀಧರ, ಪ್ರಮುಖರಾದ ದೀಪಕ್ ಪೊನ್ನಪ್ಪ ಭಾಗವಹಿಸಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಭಿನಂದನೆ


ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮಡಿಕೇರಿ,ಏ.14– ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣ ಕೊಡಗು ಘಟಕದ ವತಿಯಿಂದ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಮಡಿಕೇರಿ ತಾಲೂಕಿನ ನಾಲ್ವರು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು.

ನಗರದ ಖಾಸಗಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗುವ ಮೂಲಕ ಕರವೇ ಸ್ವಾಭಿಮಾನಿ ಬಣದ ಪ್ರಮುಖರು ಉದ್ಘಾಟಿಸಿದರು.

ಬಳಿಕ ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದ ಮಡಿಕೇರಿ ನಿವಾಸಿ ಸಿಂಚನ ಪ್ರಸನ್ನ, ಫಾತಿಮ, ಚಿತ್ರಕಲಾ ಮತ್ತು ಜಿ.ಜಿ.ಮೋನಿಷಾ ಅವರನ್ನು ಸನ್ಮಾನಿಸಲಾಯಿತು.

ಕರವೇ ಸ್ವಾಭಿಮಾನಿ ಬಣದ ಕೊಡಗು ಜಿಲ್ಲಾ ಉಸ್ತುವಾರಿ ತನು ಕಿಶೋರ್ ಮಾತನಾಡಿ, 2017ರಿಂದ ರಾಜ್ಯಾದ್ಯಂತ ಘಟಕಗಳನ್ನು ಹೊಂದಿರುವ ಕರವೇ ಸ್ವಾಭಿಮಾನಿ ಬಣ, ಸಾಮಾಜಿಕ ಕಳಕಳಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ. ಕೊಡಗು ಜಿಲ್ಲೆಯಲ್ಲಿಯೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಹಲವು ಹೋರಾಟಗಳನ್ನು ರೂಪಿಸಿದೆ ಎಂದರು.

ಕರವೇ ಸ್ವಾಭಿಮಾನಿ ಬಣದ ಜಿಲ್ಲಾಧ್ಯಕ್ಷ ಫ್ರಾನ್ಸಿಸ್ ಡಿಸೋಜಾ ಮಾತನಾಡಿ, ಮಕ್ಕಳ ಈ ಸಾಧನೆಯಲ್ಲಿ ಉಪನ್ಯಾಸಕರು ಹಾಗೂ ಪೋಷಕರ ಬಹು ದೊಡ್ಡ ಪಾತ್ರವಿದೆ ಎಂದು ಹೇಳಿದರು. ಈ ವೇಳೆ ಮೂರ್ನಾಡು ನಿವಾಸಿ ಜಸ್ಮಿ ಅವರು ಸಂಘಟನೆಗೆ ಸೇರ್ಪಡೆಯಾದರು. ಸಂಘಟನೆಯ ಪ್ರಮುಖರು ಇದ್ದರು.

ಪ್ರತಿಯೊಬ್ಬರೂ ಅಂಬೇಡ್ಕರ್ ಆದರ್ಶ ಪಾಲಿಸಿ

ವಿರಾಜಪೇಟೆ, ಏ.14– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಅಂಗವಾಗಿ ವಿರಾಜಪೇಟೆ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿಗಳ ಸಲಹೆಗಾರ ಎ.ಎಸ್.ಪೊನ್ನಣ್ಣ ಅವರು ಪಟ್ಟಣದ ಅಂಬೇಡ್ಕರ್ ಭವನದಲ್ಲಿನ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಆದರ್ಶಗಳನ್ನು ನಾವೆಲ್ಲರು ಪಾಲಿಸಬೇಕು. ಅವರ ಆಶಯದಂತೆ ಪ್ರತಿಯೊಬ್ಬರೂ ಶಿಕ್ಷಣ ಪಡೆದು ಸಮಾಜದಲ್ಲಿ ಸಾಮರಸ್ಯದಿಂದ ಜೀವನ ನಡೆಸುವಂತಾಗಬೇಕು ಎಂದು ಆಶಿಸಿದರು.

ಈ ವೇಳೆ ವಿರಾಜಪೇಟೆ ತಹಶೀಲ್ದಾರ್ ಪಿ.ಸಿ.ಪ್ರವೀಣ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಗ್ರೇಡ್–


ಅಂಬೇಡ್ಕರ್ ಪುತ್ಥಳಿಗೆ ಶಾಸಕ ಎ.ಎಸ್.ಪೊನ್ನಣ್ಣ ಮಾಲಾರ್ಪಣೆ ಮಾಡಿದರು.

2 ತಹಶೀಲ್ದಾರ್ ಪ್ರದೀಪ್ ಕುಮಾರ್, ತಾಲೂಕು ಕಛೇರಿಯ ಮಂಜುನಾಥ್, ಪ್ರಮುಖರಾದ ವಿ.ಕೆ.ಸತೀಶ್ ಕುಮಾರ್, ಹೆಚ್.ಮಹದೇವ, ಸಮಾಜ ಕಲ್ಯಾಣ ಇಲಾಖೆ ಹಾಗೂ ತಹಶೀಲ್ದಾರ್ ಕಛೇರಿ ಸಿಬ್ಬಂದಿ ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಡಾ.ಅಂಬೇಡ್ಕರ್ ಜಯಂತಿ



ಗುಂಡ್ಲುಪೇಟೆ, ಏ.14– ಅಂಬೇಡ್ಕರ್ ಜಯಂತಿ ಆಚರಣೆ ಜತೆಗೆ ಪ್ರತಿಯೊಬ್ಬರೂ ಅವರ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ತಾಲೂಕು ಆಡಳಿತದ ವತಿಯಿಂದ ಪಟ್ಟಣದ ಗುರುಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತದ ಇಂದಿನ ಅಭಿವೃದ್ಧಿ ವೇಗಕ್ಕೆ ಡಾ.ಅಂಬೇಡ್ಕರ್ ಅವರ ಸಂವಿಧಾನವೇ ಕಾರಣ. ಇಡೀ ವಿಶ್ವವೇ ಯುದ್ಧದ ಆತಂಕದಲ್ಲಿದ್ದರೂ ಭಾರತ ಮಾತ್ರ ಸುರಕ್ಷಿತವಾಗಿದೆ. ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ನೀಡಿದೆ ಎಂದು ಹೇಳಿದರು.

ವಿಶ್ವಮಾನವ ವೇದಿಕೆ ಮುಖ್ಯಸ್ಥ ಸುಭಾಷ್ ಮಾಡ್ರಳ್ಳಿ ಮಾತನಾಡಿ, 93 ರಾಷ್ಟ್ರಗಳಲ್ಲಿ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ. ಸಂವಿಧಾನವು ಭಾರತದ ಉತ್ತಮ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದೆ ಎಂದರು

ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ನಾನಾ ಕ್ಷೇತ್ರಗಳ ಸಾಧಕರನ್ನು ಗೌರವಿಸಲಾಯಿತು. ತಹಸೀಲ್ದಾರ್ ಎಂ.ಎಸ್.ತನ್ಮಯ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಸರವಣ, ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮಾಜಿ ಸದಸ್ಯರಾದ ಮಲ್ಲರಾಜು, ರಾಜಗೋಪಾಲ, ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಬಾ ಸಾಹೇಬರ ಜಯಂತ್ಯೋತ್ಸವ


ಕೊಳ್ಳೇಗಾಲದ ಸಿದ್ದಯ್ಯನಪುರದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಗ್ರಾಮದ ನಿವಾಸಿಯೂ ಆದ ತಹಸೀಲ್ದಾರ್ ಆರ್.ಶ್ರೀಧರ್, ಅತ್ಯುತ್ತಮ ಕಂದಾಯ ಅಧಿಕಾರಿ ಪ್ರಶಸ್ತಿ ಪುರಸ್ಕೃತ ಶಾಂತರಾಜು, ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಕೆ.ಚೆಲುವರಾಜು ಅವರನ್ನು ಅಭಿನಂದಿಸಲಾಯಿತು. ಡಾ.ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆಯಲ್ಲಿ ಯುವಸಮೂಹ ಪಾಲ್ಗೊಂಡಿತ್ತು

ಚಾಮರಾಜನಗರ ಜಿಲ್ಲಾಡಳಿತದಿಂದ ಬಾಬಾ ಸಾಹೇಬರ ಜಯಂತಿ

ಭಾರತದ ಸಂವಿಧಾನದಿಂದ ಸರ್ವರ ಹಿತ ಸಾಧನೆ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಭಿಮತ


ಚಾಮರಾಜನಗರದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಚಾಮರಾಜನಗರ, ಏ.14– ಸರ್ವರ ಹಿತಕ್ಕಾಗಿ ಶ್ರೇಷ್ಠ ಸಂವಿಧಾನ ರಚಿಸಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಾನವೀಯ ಮೌಲ್ಯವುಳ್ಳ ಮಹಾನ್ ವ್ಯಕ್ತಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಬಣ್ಣಿಸಿದರು.

ನಗರದ ಸರ್ಕಾರಿ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿಂದು ಜಿಲ್ಲಾಡಳಿತ,

> ಅಂಬೇಡ್ಕರ್ ಜಗತ್ತಿನ ಶ್ರೇಷ್ಠ ಸಂವಿಧಾನವನ್ನು ಭಾರತಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಸಂವಿಧಾನದ ಮೂಲ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಆಶಯಗಳಡಿ ಸಮಸಮಾಜ ಕಟ್ಟಲು ಎಲ್ಲರೂ ಮುಂದಾಗಬೇಕು. ಪ್ರಜ್ಞಾಪೂರ್ವಕ ಚಿಂತನೆಯಡಿ ಪ್ರಬುದ್ಧ ಬದುಕು ಕಟ್ಟಿಕೊಳ್ಳಬೇಕು. ನಮ್ಮ ನಡೆ ಬುದ್ಧನ ಕಡೆಗೆ ಇರಬೇಕು. – ಡಾ.ಕಲ್ಯಾಣ ಸಿರಿ ಭಂತೇಜಿ, ವಿಶ್ವಮೈತ್ರಿ ಬುದ್ಧವಿಹಾರ.

ಜಿಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಡಾ.ಬಿ. ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಅಂಬೇಡ್ಕರ್ ಅವರು ಬಾಲ್ಯದಲ್ಲಿ ಸಾಕಷ್ಟು ಅಪಮಾನ, ನೋವು, ಸಂಕಷ್ಟ ಅನುಭವಿಸಿದ್ದರೂ, ದೇಶದ ಉತ್ತಮ ಭವಿಷ್ಯದ ಕನಸಿನೊಂದಿಗೆ ಮಾನವೀಯ ಹೃದಯವಂತಿಕೆ ಅವರಲ್ಲಿ ಗಟ್ಟಿಯಾಗಿತ್ತು. ಹಾಗಾಗಿಯೇ ಜಾತಿಪದ್ಧತಿ, ಸಾಮಾಜಿಕ ತಾರತಮ್ಯ, ಸಾಮಾಜಿಕ, ಅರ್ಥಿಕ, ಕಾನೂನು ಸ್ಥಿತಿಗತಿಗಳನ್ನು ಆಳವಾಗಿ ಅಧ್ಯಯನ ಮಾಡಿದರು. ವೈವಿಧ್ಯತೆಯಲ್ಲಿ ಏಕತೆ ಸಾಕಾರಕ್ಕಾಗಿ ಶ್ರಮಿಸಿದರು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ದೇಶದ ಸ್ಥಿತಿ ಬಹಳ ಚಿಂತಾಜನಕವಾಗಿದ್ದಾಗ ಸಾಕಷ್ಟು ತಜ್ಞರೊಂದಿಗೆ ಚಿಂತನೆ ನಡೆಸಿ ಅದ್ಭುತ ಸಂವಿಧಾನವನ್ನು ಕೊಡುಗೆಯಾಗಿ ನೀಡಿದರು. ಅವರ ಆದರ್ಶ ವಿಚಾರಧಾರೆಗಳನ್ನು ಅರ್ಥೈಸಿಕೊಂಡು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ರಹಮತ್ ತರೀಕೆರೆ ಮಾತನಾಡಿ, ಅಂಬೇಡ್ಕರ್ ಅವರು ದಲಿತರು, ಶೋಷಿತರಿಗಾಗಿ ಮಾತ್ರವಲ್ಲ, ಎಲ್ಲಾ ಭಾರತೀಯರಿಗಾಗಿ ಎಲ್ಲಾ ಸಮಾಜ, ಸಮುದಾಯ, ವರ್ಗಗಳ ಏಳಿಗೆಗಾಗಿ ಸಂವಿಧಾನ ರಚಿಸಿದ್ದಾರೆ. ಎಲ್ಲರೂ ಜನ್ಮದಿನವನ್ನು ಊರಹಬ್ಬ, ನಾಡಹಬ್ಬ ದಂತೆ ಆಚರಿಸುವಂತಾಗಬೇಕು ಎಂದು ಆಶಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ, ಡಾ.ಬಿ.ಆರ್.ಅಂಬೇಡ್ಕರ್ ಅವರು ಎಲ್ಲಾ ಕಾಲಘಟ್ಟದಲ್ಲೂ ಪ್ರಸ್ತುತವಾಗಿದ್ದಾರೆ. ಸಮಾಜ ಸುಧಾರಕರು, ರಾಜಕೀಯ ಚಿಂತಕರು, ಕಾನೂನು ತಜ್ಞರು, ಅರ್ಥಶಾಸ್ತ್ರಜ್ಞರು ಆಗಿದ್ದ ಅಂಬೇಡ್ಕರ್ ಅವರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ಸರ್ವಕ್ಷೇತ್ರಗಳ ಹಿತಕ್ಕಾಗಿ ಅಪಾರವಾಗಿ ಶ್ರಮಿಸಿದರು ಎಂದರು.

ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದ ಡಾ.ಕಲ್ಯಾಣ ಸಿರಿ ಭಂತೇಜಿ ಸಾನಿಧ್ಯ ವಹಿಸಿದ್ದರು. ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಪಂ ಸಿಇಓ ಮೋನಾರೋತ್, ಎಡಿಸಿ ಟಿ.ಜವರೇಗೌಡ, ಜಿಪಂ ಉಪ ಕಾರ್ಯದರ್ಶಿ ಶೃತಿ, ಡಿವೈಎಸ್ಪಿ ಸ್ನೇಹರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಪೌರಾಯುಕ್ತ ಪರಶುರಾಮ್ ಛಲವಾದಿ ಮತ್ತಿತರರಿದ್ದರು.

ಇದೇ ವೇಳೆ ಗುಂಡ್ಲುಪೇಟೆ ಪದ್ಮಪಾಣಿ ಲಲಿತಾ ಕಲಾ ಅಕಾಡೆಮಿ ನಾರಾಯಣಸ್ವಾಮಿ ಮತ್ತು ತಂಡ ಅಂಬೇಡ್ಕರ್ ಗೀತ ಗಾಯನ ಪ್ರಸ್ತುತ ಪಡಿಸಿದರು. ಕಾರ್ಯಕ್ರಮಕ್ಕೂ ಮುನ್ನ ನಗರದ ಜಿಲ್ಲಾಡಳಿತ ಭವನದ ಮುಂಭಾಗದ ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ವಿವಿಧ ಕಲಾತಂಡಗಳೊಂದಿಗೆ ಬೆಳ್ಳಿರಥದಲ್ಲಿ ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ಹಿಂದೂ ಜಾಗೃತಿ ಸಮಿತಿಯಿಂದ ಮಜ್ಜಿಗೆ ವಿತರಣೆ


ಚಾಮರಾಜನಗರ: ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಮೆರವಣಿಗೆಯಲ್ಲಿ ಪಾಲ್ಗೊಂಡವರಿಗೆ ಹಿಂದೂ ಜಾಗೃತಿ ಸಮಿತಿ ವತಿಯಿಂದ ನಗರಸಭೆ ಬಳಿ ಮಜ್ಜಿಗೆ ವಿತರಣೆ ಮಾಡಲಾಯಿತು. ವೇದಿಕೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಸಂಚಾಲಕ ಕೃಷ್ಣಕುಮಾರ್, ಮಹೇಶ್, ಮುಖಂಡರಾದ, ನಟರಾಜು, ನಾಗರಾಜು, ವಿರಾಟ್ ಶಿವು, ಚಂದ್ರಶೇಖರ್, ಪರಿಸರ ಪ್ರೇಮಿ ವೆಂಕಟೇಶ್, ಕುಮುದಾ, ರಾಜು, ನವೀನ್ ಮತ್ತಿತರರಿದ್ದರು.

ಶಿಕ್ಷಣದಿಂದ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ


ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯ, ಏ.14– ಡಾ.ಬಿ.ಆರ್.ಅಂಬೇಡ್ಕರ್ ದೇಶದ ಭದ್ರತೆ ಮತ್ತು ಸಮಾನತೆ ಕಾಪಾಡುವ ನಿಟ್ಟಿನಲ್ಲಿ ದೇಶಕ್ಕೆ ಬೃಹತ್ ಲಿಖಿತ ಸಂವಿಧಾನ ನೀಡಿದ್ದಾರೆ. ವಿಶ್ವವೇ ಭಾರತ ಸಂವಿಧಾನವನ್ನು ಒಪ್ಪಿಕೊಂಡಿರುವುದು ಹೆಮ್ಮೆಯ ವಿಷಯ. ಶಿಕ್ಷಣದಿಂದ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಎಲ್ಲಾ ವರ್ಗಗಳಿಗೂ ಸಮಾನತೆ ಹಾಗೂ ಸ್ವಾತಂತ್ರ್ಯದ ಹಕ್ಕು ನೀಡಿದೆ ಎಂದ ಅವರು ಸಂವಿಧಾನ ಇಲ್ಲದಿದ್ದರೆ ನಾವು ಸಾಕಷ್ಟು ಸಮಸ್ಯೆ ಎದುರಿಸಬೇಕಿತ್ತು ಎಂದರು.

ಶಿಕ್ಷಣ ಉದ್ಯೋಗಕ್ಕೆ ಮಾತ್ರ ಸೀಮಿತವಾಗದೇ, ದೇಶದ ಇತಿಹಾಸ ತಿಳಿದುಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣ ಪಡೆದುಕೊಳ್ಳಬೇಕು. ಹೀಗಾಗಿ ಎಲ್ಲರಿಗೂ ಶಿಕ್ಷಣ ನೀಡಲು ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಅಂಬೇಡ್ಕರ್ ತತ್ವಾದರ್ಶಗಳು ನಮಗೆ ಮಾರ್ಗದರ್ಶಕವಾಗಿವೆ ಎಂದರು.

ಶಾಸಕ ಪಿ.ರವಿಕುಮಾರ್ ಗಣಿಗ ಮಾತನಾಡಿ, ಅಂಬೇಡ್ಕರ್ ಅವರು ದಲಿತರಿಗೆ ಮಾತ್ರ ಅಲ್ಲ ನಮ್ಮ ವಿಶ್ವಕ್ಕೆ ನೀತಿ ಹೇಳಿಕೊಟ್ಟ ಗುರು. ಇಂದು ಕೆನಡಾ, ಯುರೋಪಿನಲ್ಲಿ ಅಂಬೇಡ್ಕರ್ ಜಯಂತಿ ನಡೆಯುತ್ತಿದೆ. ದೇಶ ಮುನ್ನಡೆಸಲು ಸಾಧ್ಯವಾಗುತ್ತಿರುವುದು ಅಂಬೇಡ್ಕರ್ ಅವರ ಸಂವಿಧಾನದಿಂದ ಎಂದ ಅವರು ದೇಶ ಸಂವಿಧಾನದ ಪ್ರಕಾರ ನಡೆಯಬೇಕು. ಎಲ್ಲರೂ ಶಾಂತಿ ನೆಮ್ಮದಿಯಿಂದ ಬದುಕಬೇಕು. ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಹಳ್ಳಿ ಹಳ್ಳಿಗಳಿಗೆ ತಲುಪಿಸಬೇಕು ಎಂದರು.

ಮುಖ್ಯ ಭಾಷಣಕಾರ ಮೈಸೂರು ವಿವಿ ಹಿರಿಯ ಪ್ರಾಧ್ಯಾಪಕ ಡಾ.ಡಿ.ಆನಂದ್ ಮಾತನಾಡಿದರು. ಈ ವೇಳೆ ಜಿಪಂ ಸಿಇಓ ಕೆ.ಆರ್.ನಂದಿನಿ ಸಂವಿಧಾನದ ಪ್ರಸ್ತಾವನೆ ಬೋಧಿಸಿದರು. ನಂತರ ಸಮುದಾಯದ ಸಾಧಕರಿಗೆ ಗಣ್ಯರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಜಿಪಂ ಸಿಇಓ ಕೆಆರ್.ನಂದಿನಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್, ತಹಸೀಲ್ದಾರ್ ವಿಶ್ವನಾಥ್ ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಸಮಸ್ತ ಶೋಷಿತರ ಆಶಾಕಿರಣ

ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಬಣ್ಣನೆ

ಶ್ರೀರಂಗಪಟ್ಟಣ, ಏ.14– ದೇಶದ ಸಂವಿಧಾನ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮಸ್ತ ಶೋಷಿತರ ಆಶಾಕಿರಣ ಎಂದು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಬಣ್ಣಿಸಿದರು.


ಅಂಬೇಡ್ಕರ್ ಅವರ 135ನೇ ಜಯಂತಿ ನಿಮಿತ್ತ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಅವರ ಪುತ್ಥಳಿಗೆ ಮಂಗಳವಾರ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಜನರ ಪ್ರಗತಿಗೆ ಪೂರಕವಾದ ಕಾನೂನುಗಳನ್ನು ಅಂಬೇಡ್ಕರ್ ಸಂವಿಧಾನದಲ್ಲಿ ಸೇರಿಸಿದರು. ಮಹಿಳೆಯರಿಗೆ ವಿಶೇಷ ಹಕ್ಕುಗಳನ್ನು ಕಲ್ಪಿಸಿದರು. ಸಮಾನತೆಯ ಸಮಾಜ ನಿರ್ಮಾಣದ ಕನಸು ಕಂಡಿದ್ದ ಅವರು ಅದಕ್ಕಾಗಿ ಅವಿರತವಾಗಿ ಶ್ರಮಿಸಿದರು ಎಂದರು.

ಅಂಬೇಡ್ಕರ್ ಶಿಕ್ಷಣ ಮತ್ತು ಆರ್ಥಿಕ ತಜ್ಞರೂ ಆಗಿದ್ದರು. ತಮ್ಮ ಅಪಾರ ಅಧ್ಯಯನದಿಂದಾಗಿ ವಿಶೇಷ ಜ್ಞಾನ ಸಂಪಾದಿಸಿ ವಿಶ್ವಜ್ಞಾನಿ ಎಂದು ಕರೆಸಿಕೊಂಡಿದ್ದಾರೆ. ಇಂದಿನ ಯುವ ಪೀಳಿಗೆಗೆ ಅವರ ಜೀವನ ಮತ್ತು ಸಾಧನೆಗಳನ್ನು ತಿಳಿಸಬೇಕು ಎಂದರು. ಪುರಸಭೆ ಮಾಜಿ ಸದಸ್ಯರಾದ ಎಸ್.ಪ್ರಕಾಶ್, ಎಂ.ಶ್ರೀನಿವಾಸ್, ಹೆಚ್.ಎಸ್. ಪುಟ್ಟರಾಮು, ಬಿಜೆಪಿ ಮುಖಂಡರಾದ ಎಂ.ಆರ್.ಯತಿರಾಜ್, ಮಹದೇವಸ್ವಾಮಿ, ಚಂದನ್, ಕೆ.ಆರ್. ಸೊಸೈಟಿ ಮಾಜಿ ಅಧ್ಯಕ್ಷ ಎಸ್.ರಘು, ನಿರ್ದೇಶಕ ಉಮೇಶ್ ಕುಮಾರ್, ಪಕ್ಷದ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಲ್.ಮಂಜುನಾಥ್, ಎಂ.ಜೆ.ಪುಟ್ಟರಾಜು, ಪ್ರಭಾಕರ್ ಇದ್ದರು.


ಅಂಬೇಡ್ಕರ್ ಪುತ್ಥಳಿಗೆ ಬಿಜೆಪಿ ಮುಖಂಡ ಸಚ್ಚಿದಾನಂದ ಪುಷ್ಪಾರ್ಚನೆ ಮಾಡಿದರು.

ಶ್ರೀ ಡಾ.ಬಾಲಗಂಗಾಧರನಾಥ ಶ್ರೀಗಳಿಗೆ ಮರಣೋತ್ತರ 'ಭಾರತ ರತ್ನ' ಗೌರವಕ್ಕೆ ಶಾಸಕದ್ವಯರ ಆಗ್ರಹ

ಕೇಂದ್ರಕ್ಕೆ ಶಿಫಾರಸು ಕೋರಿ ಸಿಎಂ, ಡಿಸಿಎಂಗೆ ಮನವಿ



ಮೈಸೂರು, ಏ.14– ಭೈರವೈಕ್ಯ ಶ್ರೀ ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿ ಘೋಷಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಶಾಸಕದ್ವಯರು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಶಾಸಕ ದಿನೇಶ್ ಗೂಳಿಗೌಡ ಹಾಗೂ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾದ ಶಾಸಕ ಶರತ್ ಬಚ್ಚೇಗೌಡ ಪ್ರತ್ಯೇಕ ಮನವಿ ಸಲ್ಲಿಸಿ, ಶೀಘ್ರ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಶಾಸಕದ್ವಯರ ಒಕ್ಕಣೆ: ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 71ನೇ ಪೀಠಾಧ್ಯಕ್ಷರಾಗಿದ್ದ ಪರಮಪೂಜ್ಯ ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಕೇವಲ ಆಧ್ಯಾತ್ಮಿಕ ಗುರುಗಳಾಗಿರದೆ, ಆಧುನಿಕ ಕರ್ನಾಟಕದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ ಯುಗಪುರುಷರು. ಅವರು ಪೀಠಾಧ್ಯಕ್ಷರಾಗಿ ಸೇವಾಸನ್ನದ್ಧರಾದಾಗ ಶ್ರೀ ಮಠಕ್ಕೆ ನಾಡಿನ ಅಧ್ಯಾತ್ಮಿಕ ಭೂಪಟದಲ್ಲಿ ಮನ್ನಣೆ ಹಾಗೂ ಮಹತ್ವದ ಸ್ಥಾನವಿರಲಿಲ್ಲ. ಪರಮಪೂಜ್ಯರು ದಣಿವರಿಯದ ದಕ್ಷ ದುಡಿಮೆ ಹಾಗೂ ತಮ್ಮ ಪವಾಡ ಸದೃಶ ಕ್ರಿಯಾತ್ಮಕ ಕಾರ್ಯಗಳಿಂದ ಚುಂಚನಗಿರಿಯನ್ನು ಚಿನ್ನದ ಗಿರಿಯನ್ನಾಗಿ ಪರಿವರ್ತಿಸಿದ ಪಾರಿವ್ರಾಜಕರು.

ಮುನ್ನೂರು ವರ್ಷಗಳು ಮಾಡಬಹುದಾದ ಮಹತ್ಕಾರ್ಯಗಳನ್ನು ಕೇವಲ ಮೂವತ್ಮೂರು ವರ್ಷಗಳಲ್ಲಿ ಸಾಧಿಸಿದ ಯುಗ ಯೋಗಿ. ಅವರ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕೊಡುಗೆಗಳನ್ನು ಪರಿಗಣಿಸಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ನೀಡಬೇಕೆಂಬುದು ಕೋಟ್ಯಾಂತರ ಭಕ್ತರ ಹಾಗೂ ಕನ್ನಡಿಗರ ಆಶಯವಾಗಿದೆ.

ಸ್ವಾಮಿಗಳು ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗಾಗಿ 500ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಶಿಕ್ಷಣ ಕ್ರಾಂತಿಯನ್ನೇ ಮಾಡಿದ್ದಾರೆ. ಇಂದು ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದ್ದು, ಸುಮಾರು 1.40 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿ ವರ್ಷ ವಿದ್ಯಾಭ್ಯಾಸ ಮಾಡುತ್ತಿರುವುದು ಶ್ರೀಗಳವರ ಶೈಕ್ಷಣಿಕ ದೂರದೃಷ್ಟಿಗೆ ಸಾಕ್ಷಿಯಾಗಿದೆ. 60ಕ್ಕೂ ಹೆಚ್ಚು ವೇದ, ಆಗಮ ಹಾಗೂ ಸಂಸ್ಕೃತ ಪಾಠಶಾಲೆಗಳ ಮೂಲಕ ಭಾರತೀಯ ಸಂಸ್ಕೃತಿ ಮತ್ತು ಸನಾತನ ಧರ್ಮದ ಉಳಿವಿಗಾಗಿ ಅವರು ಶ್ರಮಿಸಿದ್ದಾರೆ. ಗ್ರಾಮೀಣ ಜನತೆಗೆ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ



ದಿನೇಶ್ ಗೂಳಿಗೌಡ ಶರತ್ ಬಚ್ಚೇಗೌಡ

ಒದಗಿಸಲು ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಂತಹ ಸಂಸ್ಥೆಗಳನ್ನು ಸ್ಥಾಪಿಸಿ, ಲಕ್ಷಾಂತರ ಜನರಿಗೆ ಆರೋಗ್ಯ ರಕ್ಷಣೆ ನೀಡಿದ್ದಾರೆ. ಜಾತಿ–ಮತದ ಭೇದವಿಲ್ಲದೆ ಲಕ್ಷಾಂತರ ಜನರಿಗೆ ಅನ್ನದಾಸೋಹ, ವಸತಿ ಮತ್ತು ಬದುಕಿನ ದಾರಿ ತೋರಿಸಿಕೊಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಭೈರವೈಕ್ಯ ಮಂದಿರ ಉದ್ಘಾಟನೆ ನೆರವೇರಿಸಲು ಆಗಮಿಸುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಳಿ ಈ ಬಗ್ಗೆ ಪ್ರಸ್ತಾಪಿಸಬೇಕು. ಶ್ರೀಗಳಿಗೆ 'ಭಾರತ ರತ್ನ' ನೀಡುವಂತೆ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರದ ಸಚಿವರುಗಳು ಗೌರವಾನ್ವಿತ ಪ್ರಧಾನಮಂತ್ರಿಗಳಿಗೆ ಮನವರಿಕೆ ಮಾಡಿಕೊಡಬೇಕು. ಶೀಘ್ರವಾಗಿ ಪ್ರಶಸ್ತಿ ಘೋಷಣೆಯಾಗುವಂತೆ ಕ್ರಮ ಕೈಗೊಳ್ಳಬೇಕು.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ಮತ್ತು ಆರೋಗ್ಯ ತಲುಪಿಸಿದ ಶ್ರೀಗಳವರ ಸೇವೆಗೆ 'ಭಾರತ ರತ್ನ' ಗೌರವ ಸಲ್ಲುವುದು ಸಮಸ್ತ ಕನ್ನಡಿಗರಿಗೆ ಸಲ್ಲುವ ಗೌರವವಾಗಿದೆ. ಈ ನಿಟ್ಟಿನಲ್ಲಿ ತಾವುಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ವಿನಂತಿಸುತ್ತೇವೆ.

ಹೂಟಗಳ್ಳಿಯ ದೊಡ್ಡ ಮೋರಿಯಲ್ಲಿ ವ್ಯಕ್ತಿಯ ಮೃತ ದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆ

ಮೈಸೂರು,ಏ.14(ಪಿಎಂ)– ಕೊಳೆತ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಶವ ಹೂಟಗಳ್ಳಿಯ ದೊಡ್ಡ ಮೋರಿಯಲ್ಲಿ ಮಂಗಳವಾರ ಬೆಳಗ್ಗೆ ಪತ್ತೆಯಾಗಿದೆ.

ಮೃತ ವ್ಯಕ್ತಿಯನ್ನು ಹುಣಸೂರು ತಾಲೂಕು ಬಿಳಿಕೆರೆ ಹೋಬಳಿಯ ಸೋಮನಹಳ್ಳಿ ನಿವಾಸಿ ಸಂಜಯ್‌ಗೌಡ (32) ಎಂದು ಗುರುತಿಸಲಾಗಿದೆ. ಸೈಲೆಂಟ್ ಶೋರ್ ಮುಂಭಾಗವಿರುವ ಮೋರಿಯಿಂದ ಕೊಳೆತ ದುರ್ವಾಸನೆ ಸೂಸುತ್ತಿದ್ದ ಹಿನ್ನೆಲೆಯಲ್ಲಿ ಅನುಮಾನಗೊಂಡ ಸಾರ್ವಜನಿಕರು ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕಾಗಮಿಸಿದ ವಿಜಯನಗರ ಪೊಲೀಸರು, ಪರಿಶೀಲಿಸಿದಾಗ, ಕೊಳೆತ ಸ್ಥಿತಿಯಲ್ಲಿ ಸಂಜಯ್‌ಗೌಡನ ಮೃತದೇಹ ಕಂಡು ಬಂದಿದೆ.

ಕೊಳೆತ ಸ್ಥಿತಿಯಲ್ಲಿ ದೇಹ ಇದ್ದ ಹಿನ್ನೆಲೆಯಲ್ಲಿ ಆರಂಭದಲ್ಲಿ ವ್ಯಕ್ತಿ ಯಾರೆಂದು ಗುರುತಿಸಲಾಗಿರಲಿಲ್ಲ. ಈತನ ತೋಳಿನ ಮೇಲೆ ರತೀಶ್‌ಗೌಡ ಎಂಬ ಹೆಸರು ಸೇರಿದಂತೆ ಕನ್ನಡ ಚಲನಚಿತ್ರ ನಟರಿಬ್ಬರ ಹೆಸರುಗಳ ಹಚ್ಚೆ ಹಾಕಿಸಿಕೊಂಡಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಸಂಜೆ ವೇಳೆಗೆ ಮೃತ ಸಂಜಯ್‌ಗೌಡನ ಗುರುತು ಪತ್ತೆಯಾಗಿದೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ವಿಜಯನಗರ ಪೊಲೀಸರು, ಮದ್ಯ ಸೇವನೆ ಮಾಡಿದ್ದ ಮತ್ತಿನಲ್ಲಿ ಸಂಜಯ್‌ಗೌಡ ಮೋರಿಯೊಳಗೆ ಬಿದ್ದು ಮೃತಪಟ್ಟಿರಬಹುದು. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ಎಷ್ಟೇ ಜೋಪಾನ ಮಾಡಿದರೂ ಬಸ್‌ನಲ್ಲಿ ಮಹಿಳೆಯ 3 ಲಕ್ಷ ರೂ. ಚಿನ್ನಾಭರಣ ಕಳವು

ಮೈಸೂರು, ಏ.14– ಚಿನ್ನಾಭರಣವನ್ನು ಬಾಕ್ಸ್‌ವೊಂದರಲ್ಲಿ ಇಟ್ಟುಕೊಂಡು ಸುರಕ್ಷಿತವಾಗಿ ಕೊಂಡೊಯ್ಯುತ್ತಿದ್ದ ಮಹಿಳೆಯಿಂದ ಚಾಲಾಕಿ ಕಳ್ಳರು ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಲ್ಲಿ ನಡೆದಿದೆ. ಹೆಬ್ಬಾಳ್ ಮೊದಲನೇ ಹಂತದ ನಿವಾಸಿ ಕಮಲ ಜೋಪಾನ ಮಾಡಿಯೂ ಚಿನ್ನಾಭರಣ ಕಳೆದುಕೊಂಡವರಾಗಿದ್ದಾರೆ.



ಏ.12ರ ಭಾನುವಾರ ಸಾಲಿಗ್ರಾಮಕ್ಕೆ ಆರತಿ ಶಾಸ್ತ್ರಕ್ಕೆ ಹೋಗಿ ಅಲ್ಲಿಂದ ಬಂದು, ಇಲವಾಲದಲ್ಲಿರುವ ತನ್ನ ಮಗಳ ಮನೆಯಲ್ಲಿ ಉಳಿದುಕೊಂಡಿದ್ದರು. ಸೋಮವಾರ ಮಗಳ ಮನೆಯಿಂದ ಹೆಬ್ಬಾಳ್ ಮೊದಲನೇ ಹಂತದಲ್ಲಿರುವ ತಮ್ಮ ಮನೆಗೆ ಹೊರಟಿದ್ದಾರೆ.

ಈ ವೇಳೆ ಅವರು ತಮ್ಮ ಚಿನ್ನಾಭರಣವನ್ನೆಲ್ಲ ಒಂದು ಬಾಕ್ಸ್‌ನಲ್ಲಿಟ್ಟು ಆ ಬಾಕ್ಸ್ ಅನ್ನು ವ್ಯಾನಿಟಿ ಬ್ಯಾಗ್‌ನಲ್ಲಿ ಸುರಕ್ಷಿತವಾಗಿರಿಸಿದ್ದರು. ಮಗಳ ಮನೆಯಿಂದ ಬಸ್‌ನಲ್ಲಿ ಬಂದು ಒಂಟಿಕೊಪ್ಪಲಿನ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದ್ದಾರೆ. ಮತ್ತೆ ಬಸ್‌ನಲ್ಲಿ ಹೊರಟು ಮೇಟಗಳ್ಳಿಯ ಹೆಬ್ಬಾಳ್ ಆರ್ಚ್ ಬಳಿ ಇಳಿದುಕೊಂಡಿದ್ದಾರೆ. ಅಲ್ಲಿಂದ ಟಾಟಾ ಏಸ್ ವಾಹನದಲ್ಲಿ ಬಸವನಗುಡಿ ಸರ್ಕಲ್‌ಗೆ ತೆರಳಿ, ಅಲ್ಲಿ ಇಳಿದು ಮನೆಗೆ ಹೋಗಿದ್ದಾರೆ. ಮನೆಯಲ್ಲಿ ನೋಡಿದಾಗ ವ್ಯಾನಿಟಿ ಬ್ಯಾಗ್ ಜಿಪ್ ತೆರೆದಿರುವುದು ಗಮನಕ್ಕೆ ಬಂದಿದೆ.

ಬಸವನಗುಡಿ ಸರ್ಕಲ್ ಬಳಿ ಯಾರೋ ಜಿಪ್ ತೆಗೆದು ಚಿನ್ನಾಭರಣ ಇದ್ದ ಬಾಕ್ಸ್ ಕಳವು ಮಾಡಿದ್ದಾರೆ ಎಂದು ಸಂಶಯ ವ್ಯಕ್ತಪಡಿಸಿರುವ ಕಮಲ ಮೇಟಗಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಬಾಕ್ಸ್‌ನಲ್ಲಿ 32 ಗ್ರಾಂ ತೂಕದ 1 ಚಿನ್ನದ ಗುಂಡಿನ ಸರ, 4 ಗ್ರಾಂ ತೂಕದ ಚಿನ್ನದ ಉಂಗುರ, 7 ಗ್ರಾಂನ ಮತ್ತೊಂದು ಚಿನ್ನದ ಉಂಗುರ ಮತ್ತು 5 ಗ್ರಾಂ ತೂಕದ 1 ಜೊತೆ ಚಿನ್ನದ ಓಲೆ ಇದ್ದವು. ಇವುಗಳೆಲ್ಲದರ ಬೆಲೆ 3,00,000 ರೂ. ಎಂದು ಅಂದಾಜಿಸಲಾಗಿದೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಸ್ಥಾನದ ಬೀಗ ಮುರಿದು ದೇವಿಯ ತಾಳಿ, ಕಾಣಿಕೆ ಹುಂಡಿ ಕಳವು

ಮೈಸೂರು,ಏ.14(ಎಸ್‌ಪಿಎನ್)– ದೇವಸ್ಥಾನದ ಬೀಗ ಮುರಿದು ಮಾರಮ್ಮ ದೇವಿಗೆ ಧರಿಸಿದ್ದ ಮಾಂಗಲ್ಯ ಸರ ಹಾಗೂ ಕಾಣಿಕೆ ಹುಂಡಿ ಕದ್ದೊಯ್ದಿರುವ ಘಟನೆ ತಾಲೂಕಿನ ಜಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.



ಮೈಸೂರು–ಹೆಚ್.ಡಿ.ಕೋಟೆ ಮುಖ್ಯರಸ್ತೆಯ ದೊಡ್ಡಹುಂಡಿ ಗೇಟ್‌ನಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಶ್ರೀ ಮುರುಡ ಬಸವೇಶ್ವರ ದೇವಸ್ಥಾನದ ಪಕ್ಕದಲ್ಲಿನ ಮಾರಮ್ಮ ದೇವಸ್ಥಾನದಲ್ಲಿ ಈ ಘಟನೆ ನಡೆದಿದೆ. ದೇವಸ್ಥಾನದ ಮೂರು ಬಾಗಿಲುಗಳ ಬೀಗ ಮುರಿದು ಒಳನುಗ್ಗಿರುವ ಕಳ್ಳರು, ದೇವಿಗೆ ಧರಿಸಿದ್ದ ಒಂದು ಗ್ರಾಂ ತೂಕದ ಮಾಂಗಲ್ಯ ಸರ, ವರ್ಷದಿಂದ ತೆರೆಯದ ಕಾಣಿಕೆ ಹುಂಡಿ ಕದ್ದೊಯ್ದಿದ್ದಾರೆ. ದೇವಸ್ಥಾನದ ಅರ್ಚಕ ದಶವಂತಕುಮಾರ್ ಅವರು ಎಂದಿನಂತೆ ಏ.12ರಂದು ಬೆಳಗ್ಗೆ 6 ಗಂಟೆಗೆ ದೇವಸ್ಥಾನಕ್ಕೆ ಹೋದಾಗ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜನಾರ್ಧನ್ ನಿಧನ



ಮೈಸೂರು, ಏ.14– ಮೈಸೂರಿನ ಗೌರಿಶಂಕರನಗರ ನಿವಾಸಿ, ಖಾಸಗಿ ಕಂಪನಿ ಉದ್ಯೋಗಿ ಜನಾರ್ಧನ್(ಅಣಿ–48) ಅವರು ಮಂಗಳವಾರ ಬೆಳಗ್ಗೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು.

ಇವರು ಪತ್ನಿ ಶ್ರೀಮತಿ ನೇತ್ರಾ, ಪುತ್ರ ಜೀವನ್, ಸಹೋದರಿ ಕುಸುಮಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇಂದು ಸಂಜೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ವೃದ್ಧೆ ನಾಪತ್ತೆ




ಮೈಸೂರು, ಏ.14– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಹೊಸ ಆನಂದೂರು ಗ್ರಾಮದ ನಿವಾಸಿ ಕೆಂಚಮ್ಮ(65) ಅವರು ಏಪ್ರಿಲ್ 12ರಿಂದ ನಾಪತ್ತೆಯಾಗಿದ್ದಾರೆ.

ಸ್ವಲ್ಪ ಮಾನಸಿಕ ಸಮಸ್ಯೆ ಇರುವ ಅವರು ಅಂದು ಬೆಳಗ್ಗೆ 9.30ರ ಸಮಯದಲ್ಲಿ ತಮ್ಮ ಪತಿ ಚಿಕ್ಕಣ್ಣ ಅವರೊಂದಿಗೆ ಟೀ ಕುಡಿಯಲೆಂದು ಪಂಪ್‌ಹೌಸ್ ಸರ್ಕಲ್ ಬಳಿ ಹೋಗಿದ್ದಾಗ ಪತಿಗೆ ತಿಳಿಯದಂತೆ ನಾಪತ್ತೆಯಾಗಿರುವುದಾಗಿ ಅವರ ಪುತ್ರ ಪುಟ್ಟಮಾದು, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸುಮಾರು 5.2 ಅಡಿ ಎತ್ತರವಿರುವ ಕೆಂಚಮ್ಮ ಅವರು ಕಾಣೆಯಾದ ವೇಳೆ ಹಸಿರು ಸೀರೆ ಹಾಗೂ ಹಳದಿ ರವಿಕೆ ಧರಿಸಿದ್ದು, ಸ್ವಲ್ಪ ಬಗ್ಗಿ ನಡೆಯುತ್ತಾರೆ. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆಂಚಮ್ಮ ಪತ್ತೆಯಾದರೆ ಅವರ ಪುತ್ರ ಪುಟ್ಟಮಾದು(9380511103) ಅಥವಾ ಕೆಆರ್‌ಎಸ್ ಪೊಲೀಸ್ ಠಾಣೆ(08236–257233)ಯನ್ನು ಸಂಪರ್ಕಿಸಿ ಮಾಹಿತಿ ನೀಡುವಂತೆ ಕೋರಲಾಗಿದೆ.





ಹೊತ್ತಿ ಉರಿದ ಕಾರು, ಬೈಕ್; ಗಾಯಗೊಂಡ ಸವಾರ



ಮೈಸೂರು,ಏ.14(ಪಿಎಂ)– ಕಾರು ಮತ್ತು ದ್ವಿಚಕ್ರ ವಾಹನ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಎರಡೂ ವಾಹನಗಳು ಹೊತ್ತಿ ಉರಿದಿರುವ ಘಟನೆ ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಸಾಗರಕಟ್ಟೆ ಸೇತುವೆ ಸಮೀಪ ಮಂಗಳವಾರ ರಾತ್ರಿ ನಡೆದಿದೆ.

ಕೆಆರ್ ನಗರ ಕಡೆಯಿಂದ ಬಂದ ಕಾರು ಮತ್ತು ಹೊಸಕೋಟೆ ಕಡೆಯಿಂದ ಬಂದ ಬೈಕ್ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಇದರ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿಕ್ಕಿ ರಭಸಕ್ಕೆ ಎರಡೂ ವಾಹನಗಳಿಗೆ ಬೆಂಕಿ ಹೊತ್ತಿ ಉರಿದಿದ್ದು, ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಕಾರಿನ ಬ್ಯಾಟರಿಯಿಂದ ಬೆಂಕಿ ಕಾಣಿಸಿಕೊಂಡಿರುಹುದು ಎಂದು ಶಂಕಿಸಲಾಗಿದೆ. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣ ಹಾನಿಯಾಗಿಲ್ಲ. ಸ್ಥಳಕ್ಕೆ ಇಲವಾಲ ಪೊಲೀಸರು ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.









ವಿವಿಧೆಡೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ

ಅಂಬೇಡ್ಕರ್ ಚಿಂತನೆಗಳು ಶೋಷಿತ ಸಮುದಾಯಕ್ಕೆ ದಾರಿದೀಪ

ಶಾಸಕ ದರ್ಶನ್ ಧ್ರುವನಾರಾಯಣ್ ಅಭಿಪ್ರಾಯ



ನಂಜನಗೂಡಿನಲ್ಲಿ ನಡೆದ ಅಂಬೇಡ್ಕರ್ ಜಯಂತಿಯನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಂಜನಗೂಡು, ಏ.14– ಡಾ.ಬಿ.ಆರ್. ಅಂಬೇಡ್ಕರ್ ಅವರು ಸಾಮಾಜಿಕ ಅಸಮಾನತೆ ವಿರುದ್ಧ ಅಚಲ ಹೋರಾಟ ನಡೆಸಿ ಶೋಷಿತರ ಗಟ್ಟಿ ಧ್ವನಿಯಾಗಿ ನಿಂತವರು. ಅವರ ತತ್ವ, ಸಿದ್ಧಾಂತ, ಚಿಂತನೆಗಳು ಮತ್ತು ಹೋರಾಟದ ಹಾದಿ ಶೋಷಿತ ಸಮುದಾಯಗಳಿಗೆ ದಾರಿದೀಪವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಬಲಿಷ್ಠ ಸಂವಿಧಾನದ ಮೂಲಕ ಶೋಷಿತ ಸಮುದಾಯಗಳಿಗೆ ರಕ್ಷಣೆ ನೀಡಿದ್ದಾರೆ. ನಾವೆಲ್ಲರೂ ಅಂಬೇಡ್ಕರ್ ಅವರ ಮಾರ್ಗದಲ್ಲಿ ಸಾಗಿದಾಗ ಮಾತ್ರ ಅವರ ಜಯಂತಿಗೆ ಅರ್ಥ ಬರುತ್ತದೆ. ಅವರ ದಾರಿಯಲ್ಲಿ ಸಾಗಲು ಹೋರಾಟದ ಮನೋಭಾವ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜವಾಬ್ದಾರಿ ಅಗತ್ಯ. ಯುವಕರು ಸಮಾನತೆ ಮತ್ತು ನ್ಯಾಯಕ್ಕಾಗಿ ಹೋರಾಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

> “ಅಂಬೇಡ್ಕರ್ ಅವರು ಕೇವಲ ವ್ಯಕ್ತಿಯಾಗಿರದೆ, ಶಕ್ತಿಯಾಗಿದ್ದರು. ಅವರು ಶೋಷಿತ ಹಾಗೂ ಹಿಂದುಳಿದ ವರ್ಗಗಳಿಗೆ ಸಮಾನತೆ ಮತ್ತು ನ್ಯಾಯ ಕೊಡಿಸಿದ ಯುಗಪುರುಷ. ಆದರೆ ನಮ್ಮ ದುರ್ದೈವ ಸಂವಿಧಾನ ಜಾರಿಯಾಗಿ 76 ವರ್ಷ ಕಳೆದರೂ ದೇಶದಲ್ಲಿ ಜಾತೀಯತೆ ಸಂಪೂರ್ಣವಾಗಿ ನಿರ್ಮೂಲನೆಯಾಗಿಲ್ಲ. ಇದನ್ನು ತೊಡೆದು ಹಾಕಲು ಸಮಾಜದಲ್ಲಿ ಬದಲಾವಣೆ ಅಗತ್ಯವಿದ್ದು, ನಮ್ಮ ಧರ್ಮಗಳಲ್ಲಿ ಸುಧಾರಣೆಯಾಗಬೇಕಿದೆ. ಜಾತೀಯತೆ ಧರ್ಮದೊಂದಿಗೆ ಬೆಸೆದುಕೊಂಡಿರುವುದರಿಂದ, ಸಮಾನತೆ ಸಾಧಿಸಲು ಧರ್ಮದ ಸುಧಾರಣೆ ಮೊದಲ ಹೆಜ್ಜೆಯಾಗಬೇಕು. ಅಲ್ಲದೆ ಪ್ರಸ್ತುತ ವಿವಿಧ ಕ್ಷೇತ್ರಗಳಲ್ಲಿ ಸಂವಿಧಾನ ವಿರೋಧಿ ಧೋರಣೆಗಳು ಹೆಚ್ಚಾಗಿದೆ. ಇಂತಹ ಪ್ರವೃತ್ತಿ ನಿಯಂತ್ರಿಸಲು ಜನರಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ. ಸಂವಿಧಾನ ರಕ್ಷಿಸುವ ನಿಟ್ಟಿನಲ್ಲಿ ಸಂವಿಧಾನದ ಮೌಲ್ಯಗಳನ್ನು ಉಳಿಸುವ ಹೊಣೆಗಾರಿಕೆ ಪ್ರತಿಯೊಬ್ಬ ನಾಗರಿಕರದ್ದಾಗಿದೆ. – ಡಾ.ಯತೀಂದ್ರ, ವಿಧಾನ ಪರಿಷತ್ ಸದಸ್ಯ.

ಉತ್ತಮ ಸಮಾಜ ನಿರ್ಮಾಣಕ್ಕೆ ಗುಣಮಟ್ಟದ ಶಿಕ್ಷಣ ಅಗತ್ಯ. ಪೋಷಕರು ಮಕ್ಕಳಿಗೆ ಕೇವಲ ಪಠ್ಯ ವಿಷಯಗಳ ಶಿಕ್ಷಣ ನೀಡಿದರಷ್ಟೇ ಸಾಲದು ಸಾಮಾಜಿಕ ಹಾಗೂ ರಾಜಕೀಯ ಅರಿವು ಮೂಡಿಸುವ ಶಿಕ್ಷಣ ನೀಡಬೇಕು. ದೇಶದ ಸಂವಿಧಾನದ ಬಗ್ಗೆ ತಿಳುವಳಿಕೆ ಇದ್ದಾಗ ಮಾತ್ರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದರು.

ಅಂಬೇಡ್ಕರ್ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಡಾ.ಜಿ.ಸೋಮಶೇಖರ್ ಮಾತನಾಡಿದರು. ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವ ಚಿತ್ರವನ್ನು ವಿವಿಧ ಕಲಾತಂಡಗಳೊಂದಿಗೆ ಅದ್ಧೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಮಾಜಿ ಶಾಸಕ ಕೇಶವಮೂರ್ತಿ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಬಸವರಾಜು, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ರಂಗಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಮಾರುತಿ, ಮುಖಂಡರಾದ ಇಂಧನ ಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠ ನಾಯಕ, ಶಂಕರ್, ಮುಖಂಡರಾದ ನಾಗೇಶ್ ರಾಜ್, ಶಿವಣ್ಣ, ರಾಜೇಶ್ ಇತರರಿದ್ದರು.

ಸಮುದಾಯ ಭವನಗಳನ್ನು ಗ್ರಂಥಾಲಯವಾಗಿಸಲು ಕ್ರಮ

ಅಂಬೇಡ್ಕರ್ ಅರಿವು ಕೇಂದ್ರ ಉದ್ಘಾಟಿಸಿ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ



ಡಾ.ಬಿ.ಆರ್.ಅಂಬೇಡ್ಕರ್ ಅರಿವು ಕೇಂದ್ರವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ಏ.14(ಬಿಎಲ್‌ಯು)– ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಸಮುದಾಯ ಭವನಗಳನ್ನು ಗ್ರಂಥಾಲಯಗಳನ್ನಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ.

ಮೈಸೂರಿನ ಹಾರೋಹಳ್ಳಿ ಗ್ರಾಮದಲ್ಲಿ ತೆರೆದಿರುವ ಡಾ.ಬಿ.ಆರ್.ಅಂಬೇಡ್ಕರ್ ಅರಿವು ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಈ ಕಟ್ಟಡವನ್ನು 2018 ರಲ್ಲೇ ನಿರ್ಮಿಸಲಾಗಿತ್ತು. ಆದರೆ ಇದನ್ನು ಯಾರೂ ಬಳಕೆ ಮಾಡುತ್ತಿರಲಿಲ್ಲ ಎಂದರು.

ಈಗ ಈ ಕಟ್ಟಡವನ್ನು ಉತ್ತಮ ಗ್ರಂಥಾಲಯವನ್ನಾಗಿ ಪರಿವರ್ತಿಸಿ ಅಂಬೇಡ್ಕರ್ ಅರಿವು ಕೇಂದ್ರ ಎಂದು ನಾಮಕರಣ ಮಾಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗಲಿದೆ ಎಂದು ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಈ ಗ್ರಂಥಾಲಯದಲ್ಲಿ ಡಿಜಿಟಲ್ ವಿಭಾಗ, ರೈತರ ವಿಭಾಗ, ಮಹಿಳಾ ವಿಭಾಗ, ಮಕ್ಕಳ ವಿಭಾಗ ಸೇರಿದಂತೆ 5 ಭಾಗವಾಗಿ ವಿಂಗಡಿಸಲಾಗಿದೆ. ಇಲ್ಲಿ ಅಂತರ್ಜಾಲ ಸಂಪರ್ಕ ಕೂಡ ಕಲ್ಪಿಸಲಾಗಿದ್ದು, ರೈತರು ಸೇರಿದಂತೆ ಎಲ್ಲರೂ ಇದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಯಲು ಗ್ರಂಥಾಲಯದಲ್ಲಿ ಪುಸ್ತಕ ಓದಲು ಛಾವಡಿಗಳನ್ನು ನಿರ್ಮಿಸಲಾಗಿದೆ. ಓದುಗರ ಅನುಕೂಲಕ್ಕಾಗಿ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸಲಾಗಿದೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ಇಂತಹ ಹಲವು ವಿಶಿಷ್ಟ ಸೌಲಭ್ಯ ಕಲ್ಪಿಸುತ್ತಿರುವ ಹಾರೋಹಳ್ಳಿ ಗ್ರಾಮ ಪಂಚಾಯಿತಿ ಇತರೆ ಗ್ರಾಮ ಪಂಚಾಯಿತಿಗಳಿಗೆ ಮಾದರಿಯಾಗಿದೆ ಎಂದರು.

ಗ್ರಾಪಂ ವ್ಯಾಪ್ತಿಯ 13 ಅಂಗನವಾಡಿಯ 170 ಮಕ್ಕಳಿಗಾಗಿ 170 ಆಸನ, 52 ಟೇಬಲ್ ವಿತರಿಸಿದರು. ಗ್ರಾಮದವರೆ ಆದ ಪೊಲೀಸ್ ಇಲಾಖೆಯ ಅರುಣ್ ಹೆಚ್.ಜಿ. ಹಾಗೂ ಖಜಾನೆ ಇಲಾಖೆಯ ಗೋವಿಂದರಾಜು ಎನ್ ಅವರು ಗ್ರಂಥಾಲಯಕ್ಕೆ ಕುಡಿಯುವ ನೀರಿನ ಟ್ಯಾಂಕ್ ಅನ್ನು ಕೊಡುಗೆ ನೀಡಿದರು.

ಗ್ರಾಪಂ ಆಡಳಿತಾಧಿಕಾರಿ ಬಿ.ಡಿ.ಜಯರಾಮ್, ಗ್ರಾಪಂ ಅಧ್ಯಕ್ಷ ರೇವಣ್ಣ, ಉಪಾಧ್ಯಕ್ಷೆ ಜ್ಯೋತಿ, ಮಾಜಿ ಉಪಾಧ್ಯಕ್ಷ ಮೂರ್ತಿ, ಸದಸ್ಯರಾದ ನಟರಾಜು, ಚಲುವರಾಜು, ಶ್ರೀಧರ್, ಮಂಜು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿದ್ದರು.

ಜಗತ್ತಿನ ಮಹಾನ್ ನಾಯಕ ಅಂಬೇಡ್ಕರ್

ದಸಂಸ ಜಿಲ್ಲಾ ಸಂಚಾಲಕ ಕೆಂಪಯ್ಯನಹುಂಡಿ ರಾಜು



ಅಂಬೇಡ್ಕರ್ ಪ್ರತಿಮೆಗೆ ಮುಖಂಡರು ಮಾಲಾರ್ಪಣೆ ಮಾಡಲಾಯಿತು.

ತಿ.ನರಸೀಪುರ, ಏ.14– ಅಸ್ಪೃಶ್ಯತೆ ಕಾರಣಕ್ಕೆ ಕುಡಿಯಲು ನೀರು ಸಿಗದೇ, ಓದುವ ವಿದ್ಯೆ ದೂರವಾಗಿ, ಜನರು ತಮ್ಮ ಹಕ್ಕುಗಳಿಗಾಗಿ ಒದ್ದಾಟ ನಡೆಸುತ್ತಿದ್ದ ಸಂದರ್ಭವನ್ನು ಕಣ್ಣಾರೆ ಕಂಡು ತಾವೂ ಅದನ್ನು ಅನುಭವಿಸಿ ಮುಂದೆ ಶಿಕ್ಷಣ ಎಂಬ ಸಂಜೀವಿನಿಯ ಮೂಲಕವೇ ದೇಶದ ಜನರಿಗೆ ಅದರಲ್ಲೂ ಶೋಷಿತ ವರ್ಗವರಿಗೆ ಸಮಾನ ಹಕ್ಕುಗಳನ್ನು ನೀಡುವ ಕೆಲಸ ಮಾಡಿದ್ದರೇ ಅದು ಡಾ.ಬಿ.ಆರ್.ಅಂಬೇಡ್ಕರ್ ಎಂದು ದಸಂಸ ಜಿಲ್ಲಾ ಸಂಚಾಲಕ ಕೆಂಪಯ್ಯನಹುಂಡಿ ರಾಜು ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ದೇಶದ ಜನರ ಸಮಾನ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಬಾಬಾ ಸಾಹೇಬರು ವಿಶ್ವದ ಅತಿದೊಡ್ಡ ಜ್ಞಾನಿಯಾಗಿದ್ದರು. ಅಲ್ಲದೇ ಲಂಡನ್ ಗ್ರಂಥಾಲಯದಲ್ಲಿನ 50 ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಓದಿದ ದಾಖಲೆ ಈಗಲೂ ಅವರ ಹೆಸರಿನಲ್ಲಿದೆ ಎಂದರು.

ದೇಶದ ಬಹು ಜನರ ಬದುಕಿನ ಆಶಯಕ್ಕೆ ವಿರುದ್ಧವಾಗಿದ್ದ ಧಾರ್ಮಿಕ ವಿಷದ ಕಂತೆಯಾಗಿದ್ದ ಮನುಸ್ಮೃತಿ ಸುಟ್ಟ ಬಾಬಾ ಸಾಹೇಬರು ಕುಡಿಯುವ ನೀರಿಗಾಗಿ ನಡೆದ ಜಗತ್ತಿನ ಮೊದಲ ಹೋರಾಟವಾದ ಮಹಾಡ್ ಚಳುವಳಿಯ ನೇತೃತ್ವ ವಹಿಸಿದರು. ಬಹು ಜನರ ಪರವಾಗಿ, ಪ್ರಜಾಪ್ರಭುತ್ವ ಉಳಿವಿಗಾಗಿ ಬಹುದೊಡ್ಡ ಧರ್ಮಯುದ್ಧ ಮಾಡಿದ ಜಗತ್ತಿನ ಮಹಾನ್ ನಾಯಕ ಅಂಬೇಡ್ಕರ್ ಅವರ ತ್ಯಾಗವನ್ನು ದೇಶದ ಪ್ರತಿಯೊಬ್ಬರೂ ಸ್ಮರಿಸಬೇಕು. ಮುಖ್ಯವಾಗಿ ಶೋಷಿತ ವರ್ಗಗಳು ಒಗ್ಗಟ್ಟಾಗಬೇಕು ಎಂಬ ಅನಿವಾರ್ಯತೆಯನ್ನು ಅವರು ಸದಾ ಪ್ರತಿಪಾದಿಸುತ್ತಿದ್ದರು ಎಂದರು.

ಈ ವೇಳೆ ಕನ್ನಾಯಕನಹಳ್ಳಿ ಮರಿಸ್ವಾಮಿ, ಕೊಳತ್ತೂರು ಪ್ರಭಾಕರ್, ಮನೋಜ್‌ಕುಮಾರ್, ಶಿವು ರಾಚಪ್ಪ ಗೋವಿಂದರಾಜು, ಕೇಶವಮೂರ್ತಿ, ಕಾರ್ ಸ್ವಾಮಿ, ರಾಜಶೇಖರ್, ಅರ್ಜುನ್, ಮಾದಯ್ಯ ಮತ್ತಿತರಿದ್ದರು.

ದೇಶಕ್ಕೆ ಶ್ರೇಷ್ಠ ಸಂವಿಧಾನ ರಚಿಸಿದ ಡಾ.ಅಂಬೇಡ್ಕರ್

ಶಾಸಕ ಅನಿಲ್ ಚಿಕ್ಕಮಾದು



ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ಅನಿಲ್ ಪುಷ್ಪಾರ್ಚನೆ ಮಾಡಿದರು.

ಹೆಚ್.ಡಿ.ಕೋಟೆ, ಏ.14– ಶ್ರೇಷ್ಠ ಸಂವಿಧಾನ ರಚಿಸುವ ಮೂಲಕ ಉತ್ತಮ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೊಳಿಸಿ ವಿಶ್ವದಲ್ಲೇ ಭಾರತ ದೇಶಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಕೀರ್ತಿ ತಂದಿದ್ದಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಆಡಳಿತ ವ್ಯವಸ್ಥೆಯ ಅರಾಜಕತೆ ಹಾಗೂ ಆರ್ಥಿಕ ಹಿನ್ನಡೆಯಿಂದ ಭಾರತದ ಸುತ್ತಮುತ್ತಲ ದೇಶಗಳು ದಿವಾಳಿಯಾಗುತ್ತಿವೆ. ಆದರೆ ಭಾರತ ಶ್ರೇಷ್ಠ ಸಂವಿಧಾನ ಹೊಂದುವ ಮೂಲಕ ಸುಭದ್ರವಾಗಿದೆ ಎಂದರು.

ಸ್ವಾತಂತ್ರ್ಯ ನಂತರದಲ್ಲಿ ದೇಶದ ಮಹಿಳೆಯರಿಗೆ ಮತದಾನದ ಹಕ್ಕು ಸೇರಿದಂತೆ ಅನೇಕ ಸ್ಥಾನಮಾನ ನೀಡಲಾಗಿದೆ. ಹಾಗಾಗಿ ಮಹಿಳೆಯರು ಅಂಬೇಡ್ಕರ್ ಕುರಿತು ಹೆಚ್ಚು ತಿಳಿದುಕೊಳ್ಳಬೇಕು ಎಂದರು.

ನಮ್ಮ ಕುಟುಂಬಕ್ಕೆ ತಾಲೂಕಿನ ಜನತೆ 13 ವರ್ಷಗಳ ಕಾಲ ಅಧಿಕಾರ ನೀಡಿದ್ದಾರೆ. ತಾಲೂಕನ್ನು ಅಭಿವೃದ್ಧಿ ಪಡಿಸದೆ ಇದ್ದಲ್ಲಿ ಸ್ವಾಭಿಮಾನಿ ತಾಲೂಕಿನ ಜನತೆ ತಿರಸ್ಕರಿಸುತ್ತಿದ್ದರು. ಯಾರೇ ಆದರೂ ಒಂದೇ ಬಾರಿಗೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಹಂತ ಹಂತವಾಗಿ ತಾಲೂಕಿನ ಅಭಿವೃದ್ಧಿ ಕೈಗೊಳ್ಳಲಾಗುವುದು ಎಂದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಮಹೇಶ್ ಮಾತನಾಡಿ, ಪ್ರಪಂಚದ ಬಹುತೇಕ ದೇಶಗಳು ಅಂಬೇಡ್ಕರ್ ಅವರನ್ನು ಜ್ಞಾನದ ಸಂಕೇತವಾಗಿ ಒಪ್ಪಿಕೊಂಡು ಅವರ ಜನ್ಮ ದಿನಾಚರಣೆ ಆಚರಿಸುತ್ತಿದ್ದಾರೆ. ಹೀಗಾಗಿ ಅಂಬೇಡ್ಕರ್ ಅವರ ವಿಚಾರಧಾರೆಗಳು ಸಾರ್ವಕಾಲೀಕವಾಗಿವೆ. ಪ್ರತಿಯೊಬ್ಬರೂ ಅಂಬೇಡ್ಕರ್ ವಿಚಾರಧಾರೆಯನ್ನು ತಿಳಿದುಕೊಳ್ಳಬೇಕು ಎಂದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ರಾಷ್ಟ್ರ ನಾಯಕರ ಜಯಂತಿಯನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸದೇ ಅವರ ತತ್ವಾದರ್ಶಗಳನ್ನು ಪಾಲಿಸಬೇಕು. ಅಂಬೇಡ್ಕರ್ ಅವರನ್ನು ಹೊರತು ಪಡಿಸಿ ಬೇರೆಯವರು ನಮ್ಮ ದೇಶದ ಸಂವಿಧಾನ ರಚನೆ ಮಾಡಿದ್ದರೆ ನಮ್ಮ ದೇಶ ಶಾಂತಿಯಿಂದ ಇರಲು ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇಓ ಧರಣೇಶ್, ಬಿಇಓ ಸಿ.ಎನ್.ರಾಜು, ತಾಲೂಕು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವರಾಜು, ಜಿಪಂ ಮಾಜಿ ಸದಸ್ಯ ಎಚ್.ಸಿ.ಮಂಜುನಾಥ್, ಪುರಸಭಾ ಮಾಜಿ ಸದಸ್ಯ ಹೆಚ್.ಸಿ. ನರಸಿಂಹಮೂರ್ತಿ, ಎಸ್ಐ ಚಿಕ್ಕನಾಯಕ, ಕೆಂಡಗಣ್ಣೇಗೌಡ, ಪರಶಿವಮೂರ್ತಿ, ಎಂ.ಡಿ.ಮಂಚಯ್ಯ, ಚಾ.ನಂಜುಂಡ ಮೂರ್ತಿ, ಪಿ.ನಾಗರಾಜು, ಚಿಕ್ಕಣ್ಣ, ಸಣ್ಣಕುಮಾರ್, ಕಾಳಪ್ಪಾಜಿ, ಸೋಮೇಶ್, ಅಶೋಕ್, ಬಿಆರ್‌ಸಿ ಕೃಷ್ಣಯ್ಯ, ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಮೇಶ್, ನಾಗರಾಜು, ಶಿಕ್ಷಕಿ ರೂಪ ಪ್ರಮೋದ್, ಸೌಮ್ಯ ಮಂಜುನಾಥ್, ಡಾ.ರವಿಕುಮಾರ್, ಅನುಷ, ಸೌಮ್ಯ ಸೇರಿದಂತೆ ಇತರರಿದ್ದರು.

ಸಮ ಸಮಾಜಕ್ಕಾಗಿ ಶ್ರಮಿಸಿದ ಬಾಬಾ ಸಾಹೇಬರು



ತಿ.ನರಸೀಪುರ, ಏ.14– ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಿ ಸಮ ಸಮಾಜಕ್ಕಾಗಿ ಶ್ರಮಿಸಿದ ಬಾಬಾ ಸಾಹೇಬ್ ಅಂಬೇಡ್ಕರ್ ನಮಗೆಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ ಎಂದು ವರುಣ ಬಿಜೆಪಿ ಕ್ಷೇತ್ರಾಧ್ಯಕ್ಷ ನಗರ್ಲೆ ಎನ್.ಎಂ.ಮಹದೇವಸ್ವಾಮಿ ತಿಳಿಸಿದರು.

ವರುಣ ವಿಧಾನಸಭಾ ಕ್ಷೇತ್ರದ ತಾಂಡವಪುರ ಶಕ್ತಿ ಕೇಂದ್ರದಿಂದ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಸ್ವಾತಂತ್ರ್ಯ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಭಾರತದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಭಾರತದ ಸಂವಿಧಾನ ರಚಿಸುವಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಹಗಲಿರುಳು ಶ್ರಮಿಸಿದ್ದಾರೆ. ದೇಶದ ಕಟ್ಟ ಕಡೆಯ ವ್ಯಕ್ತಿಗೂ ಸಂವಿಧಾನದ ಸೌಲಭ್ಯಗಳು ತಲುಪುವಲ್ಲಿ ಶ್ರಮಿಸಿದ್ದಾರೆ ಎಂದರು.

ಅಂಬೇಡ್ಕರ್ ಅವರ ಸಾರ್ಥಕ ಬದುಕಿನ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳುವಂತಾಗಬೇಕು. ಅವರು ಶೋಷಿತ ಸಮುದಾಯಗಳ ಏಳಿಗೆಗೆ ಇಡೀ ಜೀವನವನ್ನೇ ತ್ಯಾಗ ಮಾಡಿದ್ದಾರೆ ಎಂದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸಮಾನವಾಗಿ ಬದುಕಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಈ ವೇಳೆ ತಾಂಡವಪುರ ಶಕ್ತಿ ಕೇಂದ್ರ ಅಧ್ಯಕ್ಷ ಹಡಕನಹಳ್ಳಿ ಹುಂಡಿ ಮಹದೇವಪ್ಪ, ಎಸ್‌ಟಿ ಮೋರ್ಚಾ ಬಂಚಳ್ಳಿಹುಂಡಿ ಚಂದ್ರಣ್ಣ, ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ ಹಾಗೂ ಬೂತ್ ಅಧ್ಯಕ್ಷರು, ಬಿಜೆಪಿ ಕಾರ್ಯಕರ್ತರು ಹಾಜರಿದ್ದರು.

ಅಂಬೇಡ್ಕರ್ ವಿಚಾರಧಾರೆಗಳು ಇಂದಿಗೂ ಪ್ರಸ್ತುತ



ಹುಣಸೂರು, ಏ.14– ಅಂಬೇಡ್ಕರ್ ಯಾವುದೇ ಒಂದು ವರ್ಗಕ್ಕೆ ಸೀಮಿತರಲ್ಲ. ಅವರು ರಚಿಸಿದ ಸಂವಿಧಾನವನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು. ಸಮಾಜದ ಸರ್ವ ಜನಾಂಗದ ಒಳಿತಿಗಾಗಿ ಅಂಬೇಡ್ಕರ್ ಅವರು ಹೊಂದಿದ್ದ ಚಿಂತನೆಗಳು, ವಿಚಾರಧಾರೆಗಳು ಇಂದಿಗೂ ಪ್ರಸ್ತುತ ಎಂದು ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರಾನಂದಸ್ವಾಮಿ ತಿಳಿಸಿದರು.

ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಸಮಿತಿಯಿಂದ ಗಣಪತಿ ದೇವಸ್ಥಾನ ಆವರಣದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಂಬೇಡ್ಕರ್ ಅವರು ಸರ್ವರಿಗೂ ಸಮಾನವಾಗಿ ಬದುಕು ಕಲ್ಪಿಸುವುದೇ ರಾಷ್ಟ್ರೀಯತೆ ಎಂದು ತಿಳಿದಿದ್ದರು. ಇಂತಹವರ ಬದುಕು ನಮ್ಮ ಜೀವನಕ್ಕೆ ಮಾರ್ಗ ದರ್ಶನವಾಗಬೇಕೆಂದು ಹೇಳಿದರು.

ದಸಂಸ ಜಿಲ್ಲಾ ಹೋರಾಟಗಾರ ಪುಟ್ಟಸ್ವಾಮಿ ಮಾತನಾಡಿ, ಸಂವಿಧಾನದ ಮೂಲಕ ಎಲ್ಲಾ ವರ್ಗದ ಜನರಿಗೆ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ನೀಡುವ ಮೂಲಕ ಡಾ.ಅಂಬೇಡ್ಕರ್ ಸಮಾನತೆ ಕಲ್ಪಿಸಿದ್ದಾರೆ. ಅಂಬೇಡ್ಕರ್ ಅವರ ಆಶಯಗಳನ್ನು ಇಂದಿನ ಯುವಕರು, ಜ್ಞಾನಿಗಳು ಸಮಾಜಕ್ಕೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕ್ಫ್ ಬೋರ್ಡ್ ಸದಸ್ಯ ಅಜ್ಗರ್ ಪಾಷ, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಶಿವಲಿಂಗಪ್ಪ, ಚಿನ್ನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ನಾಗೇಶರಾವ್, ಸದಸ್ಯರಾದ ಜವರನಾಯಕ, ಶಿವಣ್ಣ, ಶಿವಕುಮಾರ್, ಅಲ್ತಾಫ ಷರೀಫ್, ವಿಜೇಂದ್ರ ಇದ್ದರು.

ಸನ್ಮಾನ



ದ್ವಿತೀಯ ಪಿಯುಸಿಯಲ್ಲಿ ಶೇ.92(550)ರಷ್ಟು ಅಂಕ ಪಡೆದು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ ಹುಣಸೂರು ಮಹೇಶ್ (ಮಾಯಪ್ಪ) ಅವರ ಪುತ್ರಿ ಎಂ.ನೇತ್ರಾವತಿ ಅವರನ್ನು ತಿ.ನರಸೀಪುರ ತಾಲೂಕಿನ ಒಡ್ಗಲ್ ರಂಗನಾಥಸ್ವಾಮಿಬೆಟ್ಟ ಶ್ರೀಆಲದ ಮರದ ಬ್ರಹ್ಮಜ್ಞಾನಿ ಆಶ್ರಮ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಗೌರವಾಧ್ಯಕ್ಷ ಡಿ.ಕುಮಾರಸ್ವಾಮಿ, ಅಧ್ಯಕ್ಷ ಎಂ.ಸಿದ್ದರಾಜು, ಉಪಾಧ್ಯಕ್ಷ ಕೆ.ಪಿ.ರಂಗಸ್ವಾಮಿ, ಕಾರ್ಯದರ್ಶಿ ಹೆಚ್.ನಾಗರಾಜ್, ಖಜಾಂಚಿ ಗೋಪಿ, ಶಿವರಂಜನ್, ಮಹಾದೇವ, ಮಂಜು, ಸವಿತಾ ಇದ್ದರು.

ದೇಶಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ



ಕೈಯಂಬಳ್ಳಿಯಲ್ಲಿ ಅಂಬೇಡ್ಕರ್ ಜಯಂತಿ ನಡೆಯಿತು.

ತಿ.ನರಸೀಪುರ, ಏ.14– ದೇಶ ಕಂಡ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾದ ಡಾ.ಬಿ.ಆರ್. ಅಂಬೇಡ್ಕರ್ ದೇಶಕ್ಕೆ ನೀಡಿದ ಕೊಡುಗೆ ಅಪಾರ. ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದಾಗ ಮಾತ್ರ ದೇಶ ಭ್ರಷ್ಟಾಚಾರ ಹಾಗೂ ಅಸ್ಪೃಶ್ಯತೆಯಿಂದ ಶಾಶ್ವತವಾಗಿ ಮುಕ್ತವಾಗುತ್ತದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಕ್ರೀಡಾ ಕಲಾ ಸಂಘದ ಅಧ್ಯಕ್ಷ ಮಧು ಕೆ.ಟಿ ತಿಳಿಸಿದರು.

ತಾಲೂಕಿನ ಕೈಯಂಬಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಕ್ರೀಡಾ ಕಲಾ ಸಂಘದಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಮಾತನಾಡಿದ ಅವರು, ಕೆಲವು ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಈ ದೇಶದ ಪ್ರತಿಯೊಬ್ಬ ಪ್ರಜೆಯು ವಿದ್ಯಾವಂತರಾಗಿ ಸಂವಿಧಾನದ ಪ್ರತಿಯೊಂದು ಅಂಶಗಳನ್ನು ಅಳವಡಿಸಿಕೊಂಡು ಸಂವಿಧಾನ ಎತ್ತಿ ಹಿಡಿಯುವ ಕೆಲಸ ಮಾಡಬೇಕಾಗಿದೆ ಎಂದರು. ಮುಂಬರುವ ದಿನಗಳಲ್ಲಿ ಕೈಯಂಬಳ್ಳಿ ಗ್ರಾಮದಲ್ಲಿ ಸಂಘದಿಂದ ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಿದ್ದು, ಅದ್ಧೂರಿಯಾಗಿ ಅಂಬೇಡ್ಕರ್ ಹಬ್ಬ ನಡೆಸಲಾಗುವುದು ಎಂದರು.

ಗೌರವಾಧ್ಯಕ್ಷ ಕೆ.ವಿ.ಮೂರ್ತಿ, ಮಾರ್ಗದರ್ಶಕ ಸೋಮಣ್ಣ, ಪಿ.ನಂಜುಂಡಯ್ಯ, ಜಯಪ್ಪ, ಎ.ಮಹದೇವಯ್ಯ, ಸಚಿನ್ ಭಾರ್ಗವ್, ಮಹಾದೇವಸ್ವಾಮಿ, ಅಭಿ, ಮನುಕುಮಾರ್, ಜ್ಞಾನೇಶ್, ಸಂತೋಷ್ ಕುಮಾರ್, ಸತೀಶ್ ಕುಮಾರ್, ರಾಜುಗುಂಡ, ರಾಜೇಶ್, ಆನಂದ, ಸಾಗರ್, ಬಾಲು, ಸಂಜಯ್ ಕುಮಾರ್, ಅಕ್ಷಯ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಕೆ.ಆರ್.ನಗರ ಕ್ಷೇತ್ರದ ಜನತೆಗೆ ಮಹೇಶಣ್ಣನೇ ವಾಸಿ ಅನ್ನಿಸಿದೆ

ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾರಾ ಅಭಿಮತ



ಕೆಂಚನಹಳ್ಳಿಯಲ್ಲಿ 50ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಯಾದರು.

ಭೇರ್ಯ, ಏ.14– ಕಳೆದ 22 ವರ್ಷಗಳಿಂದ ಜನತೆ ನನ್ನನ್ನು ಶಾಸಕನಾಗಿ, ಮಂತ್ರಿ ಮಾಡಿ ನೋಡಿದ್ದಾರೆ. ಅಲ್ಲದೇ ಈಗಿನ ಶಾಸಕರ ಆಡಳಿತವನ್ನು ನೋಡಿದ್ದಾರೆ. ನೀನೇ ಉತ್ತಮ ಮಹೇಶಣ್ಣ ಎಂದು ಕ್ಷೇತ್ರದ ಜನರು ನನ್ನ ಮೇಲೆ ವಿಶ್ವಾಸವಿಟ್ಟು ಜೆಡಿಎಸ್ ಪಕ್ಷ ಸೇರುತ್ತಿದ್ದಾರೆ ಎಂದು ಮಾಜಿ ಸಚಿವ ಹಾಗೂ ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಕೆಂಚನಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡ ಕುರುಬ ಸಮುದಾಯದ 50ಕ್ಕೂ ಹೆಚ್ಚು ಮಂದಿಯನ್ನು ಜೆಡಿಎಸ್ ಶಾಲು ಹೊದಿಸುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಪ್ರಸ್ತುತ ನನ್ನ ಬಳಿ ಯಾವುದೇ ಅಧಿಕಾರವಿಲ್ಲ. ಚುನಾವಣೆಗೆ ಇನ್ನೂ 2 ವರ್ಷ ಬಾಕಿ ಇದೆ. ಆದರೂ ಜನರು ಜೆಡಿಎಸ್ ಹೆಚ್ಚಾಗಿ ಸೇರ್ಪಡೆ ಆಗುತ್ತಿದ್ದಾರೆ. ಕಾರಣ ಈಗಿನ ಶಾಸಕರ ಆಡಳಿತ ವೈಖರಿ ನೋಡಿ ಜನ ಬೇಸತ್ತಿದ್ದಾರೆ. ಬಾಚಹಳ್ಳಿ, ಕುರುಬಹಳ್ಳಿ, ಬಡಕನಕೊಪ್ಪಲು, ದೊಡ್ಡಕೊಪ್ಪಲು, ಗೇರದಡ, ಮುದುಗುಪ್ಪೆ, ದೆಗ್ಗನಹಳ್ಳಿ ಸೇರಿದಂತೆ ಅನೇಕ ಗ್ರಾಮಗಳಿಂದ ಜನರು ಜೆಡಿಎಸ್ ಪಕ್ಷ ಸೇರುತ್ತಿರುವುದಕ್ಕೆ ಯಾವುದೇ ಆಸೆ–ಆಮಿಷವೊಡ್ಡಿಲ್ಲ. ಕಂಟ್ರಾಕ್ಟ್ ಕೊಡಲು ಅಧಿಕಾರ ಇಲ್ಲ. ಹೀಗಾಗಿ ಜನರು ಚುನಾವಣೆ ಸಮಯದಲ್ಲಿ ಪಕ್ಷಕ್ಕೆ ಬನ್ನಿ ಎಂದರೂ ಕೇಳುತ್ತಿಲ್ಲ. ಆದ್ದರಿಂದ ಪಕ್ಷಕ್ಕೆ ಬರುವವನ್ನು ಸೇರ್ಪಡೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಪಡೆದ 27 ಸಾವಿರ ಲೀಡ್ ತುಳಿದು 8 ಸಾವಿರ ಲೀಡ್ ಪಡೆದುಕೊಂಡಿದೆ. ಹೀಗಾಗಿ ಆಡಳಿತ ಪಕ್ಷದ ಶಾಸಕರ ವಿರುದ್ಧ ಜನರು ಅಸಮಾಧಾನಗೊಂಡಿದ್ದಾರೆ ಎಂದರು.

ಸಚಿವನಾಗಿದ್ದ 11 ತಿಂಗಳ ಅವಧಿಯಲ್ಲಿ ತಾಲೂಕಿನ ಕೆಲವು ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಿಸಲು ಸಾಧ್ಯವಾಗಿಲ್ಲ ಆದರೆ ಕೆಂಚನಹಳ್ಳಿ ಗ್ರಾಮದ ಮುಖ್ಯರಸ್ತೆ, ಡೈರಿ, ನ್ಯಾಯಬೆಲೆ ಅಂಗಡಿ, ನಿರಂತರ ವಿದ್ಯುತ್ ಸೇರಿದಂತೆ ಮುಕ್ಕನಹಳ್ಳಿ ಕೆರೆಯಿಂದ ಏತ ನೀರಾವರಿ ಯೋಜನೆ ಮಾಡಿದ್ದೇನೆ ಎಂದರು.

ಏತ ನೀರಾವರಿ ಯೋಜನೆ ಮೋಟರ್ ಕೆಟ್ಟಿದೆ ನೀರು ಹರಿಸುತ್ತಿಲ್ಲ ಎಂದು ಜನರು ತಿಳಿಸಿದಾಗ, ಸಾ.ರಾ.ಮಹೇಶ್ ಪ್ರತಿಕ್ರಿಯಿಸಿ ಅವರ ತಾಕತ್ತು ಆ ರೀತಿ ಇದೆ. ನಿಮ್ಮವರೇ ಸಿಎಂ ಆಗಿದ್ದಾರೆ. ನೀವು ಸದಾ ಯಾವಾಗಲೂ ಅವರ ಜೊತೆಯಲ್ಲಿರುತ್ತೀರಾ. ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷಗಳು ಕಳೆದರೂ ಶ್ರೀರಾಮ ಸಕ್ಕರೆ ಕಾರ್ಖಾನೆ ಏಕೆ ಪ್ರಾರಂಭಿಸಲಿಲ್ಲ ಎಂದು ಶಾಸಕರನ್ನು ಪರೋಕ್ಷವಾಗಿ ಪ್ರಶ್ನೆ ಮಾಡಿದರು.

ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ಎಂದಿಗೂ ಜಾತಿ ರಾಜಕಾರಣ ಮಾಡಿಲ್ಲ. ಶಾಲಾ ಮಕ್ಕಳಿಗೆ ನೋಟ್ ಪುಸ್ತಕ, ಆಂಬುಲೆನ್ಸ್, ವಿಮೆ, ಪಡಿತರ ಕಿಟ್, ಕೋವಿಡ್‌ನಿಂದ ಮೃತಪಟ್ಟ ಕುಟುಂಬಕ್ಕೆ ಆರ್ಥಿಕ ನೆರವು ಸೇರಿದಂತೆ ಸೋಮವಾರ, ಶುಕ್ರವಾರ ಜನತಾ ದರ್ಶನ ಎಲ್ಲಾ ಕಾರ್ಯಕ್ರಮಗಳನ್ನು ಜಾತಿ ನೋಡಿ ನಾನು ಮಾಡಿಲ್ಲ ಎಂದರು.

ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆ

ಇದೇ ವೇಳೆ ಕಾಂಗ್ರೆಸ್ ಕಾರ್ಯಕರ್ತರಾದ ಜೆ.ಸತೀಶ್, ಕೆ.ಮಹದೇವ, ರೇವಣ್ಣ, ಅಶೋಕ, ಕೆ.ಪಿ.ಮಹದೇವ, ನಿಂಗರಾಜೇಗೌಡ, ಚಂದ್ರ, ಯೋಗೇಶ್, ಜವರೇಗೌಡ, ರಮೇಶ, ಸುರೇಶ, ಕೆ.ಪಿ.ರಂಗೇಗೌಡ, ಮುತ್ತು, ದೇವರಾಜು, ತಮ್ಮೇಗೌಡ, ಸತೀಶ್, ಯೋಗೇಶ್ ಕೆ.ಹೆಚ್.ರಘು, ದಿವಾಕರ, ಲೋಕೇಶ್, ಮಹದೇವ್, ಶೇಖರ್, ದೊಡ್ಡಯ್ಯ, ಮಹದೇವ್, ಸುನೀಲ್, ರಾಜು, ವಿನಯ್ ಕುಮಾರ್, ಮಹೇಶ್, ದಿಲೀಪ್, ಕಿರಣ, ಪ್ರಸನ್ನ, ಶಿವಣ್ಣ, ದರ್ಶನ್ ಸೇರಿದಂತೆ ಐವತ್ತು ಮಂದಿ ಜೆಡಿಎಸ್ ಸೇರ್ಪಡೆಗೊಂಡರು.

ಈ ವೇಳೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಜಿಪಂ ಮಾಜಿ ಸದಸ್ಯ ಅಮಿತ್ ವಿ.ದೇವರಹಟ್ಟಿ, ತಾಲೂಕು ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಯೋಗೇಶ್, ಮಧು, ತಾಪಂ ಮಾಜಿ ಅಧ್ಯಕ್ಷ ನಾಗಣ್ಣ, ತಂದ್ರೆ ರವಿ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಂ, ಮುಖಂಡರಾದ ಜಲೇಂದ್ರ, ಬಿ.ಹೆಚ್.ಮಹದೇವ್, ಅನೀಫ್ ಗೌಡ, ಕೃಷ್ಣೇಗೌಡ, ಗುರುಪ್ರಸಾದ್, ನ್ಯಾಯಬೆಲೆ ಮಂಜಣ್ಣ, ಡೈರಿ ರವೀಶ್, ತನು, ಲೋಕೇಶ್, ಗ್ರಾಪಂ ಮಾಜಿ ಅಧ್ಯಕ್ಷೆ ಉಮಾದೇವಿ, ಯ. ಮಲ್ಲೇಗೌಡ, ಮಹದೇವ್, ರವಿ, ಶೇಖರ್, ಬಿ.ಎಸ್.ನಟರಾಜ್, ಲಾಲೂ ಸಾಬ್, ಪ್ರಕಾಶ್, ಎಸ್.ಎಲ್.ಮಂಜುನಾಥ್ ಇದ್ದರು.

ಬೆಳ್ಳಿಯಮ್ಮ ನಿಧನ



ಹುಣಸೂರು, ಏ.14– ನಗರದ ಸಿಡಿಪಿಓ ಇಲಾಖೆ ನಿವೃತ್ತ ನೌಕರ ಸಚಿನ್ ಪ್ರಕಾಶ್ ಅವರ ತಾಯಿ ಬೆಳ್ಳಿಯಮ್ಮ(89) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 10.30ಕ್ಕೆ ನಗರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಅಸ್ಪೃಶ್ಯತೆ ಆಚರಿಸುವ ಮನಸ್ಥಿತಿ ಈಗಲೂ ಇದೆ

ಲೇಖಕಿ ಪ್ರೊ. ಎಂ.ಎಸ್.ಆಶಾದೇವಿ ವಿಷಾದ


ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರದಲ್ಲಿ ನಡೆದ ಡಾ.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪಿಹೆಚ್.ಡಿ ಪದವೀಧರರು, ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳಲ್ಲಿ ರ್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಏ.14(ಎಂಟಿವೈ)– ಸಂವಿಧಾನದ ಬಲದಿಂದ ರಾಜಕೀಯ ಜವಾಬ್ದಾರಿಗೆ ಹೆಚ್ಚು ಒತ್ತು ಕೊಟ್ಟು, ಅದರಲ್ಲಿ ಹೆಚ್ಚಾಗಿ ಪಳಗಿರುವ ನಾವು ಸಾಮಾಜಿಕ, ಸಾಂಸ್ಕೃತಿಕ ಜವಾಬ್ದಾರಿಯನ್ನು ಅಷ್ಟಾಗಿ ಪರಿಗಣಿಸದ ಕಾರಣ ಈಗ ಪರ್ಯಾಯ ಸಾಂಸ್ಕೃತಿಕ ಜಗತ್ತು ಕಟ್ಟುವ ಅನಿವಾರ್ಯತೆ ಇದೆ ಎಂದು ಲೇಖಕಿ ಪ್ರೊ.ಎಂ.ಎಸ್. ಆಶಾದೇವಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕಗಳ ಸಹಯೋಗದಲ್ಲಿ ಮಾನಸ ಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ 'ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಸಾಮಾಜಿಕ ಪರಿವರ್ತನೆ' ವಿಷಯ ಕುರಿತು ಮಾತನಾಡಿದ ಅವರು, ವರ್ತಮಾನದ ಸಾಂಸ್ಕೃತಿಕ, ಸಾಮಾಜಿಕ ವೈರುಧ್ಯಗಳ ಕಾಲದಲ್ಲಿ ಹಲವು ಮಾದರಿಗಳನ್ನು ನೋಡುತ್ತಿದ್ದೇವೆ. ಸಾಮಾಜಿಕ, ಸಾಂಸ್ಕೃತಿಕವಾಗಿ ಈಗಲೂ ಅಸ್ಪಶ್ಯತೆ ಆಚರಣೆಯಲ್ಲಿದೆ. ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್ ಹಾಗೂ ಇನ್ನಿತರರು ನಮಗೆ ತೋರಿದ ಬೆಳಕು ಇದ್ದರೂ, ಅಸ್ಪೃಶ್ಯತೆ ಆಚರಿಸುವ ಮನಸ್ಥಿತಿ ಇಂದಿಗೂ ಇದೆ ಎಂದರು.

ಸಾಂಸ್ಕೃತಿಕ ಜವಾಬ್ದಾರಿ ನಿಭಾಯಿಸುವಲ್ಲಿ ತೊಡಕು ಎದುರಾಗಿದೆ. ಈ ತೊಡಕನ್ನು ಅಂಬೇಡ್ಕರ್ ಅವರು ನೈತಿಕ ಜ್ಞಾನದ ಬಲದಿಂದ ಎದುರಿಸಿದರು. ಅವರಿಗೆ ನೈತಿಕ ಬಲ ಇಲ್ಲದಿದ್ದರೆ ಸಾಂಸ್ಕೃತಿಕ ಜವಾಬ್ದಾರಿ ನಿಭಾಯಿಸಲು ಸಾಧ್ಯವಿರಲಿಲ್ಲ. ಬಹು ಜನರ ಮೂಲ ಪರಂಪರೆ ಸ್ಥಾಪಿಸಬೇಕಾದ ಸಾಂಸ್ಕೃತಿಕ ಜವಾಬ್ದಾರಿ ಇದೆ. ನಾನು ನನ್ನ ಪರಂಪರೆಯಂತೆ ಇರುತ್ತೇನೆ ಎಂಬ ಎಚ್ಚರ ಬರಬೇಕು. ಬಹುತ್ವ ಭಾರತದಲ್ಲಿ ಹೊರಗಿಟ್ಟ ಬಹುತೇಕರು ಪ್ರಾಕೃತಿಕ ಹಕ್ಕು ಸ್ಥಾಪಿಸಬೇಕಿದೆ. ನಾನು ಹೆಚ್ಚು ಅಲ್ಲ ನೀನು ಕಮ್ಮಿ ಅಲ್ಲ ಅನ್ನುವ ತಿಳುವಳಿಕೆಯೇ ಸಾಂಸ್ಕೃತಿಕ ರಾಜಕಾರಣವಾಗಿದೆ. ಅಂಬೇಡ್ಕರ್ ನಮ್ಮೊಳಗೆ ಬರಬೇಕು. ಜಾತಿ ಪ್ರಶ್ನೆ, ವರ್ಗ ಪ್ರಶ್ನೆಯನ್ನು ಸಂವೇದನೆಯಲ್ಲಿ ಪ್ರತಿಭಟಿಸಬೇಕು. ನಾವು ಪ್ರಾಮಾಣಿಕರಾಗಲಿಲ್ಲ ಎಂದರೆ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಎಚ್ಚರಿಸಿದರು.

ಬಸವಣ್ಣ ದೇವರಾಜ ಅರಸು, ಕುವೆಂಪು, ಪಿ.ಲಂಕೇಶ್, ದೇವನೂರು ಮಹಾದೇವ ಇವರು ಪಟ್ಟಭದ್ರ ಹಿತಾಸಕ್ತಿಯನ್ನು ಪೋಷಿಸಲಿಲ್ಲ. ಬಸವಣ್ಣ, ಅಂಬೇಡ್ಕರ್ ಆಯ್ಕೆ ಬಂದರೆ ನಾನು ಅಂಬೇಡ್ಕರ್ ಆಯ್ಕೆ ಮಾಡುತ್ತೇನೆ ಎಂದು ಲಂಕೇಶ್ ಹೇಳಿದ್ದಾರೆ.


ಅಂಬೇಡ್ಕರ್ ಭಾರತಕ್ಕೆ ಬರದಿದ್ದರೆ ದೇಶ ಕತ್ತಲೆಯಲ್ಲಿರುತ್ತಿತ್ತು. ಅಂಬೇಡ್ಕರರ ಪ್ರಜ್ಞಾ ಪ್ರಭಾವ ನಮ್ಮೆಲ್ಲರಲ್ಲೂ ಹರಿಯುತ್ತಿದೆ. ಅಂಬೇಡ್ಕರ್ ಅವರ ಮೂಲಭೂತ ಪಾಠವನ್ನು ಕಲಿಯಬೇಕು. ಅವರು ಯಾರನ್ನೂ ದ್ವೇಷಿಸಲಿಲ್ಲ. ಧರ್ಮ, ಜಾತಿ ಹೆಸರಿನಲ್ಲಿ ಒಡೆಯಲಿಲ್ಲ. ಅಂಬೇಡ್ಕರರನ್ನು ಅನುಕರಣೆ ಮಾಡಲು ನಾವೆಲ್ಲರೂ ಅನುಭವಿಗಳು. ಅವರ ಸಂವೇದನೆ, ಜ್ಞಾನದ ಹಸಿವು, ರಾಜೀ ಇಲ್ಲದ ಬದುಕು ಅನುಸರಿಸಲು ಮುಂದಾಗುತ್ತಿಲ್ಲ ಎಂದು ತಿಳಿಸಿದರು.

ಇದೆ ವೇಳೆ ಪಿಹೆಚ್.ಡಿ ಪದವೀಧರರು, ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳಲ್ಲಿ ರ್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ವಹಿಸಿದ್ದರು. ಕುಲಸಚಿವರಾದ ಎಂ.ಕೆ. ಸವಿತಾ, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು, ಪರಿಶಿಷ್ಟ ಜಾತಿ ಮತ್ತು ಪರಿಶಿಷ ಪಂಗಡಗಳ ವಿಶೇಷ ಘಟಕದ ಉಪ ಕುಲಸಚಿವ ಕೆ.ಎನ್. ಮಂಜುನಾಥ, ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ್ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಕಾಯಿಟ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಟೆರರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಗ್ಯಾಂಗ್ ಆಫ್ ಯುಕೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕ್ಯಾಲೆಂಡರ್ (ಕ)	4 ಪ್ರದರ್ಶನಗಳು

ಪಶು ವೈದ್ಯೆ ಸಾವಿಗೆ ಕಾರಣವಾಗಿದ್ದ ತ್ಯಾವರೆಕೊಪ್ಪ ಮೃಗಾಲಯದ ನೀರಾನೆ ಹಂಸಿಣಿ ಸಾವು




ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ ಸಿಂಹ ಧಾಮದಲ್ಲಿ ತರಬೇತಿ ನಿರತ ಪಶು ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ಸಾವಿಗೆ ಕಾರಣವಾಗಿದ್ದ ನೀರಾನೆ 'ಹಂಸಿಣಿ'. ಮಂಗಳವಾರ ಅನಾರೋಗ್ಯದಿಂದ ಮೃತಪಟ್ಟಿದೆ. ಗರ್ಭಾಶಯದ ಸೋಂಕಿನಿಂದ ಬಳಲುತ್ತಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವಿಗೀಡಾಗಿದೆ.

ಮೃತ ಹಂಸಿಣಿ ಗರ್ಭ ಧರಿಸಿದ್ದು, ಎಂಟು ತಿಂಗಳ ಗರ್ಭಧಾರಣೆಯ ಅವಧಿಯು ಮಾರ್ಚ್ ಮಧ್ಯಭಾಗದಲ್ಲೇ ಪೂರ್ಣಗೊಂಡಿದ್ದರೂ, ಅದರಲ್ಲಿ ಪ್ರಸವದ ಯಾವುದೇ ಲಕ್ಷಣಗಳು ಕಂಡುಬಂದಿರಲಿಲ್ಲ. ಭ್ರೂಣ ಹೊಟ್ಟೆಯಲ್ಲಿಯೇ ಮೃತಪಟ್ಟಿತ್ತು ಕಳೆದ ಕೆಲವು ದಿನಗಳಿಂದ ಆಹಾರ ಸೇವನೆ ಕಡಿಮೆ ಮಾಡಿ ಮಂದಗತಿಯಲ್ಲಿ ವರ್ತಿಸುತ್ತಿದ್ದ ಕಾರಣ, ಏಪ್ರಿಲ್ 10ರಂದು ಮೈಸೂರಿನ ಕರ್ನಾಟಕ ಮೃಗಾಲಯ ಪ್ರಾಧಿಕಾರದ ವನ್ಯಜೀವಿ ಪಶುವೈದ್ಯರ ತಂಡ ನೀರಾನೆಯ ಆರೋಗ್ಯದ ತಪಾಸಣೆ ನಡೆಸಿತ್ತು

ಈ ವೇಳೆ ಅದರ ಗರ್ಭಾಶಯದಲ್ಲಿ ಗಂಭೀರವಾದ ಸೋಂಕು ಇರುವುದು ಪತ್ತೆಯಾಗಿತ್ತು. ಗರ್ಭಾಶಯದ ಒಳಗಿನ ಭ್ರೂಣದ ಸಾವಿನಿಂದ ಈ ಸೋಂಕು ಉಂಟಾಗಿದ್ದು, ಇದು ಬಹು ಅಂಗಾಂಗಗಳ ವೈಫಲ್ಯಕ್ಕೆ ಕಾರಣವಾಗಿ ನೀರಾನೆ ಮೃತಪಟ್ಟಿದೆ ಎಂದು ಹುಲಿ ಸಿಂಹ ಧಾಮದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಅಮರಾಕ್ಷರ ತಿಳಿಸಿದ್ದಾರೆ.

ಹುಟ್ಟುಹಬ್ಬದ ಶುಭ ಹಾರೈಕೆ


ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅವರ ಹುಟ್ಟುಹಬ್ಬದ ಪ್ರಯುಕ್ತ ದೇವರಾಜ ಬ್ಲಾಕ್ ಅಧ್ಯಕ್ಷ ಡಿ. ನಾಗಭೂಷಣ್, ರವಿ, ಗುರು, ಮಂಜು, ಕಾಂಜಿ, ಮಧು, ರಘು, ಪ್ರಮೋದ, ಸಂಜಯ್, ಬಸಪ್ಪ, ಲೋಕಿ, ರಮೇಶ್, ಸ್ವಾಮಿ, ಅಪ್ಪು, ಹರ್ಷಿತ್ ಮತ್ತು ಸ್ಥಳೀಯ ನಿವಾಸಿಗಳು ಅವರನ್ನು ಅಭಿನಂದಿಸಿ, ಶುಭಾಶಯ ಕೋರಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ


ಮೈಸೂರಿನ ಜ್ಯೋತಿನಗರದಲ್ಲಿರುವ ಜಿಲ್ಲಾ ಪೊಲೀಸ್ ಸಶಸ್ತ್ರ ಮೀಸಲು ಪಡೆ ಕಚೇರಿ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ನಿವೃತ್ತ ಆರ್‌ಪಿಐ ಮಾರಯ್ಯ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆರ್‌ಎಸ್‌ಐಗಳಾದ ಕೃಷ್ಣ, ರಂಗಸ್ವಾಮಿ, ಮಹದೇವ ಐದೊಡ್ಡಿ, ಎಆರ್‌ಎಸ್‌ಐ ವಸಂತ್, ನವೀನ್ ಅನಿಲ್, ಅಮಿತ್, ಭಾನುಪ್ರಕಾಶ್, ವಿಜಯ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.


ಮೈಸೂರಿನ ಬಂಡಿಪಾಳ್ಯ ಸಮೀಪದ ರಿಂಗ್ ರಸ್ತೆ ಸರ್ಕಲ್‌ನಲ್ಲಿ ನಡೆದ ಡಾ. ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಡಿ.ದರ್ಶನ್, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕಾರ್ಯಕ್ರಮದ ಆಯೋಜಕ ಕೆಪಿಸಿಸಿ ಸಂಯೋಜಕ ವಿಜಯಕುಮಾರ್ ಎಸ್ ಬಂಡಿಪಾಳ್ಯ, ಗ್ರಾ. ಪಂ. ಮಾಜಿ ಅಧ್ಯಕ್ಷ ರವಿ, ಮಾಜಿ ಸದಸ್ಯ ಉಮೇಶ್, ಯುವ ಮುಖಂಡರಾದ ಮಹೇಶ್, ಮಂಜು, ನಿರಂಜನ್, ಕೀರ್ತಿರಾಜ್, ರಕ್ಷಿತ್, ಪ್ರೀತಮ್, ಪ್ರಜ್ವಲ್, ಮಹೇಶ್, ರಂಗಪ್ಪ ಇನ್ನಿತರರು ಇದ್ದರು.

ಗಾಂಧಿನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯ ವರ್ಣರಂಜಿತ ಮೆರವಣಿಗೆ


ತೆರೆದ ವಾಹನದಲ್ಲಿ ಇರಿಸಲಾಗಿದ್ದ ಅಂಬೇಡ್ಕರ್ ಅವರ ಪ್ರತಿಮೆಗೆ ಡಾ.ಹೆಚ್.ಸಿ.ಮಹದೇವಪ್ಪ ಪುಷ್ಪಾರ್ಚನೆ ಮಾಡುವ ಮೂಲಕ 'ಭೀಮೋತ್ಸವ' ಮೆರವಣಿಗೆಗೆ ಚಾಲನೆ ನೀಡಿದರು.

ಮೈಸೂರು, ಏ.14(ವಿವಿಹೆಚ್)– ಭಾರತ ಭಾಗ್ಯವಿದಾತ, ಸಂವಿಧಾನ ಶಿಲ್ಪಿ, ಅಸ್ಪೃಶ್ಯತೆ ನಿವಾರಕ ಭೀಮರಾಯನಿಗೆ ಜೈ... ಜೈ.. ಜೈ ಭೀಮ್ ಘೋಷ ವಾಕ್ಯಗಳೊಂದಿಗೆ ಬಾನಂಗಳದಲ್ಲಿ ನೀಲಿ ಭಾವುಟಗಳು ರಾರಾಜಿಸುತ್ತಾ, ಕೈಯ್ಯಲ್ಲಿ ಮೊಂಬತ್ತಿ ಹಿಡಿದು, ಸಂಜೆ ಕತ್ತಲಿನಲ್ಲಿ ಬೆಳಕಿನ ಚಿತ್ತಾರ ಮೂಡಿಸುತ್ತಾ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರುತ್ತಿತ್ತು.

ಡಾ.ಬಿ.ರ್.ಅಂಬೇಡ್ಕರ್ ಅವರ 135ನೇ ಜಯತ್ಯೋತ್ಸವ ಪ್ರಯುಕ್ತ ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿನಗರ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಆಯೋಜಿಸಿದ್ದ 'ಭೀಮೋತ್ಸವ' ಅದ್ದೂರಿ ಮೆರವಣಿಗೆಯಲ್ಲಿ ಕಂಡುಬಂದ ದೃಶ್ಯಾವಳಿಗಳು.

ಪ್ರತಿವರ್ಷದಂತೆ ಈ ಬಾರಿಯೂ ಬಹಳ ಸಡಗರ–ಸಂಭ್ರಮದಿಂದ ಭೀಮೋತ್ಸವ ಮೆರವಣಿಗೆ ನಡೆಯಿತು. ತೆರೆದ ವಾಹನದಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ನಿಲ್ಲಿಸಿ, ಅದರ ಹಿಂದೆ ಅಶೋಕ ಚಕ್ರ ರಚಿಸಿ, ಕೇಸರಿ, ಬಿಳಿ ಹಾಗೂ ಹಸಿರು ಹೂಗಳಿಂದ ಅಲಂಕರಿಸಲಾಗಿತ್ತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು.

ಈ ವೇಳೆ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಮುಖ್ಯ ಸಚೇತಕರಾದ ಎನ್.ರವಿಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಎಂಎಲ್‌ಸಿ ಶಿವಕುಮಾರ್, ಮಾಜಿ ಮೇಯರ್ ಸಂದೇಶ ಸ್ವಾಮಿ, ಪಾಲಿಕೆ ಮಾಜಿ ಸದಸ್ಯೆ ಅಶ್ವಿನಿ ಶರತ್, ಆರ್. ಸಿದ್ದಪ್ಪಣ್ಣ, ಗೋಪಿ, ಕಾಂಗ್ರೆಸ್ ಮುಖಂಡ ಶಿವಕುಮಾರ್, ಡಾ.ಪಶುಪತಿ, ಸಂಘದ ಅಧ್ಯಕ್ಷ ಶರತ್, ಪುಟ್ಟರಂಗ ಸ್ವಾಮಿ ಸೇರಿದಂತೆ ಗಾಂಧಿನಗರ ನಿವಾಸಿಗಳು ಉಪಸ್ಥಿತರಿದ್ದರು.

ಗಾಂಧಿ ನಗರದ ಅಂಬೇಡ್ಕರ್ ವೃತ್ತದಿಂದ ಆರಂಭವಾದ ಮೆರವಣಿಗೆಯಲ್ಲಿ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ ಭಾಗಿಯಾಗಿದ್ದರು. ಡೊಳ್ಳು ಕಂಸಾಳೆ, ನಗಾರಿ, ಛಂಡೆ ಸೇರಿದಂತೆ ಹಲವಾರು ಕಲಾ ತಂಡಗಳು ಮೆರವಣಿಗೆಗೆ ಮತ್ತಷ್ಟು ಮೆರಗು ನೀಡಿದವು. ಮಕ್ಕಳು, ಯುವಕರು, ವಿಶೇಷವಾಗಿ ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಜೊತೆಗೆ ನಗಾರಿ ಸದ್ದಿಗೆ ಸ್ಟೆಪ್ ಹಾಕಿದರು.

ಅಂಬೇಡ್ಕರ್ ಅವರ ಸ್ತಬ್ಧಚಿತ್ರ ಹಾಗೂ ವಿವಿಧ ಸಾಂಸ್ಕೃತಿಕ ಕಲಾತಂಡ ಒಳಗೊಂಡ ಮೆರವಣಿಗೆ ಬಡಾವಣೆಯ ಅಂಬೇಡ್ಕರ್ ವೃತ್ತದಿಂದ, ಗಾಂಧಿ ನಗರದ ಮಾರುತಿ ವೃತ್ತ, ರಬ್ಬಾನಿ ಮಸೀದಿ ವೃತ್ತ ಹಾಗೂ ಗಾಂಧಿ ನಗರದ ಪ್ರಮುಖ ರಸ್ತೆಯ ಮೂಲಕ ಗಾಂಧಿ ನಗರದ ಮೈದಾನದಲ್ಲಿ ಮುಕ್ತಾಯಗೊಂಡಿತು.

ಇದಕ್ಕೂ ಮೊದಲು ಸಂಜೆ 5 ಗಂಟೆಯಲ್ಲಿ ಪುರ ಭವನದ ಅಂಬೇಡ್ಕರ್ ಪ್ರತಿಮೆ ಬಳಿಯಿಂದ ಗಾಂಧಿ ನಗರದ ಅಂಬೇಡ್ಕರ್ ವೃತ್ತದವರೆಗೆ ಬೈಕ್ ರ್‍ಯಾಲಿ ಆಯೋಜಿಸಲಾಗಿತ್ತು. ಶಾಸಕ ಟಿ.ಎಸ್. ಶ್ರೀವತ್ಸ, ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸುಮಾರು 135 ಬೈಕ್‌ಗಳು ಪುರಭವನದಿಂದ ಹೊರಟು, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ, ಗಾಂಧಿ ವೃತ್ತ, ಸಯ್ಯಾಜಿ ರಾವ್ ವೃತ್ತ, ಆಯುರ್ವೇದ ಆಸ್ಪತ್ರೆ ವೃತ್ತ, ಇರ್ವಿನ್ ರಸ್ತೆ, ಅಶೋಕ ರಸ್ತೆ, ವೀರನಗೆರೆ ಮೂಲಕ ಅಂಬೇಡ್ಕರ್ ವೃತ್ತ ತಲುಪಿದವು.

ಜೊತೆಗೆ ಗಾಂಧಿನಗರದ ಮನೆ ಮಂಚಮ್ಮ ದೇವಾಲಯದ ಮುಂಭಾಗ 135 ಯುವಕರಿಂದ ರಕ್ತದಾನ ಮಾಡುವ ಮೂಲಕ ಭೀಮೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.


ಗಾಂಧಿನಗರದ ಅಂಬೇಡ್ಕರ್ ವೃತ್ತದಲ್ಲಿ ಸೇರಿದ್ದ ಜನಸ್ತೋಮ.


ಪಿಎಚ್‌ಡಿ ಪದವಿ



ಮೈಸೂರು ಏ.14– ಡಾ.ಎಂ.ಪಿ. ಸದಾಶಿವ ಅವರ ಮಾರ್ಗದರ್ಶನದಲ್ಲಿ ಸಂತೋಷ್.ಸಿ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಆಂಗ್ಲ ಭಾಷೆಯಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಾ. ಬಿ.ಆರ್.ಅಂಬೇಡ್ಕರ್ ತತ್ವ ಸಿದ್ಧಾಂತ ಪಾಲನೆಯಿಂದ ಸಮ ಸಮಾಜ ನಿರ್ಮಾಣ

ಮಹಾರಾಣಿ ವಿಜ್ಞಾನ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ.ಅಬ್ದುಲ್ ರಹಿಮಾನ್ ಅಭಿಮತ


ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಕಾಲೇಜಿನ ರೇಷ್ಮೆ ಕೃಷಿ ವಿಭಾಗದ ಅಧ್ಯಾಪಕ ಎಂ.ಎನ್ ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಏ.14(ಎಂಟಿವೈ)– ಡಾ.ಅಂಬೇಡ್ಕರ್ ತತ್ವ ಸಿದ್ಧಾಂತ ಪಾಲಿಸಿದಾಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರಾಂಶುಪಾಲ ಡಾ.ಎಂ.ಅಬ್ದುಲ್ ರಹಿಮಾನ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಆಡಿಯೋ ವಿಶ್ವ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ. ಅಂಬೇಡ್ಕರ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಾತಿ, ವರ್ಗ, ತಾರತಮ್ಯ ರಹಿತ ಸಮ ಸಮಾಜ ನಿರ್ಮಾಣ ಅಂಬೇಡ್ಕರ್ ಅವರ ಕನಸಾಗಿತ್ತು. ಅದನ್ನು ಅವರು ಸಂವಿಧಾನದಲ್ಲಿ ಪ್ರತಿಪಾದಿಸಿದರು. ಸಂವಿಧಾನದಲ್ಲಿರುವ ತತ್ವಗಳು ಸಮ ಸಮಾಜದ ಆಶಯಗಳನ್ನು ಹೊಂದಿದೆ. ಹಾಗಾಗಿ, ಸಂವಿಧಾನದ ತತ್ವಗಳನ್ನು ಪಾಲಿಸಿದರೆ ಮಾತ್ರವೇ ಅಂಬೇಡ್ಕರ್ ಅವರ ಕನಸಿನ ಸಮ ಸಮಾಜ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ತಾರತಮ್ಯಕ್ಕೆ ಒಳಗಾಗಿ ನೋವು ಹಾಗೂ ಕಷ್ಟಗಳನ್ನು ಎದುರಿಸಿ ಜೀವನದಲ್ಲಿ ಉನ್ನತವಾದುದನ್ನು ಸಾಧಿಸಿದ ಅಂಬೇಡ್ಕರ್ ಅವರು, ಅಂತಹುದೇ ಕಷ್ಟಗಳನ್ನು ದೇಶದ ಜನರು ಅನುಭವಿಸಬಾರದು ಎನ್ನುವ ಕಾರಣಕ್ಕಾಗಿ ಸಂವಿಧಾನದ ಕರಡು ಸಮಿತಿ ಅಧ್ಯಕ್ಷರಾಗಿ ಹಲವಾರು ಅವಕಾಶಗಳನ್ನು ವಂಚಿತ ಸಮುದಾಯಕ್ಕೆ ನೀಡಿದರು. ಹೀಗೆ ನೀಡುವ ಮೂಲಕ ಶೋಷಣೆಗೆ ಒಳಗಾದ ಸಮುದಾಯಗಳು ಮುಖ್ಯವಾಹಿನಿಗೆ ಬರಲು ಅವಕಾಶ ಕಲ್ಪಿಸಿದರು. ಇದನ್ನು ಅರಿತು ಎಲ್ಲ ಸಮುದಾಯಗಳು ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕಾಲೇಜಿನ ರೇಷ್ಮೆ ಕೃಷಿ ಪ್ರಾಧ್ಯಾಪಕ ಎಂ.ಎನ್. ಶ್ರೀನಿವಾಸ್ ಮಾತನಾಡಿ, ಸಂವಿಧಾನದ ಆಶಯಗಳು ಸಂಪೂರ್ಣ ಜಾರಿಯಾದರೆ ಸಮಾನತೆ ಸಾಧಿಸಬಹುದು. ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷ ಕಳೆದಿದ್ದರೂ ಇಂದಿಗೂ ಅಸಮಾನತೆ ತಾಂಡವವಾಡುತ್ತಿದೆ. ಗ್ರಾಮೀಣ ಭಾಗದಲ್ಲಿ ಇಂದಿಗೂ ತಾರತಮ್ಯ ಇದೆ. ಅಂದರೆ, ಸಮಾನತೆ ಇಂದಿಗೂ ಸಾಧ್ಯವಾಗಿಲ್ಲ. ಇದು ತೊಲಗಬೇಕು ಎಂದರೆ ಸಂವಿಧಾನ ಸಂಪೂರ್ಣ ಜಾರಿಯಾಗಬೇಕು. ಸಮಾಜ ಇಬ್ಬಗೆಯ ನೀತಿ ಅನುಸರಿಸುತ್ತದೆ. ಆಡುವ ನುಡಿ, ಆಚರಣೆ ಮಾಡುವ ರೀತಿ ಎರಡೂ ಭಿನ್ನ, ಇದು ಜಾತೀಯತೆಯನ್ನು ದ್ವಿಗುಣಗೊಳಿಸುತ್ತಿದೆ. ಹಾಗಾಗಿ, ಮೂಲಭೂತವಾಗಿ, ಮನುಷ್ಯನ ಮನಪರಿವರ್ತನೆ ಆಗಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಶೈಕ್ಷಣಿಕ ಡೀನ್ ಪ್ರಾಧ್ಯಾಪಕ ಶ್ರೀಪಾದ್, ಕಾಲೇಜು ವಿದ್ಯಾರ್ಥಿ ಸಂಘದ ಉಪಾಧ್ಯಕ್ಷೆ ಜಿ.ಕೀರ್ತನಾ, ಪತ್ರಾಂಕಿತ ವ್ಯವಸ್ಥಾಪಕರಾದ ಆರ್.ಮೀನಾಕ್ಷಿ ಮಾತನಾಡಿದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕ ಗೋವಿಂದರಾಜು, ಖಜಾಂಚಿ ಎನ್.ಬೃಂದಾ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಎ.ಬೃಂದಾ, ವಿದ್ಯಾರ್ಥಿ ಸಂಸತ್ತಿನ ಎಸ್.ಪೂಜಾ ಎಸ್, ತೇಜಸ್ವಿನಿ ಹೆಚ್.ವಿ, ನವ್ಯಶ್ರೀ ಎನ್, ಮಮತಾ ಎಂ ಯತ್ನಟ್ಟಿ, ಜರೀನಾ ಜೆ,ಅಮೃತಾ ಟಿ.ಎಚ್, ಸಂಜನಾ ಮತ್ತು ಸಂಜನಾ, ಆಫ್ರಿನ್, ಎನ್.ಸಿ.ಸಿ, ಎನ್‌ಎಸ್‌ಎಸ್, ರೆಂಜರ್ಸ್, ಕ್ರೀಡೆ ಪದಾಧಿಕಾರಿಗಳು, ಅಧ್ಯಾಪಕರು ಅಧ್ಯಾಪಕೇತರ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಅಧ್ಯಾಪಕ ಡಾ. ರಮೇಶ ಕೆ. ಎಲ್ ಅಂಬೇಡ್ಕರ್ ಕುರಿತು ಗೀತೆ ಹಾಡಿದರು. ಕ್ರೀಡಾ ಕಾರ್ಯದರ್ಶಿ ಲಕ್ಷ್ಮೀ ಕೆ. ಎಸ್ ಕಾರ್ಯಕ್ರಮ ನಿರೂಪಿಸಿದರು. ರಮ್ಯಾ ಡಿ, ಸ್ವಾಗತಿಸಿದರು, ಪೂಜಿತಾ ಜೆ ವಂದಿಸಿದರು.


ಕೆ.ಬಿ.ನಾಗೇಶ್
ರಾಜ್ಯ ಪ್ರಧಾನ ಕಾರ್ಯದರ್ಶಿ
ಜೆಡಿಎಸ್ ಯುವ ಘಟಕ
ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷರು ಹಾಗೂ
ಗ್ರಾಮ ಪಂಚಾಯಿತಿ ಸದಸ್ಯರಾದ
ಶ್ರೀ ಇ.ಪಿ.ರವಿ
ಹುಟ್ಟುಹಬ್ಬದ ಶುಭಾಶಯಗಳು
VISMAYA
ADVERTISERS
8050302424
ಶುಭಕೋರುವವರು: ಮಾತೃಶ್ರೀ ಗ್ರೂಪ್ಸ್, ಹೆಬ್ಬಾಳ್, ಮೈಸೂರು


Happy
Birthday
ಗುಂಗ್ರಾಲ್ ಛತ್ರ ಹಾಗೂ ಯಲಚಹಳ್ಳಿ ಗ್ರಾಮ ಪಂಚಾಯಿತಿ
ಸದಸ್ಯರು, ಮಾಜಿ ಅಧ್ಯಕ್ಷರು ಹಾಗೂ ಮಾಜಿ ಉಪಾಧ್ಯಕ್ಷರಾದ
ಶ್ರೀ ಇ.ಪಿ. ರವಿ
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ಸಿದ್ದು & ಕಾಳಪ್ಪ ಸ್ನೇಹ ಬಳಗ